ಎ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 286ರ ಅನುಸಾರವಾಗಿ ಈ ಸಭೆ ಅನುಸೂಚಿತ ಜಾತಿ ಹಾಗೂ ಅನುಸೂಚಿತ ವರ್ಗಗಳ ಕಲ್ಯಾಣ ಸಮಿತಿಗೆ 15 ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಏ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 288ರ ಅನುಸಾರವಾಗಿ ಈ ಸಭೆ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಮಿತಿಗೆ 13 ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಐ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 370(2) ರ ಅನುಸಾರವಾಗಿ ಸದನ ಸಮಿತಿಗೆ 12 ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಒ) 1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ 21(1) (14)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಬೆಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್‌ಗೆ 5 ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಓ) 1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ 21(1) (14)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕರ್ನಾಟಕ ವಿಶ್ವವಿದ್ಯಾನಿಲಯದ ಸೆನ್‌ಟ್‌ಗೆ 5 ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಔ) 1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ 21(1) (14)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕುವೆಂಪು ವಿಶ್ವವಿದ್ಯಾನಿಲಯದ ಸೆನ್‌ಟ್ಟ್‌ಗೆ 5 ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಉಪಾಧ್ಯಕ್ಷರು : ಎಲ್ಲಾ ಪ್ರಸ್ತಾವನೆಗಳು ಮಂಡಿಸಲ್ಪಟ್ಟಿದವು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮುಂದುವರೆದೆ ಚರ್ಚೆ

+ಶ್ರೀ ಎಂ.ವೀರಪ್ಪ ಮೊಯಿಲಿ (ಕಾರ್ಕಳ) : ಮಾನ್ಯ ಉಪಾಧ್ಯಕ್ಷರೇ, ಅರಣ್ಯ ಇಲಾಖೆಯ ಮಾನ್ಯ ಸಚಿವರು ಇಲ್ಲಿ ಇದ್ದಾರೆ. ಈಗ ಎನಾಗಿದೆ ಅಂದರೆ ಅರಣ್ಯ ಉಳಿಸಬೇಕು. ಕರ್ನಾಟಕ ರಾಜ್ಯದಲ್ಲಿ ಶೇಕಡ 27 ಪರ್ಸೆಂಟ್ ಅರಣ್ಯ ಈಗಲೂ ಇದೆ. ಬಹುಶಃ ರಾಷ್ಟ್ರದಲ್ಲಿ ಸರಾಸರಿ ಶೇಕಡ 16 ಪರ್ಸೆಂಟ್ ಅರಣ್ಯ ಇದೆ. ಈಗ ಪ್ರಶ್ನೆ ಎನು ಎಂದು ಹೇಳಿದರೆ ಇವತ್ತು ಕೆಲವು ಸಮಸ್ಯೆಗಳನ್ನು ನಾವು ತಮ್ಮ ಗಮನಕ್ಕೆ ತಂದಾಗ ಸ್ವತಹಃ ಸಂದರ್ಶನ ನೀಡಿದ್ದೀರಿ. ವಿಷಯಗಳನ್ನು ಅರಿತಿದ್ದೀರಿ ಅದಕ್ಕೆ ಸರಿಯಾದಂತಹ ಒಂದು ಪರಿಹಾರವನ್ನು ಸಹ ತರಬೇಕೆಂದು ಹೇಳಿ, ತಾವು ಆಲೋಚನೆ ಮಾಡಿದ್ದಕ್ಕೆ ನಾನು ವಿಶೇಷವಾದಂತಹ ಅಭಿನಂದನೆಯನ್ನು ಸಹ ನಾನು ಸಲ್ಲಿಸುತ್ತೇನೆ. ಆದರೆ ಅರಣ್ಯ ಇಲಾಖೆಯ

ಕುದುರೆಮುಖ ಉದ್ಯಾನವನ ಎಂದು ಏನು ಇದೆ ಅದರ ವಿಚಾರದಲ್ಲಿ ಅಧ್ಯಕ್ಷರೇ, It is governed under Wild Life Protection Act 1972 ಅದರ ಪ್ರಕಾರ Declaration of Sanctuaries. This is under Sec.18. "The State Government, may by Notification, declare its intention to constitute any area other than the area comprised with any reserve forest or territorial waters as sanctuary if it considers that such area is of adequate ecological, faunal, floral, geomorphalogical, natural or geographical consequences for the purpose of protecting propagating or developing wildlife or its environment."

This is only with regard to the intention. ಆ ಇಂಟೆಂಷನ್ ನೋಟಿಫಿಕೇಷನ್ ಮಾಡಿದ ಕೂಡಲೇ ಅದು sancturaryಆಗುವುದಿಲ್ಲ. There are certain other formalities which will have to be followed. The intention I was told- in 1982, some years back or two decades back .... ಆ ಇಂಟೆಂಷನ್ ಅನ್ನು ಸೆಕ್ಷನ್ 18 ಮೇಲೆ ಎಕ್ಸ್‌ಪ್ರೆಸ್ ಮಾಡಿದ್ದೆವು. ಎಕ್ಸ್‌ಪ್ರೆಸ್ ಮಾಡಿದ ಮೇಲೆ sec. 19 will have to be followed: collector todetermine the rights. When a Notification has been issued under Sec.18, the Collector should enquire into and determine the existence, nature and extent of rights or any person in or land comprised within the limits of sancturary". Sec.21: Proclamation by the Collector:- when a Notification is issued under Sec18 the Collector shall publish in the regional language in every town and every village, in or in the neighbourhood of the area comprised therin, proclamation shall specify as nearly as possible .... Sec.22: Enquiry by collector: sec.23: powers of Collector. Sec. 24 Acquisition Rights. ಅದು ಯಾವ ತರಹ ಮಾಡಬೇಕು ಎಂದು ಹೇಳಿ ,Sec.24(5)Acqusition Proceedings, ಅದನ್ನುನೀವು ಬಿಡಬಹುದು. ಅಥವಾ ತೆಗೆದುಕೊಳ್ಳಬಹುದು. ಸೆಕ್ಷನ್ 25(5) ಅಕ್ವಿಸಿಷನ್ ಪ್ರೊಸಿಡಿಂಗ್ಸ್‌ಸೆಕ್ಷನ್ 26(ಎ) ಡಿಕ್ಲೇರೇಷನ್as a sanctuary ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಇಲಾಖೆಯಲ್ಲಿ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಆದರೆ ಕೆಲವು ಅಧಿಕಾರಿಗಳಿಗೆ ಏನಾಗಿದೆ ಅಂದರೆ ಇವತ್ತು ಅವರಿಗೆ ಯಾವ ಕಾನೂನು ಅನ್ವಯವಾಗುವುದಿಲ್ಲ. ಯಾವ ವೈಲ್ಡ್ ಲೈಫ್ ಸೆಂಚುರಿ ಇಲ್ಲ.ಅವರದ್ದೇ ವೈಲ್ಡ್ ಲೈಫ್. They work in a forest and they have become junglemen. ನೀವು ಕಾನೂನು ಪ್ರಕಾರ ರಕ್ಷಣೆ ಕೊಡಬೇಕು ಜನರಿಗೆ ಹೊರತು ಕಾನೂನು ಬಿಟ್ಟು ಕಾನೂನು ಮುರಿದು ರಕ್ಷಣೆ ಕೊಡಬೇಕೆಂದು ನಾವು ಹೇಳುತ್ತಿಲ್ಲ. We are more concerned about it. It is Adivasis and Tribals, till today, have been protecting the forest. It is only the Forest Department people who destroy the

property.

ಇದನ್ನು ದಯಮಾಡಿ ತಾವು ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಎಷ್ಟು ಜನ ಆದಿವಾಸಿಗಳು ಟ್ರೈಬಲ್‌ಗಳು ಇದ್ದಾರೆ. ಅವರು ಅಲ್ಲಿ ವಾಸವಾಗಿದ್ದಾರೆ ಎಂಬುದನ್ನು ನೋಡಬೇಕು. ಸೆಕ್ಷನ್ 18ರ ಪ್ರಕಾರ ಇಂಟೆಂಷನ್ ಡಿಕ್ಲೇರ್ ಆದ ಕೂಡಲೇ ನೀವು ಅವರನ್ನು ಎಬ್ಬಿಸುವುದಕ್ಕೆ ಪ್ರಾರಂಭ ಮಾಡುವುದೆಂದರೆ I am demanding an enquiry ತಾವು ಸೆಕ್ಷನ್ 18 ಮಾಡಿ ಸೆಕ್ಷನ್ 20 ಸೆಕ್ಷನ್ 21, 22, 23, 24, 25, 26 ಎಲ್ಲಾ ಸೆಕ್ಷನ್‌ಗಳನ್ನು ಓವರ್‌ಲುಕ್ ಮಾಡಿ ಸುಪ್ರೀಂ ಕೋರ್ಟ್‌ಗೆ ಫಾಲ್ಸ್ ಅಫಿಡವಿಟ್ ಕೊಟ್ಟು ಅರಣ್ಯ ಇಲಾಖೆಯವರು ಬಹುಶಃ ತಮ್ಮ ಗಮನಕ್ಕೆ ಇದನ್ನು ತಂದಿರಲಿಕ್ಕೆ ಇಲ್ಲ. ಸುಪ್ರೀಂ ಕೋರ್ಟ್‌ಗೆ ಏನು ಹೇಳಿದ್ದಾರೆ ಅಂದರೆ ರೆಟ್ರಾಸ್‌ಫೆಕ್ಟೀವ್ ಎಫೆಕ್ಟ್ ಕೊಟ್ಟರು. under Sec. 26A or whatever it may be, ನೋಟಿಫಿಕೇಷನ್ ಕೊಟ್ಟರು. ಸುಪ್ರೀಂ ಕೋರ್ಟ್‌ಗೆ ಸಬ್‌ಮಿಟ್ ಮಾಡಿದರು. ಇವತ್ತು ಒಂದು ದೊಡ್ಡ ಅರಾಜಕತೆ ಉಂಟು ಮಾಡಿದರು. ಮಾನ್ಯ ಸದಸ್ಯರಾದ ವಸಂತಬಂಗೇರರವರೂ ಸಹ ಇದ್ದಾರೆ. ಇವತ್ತು ದೊಡ್ಡ ಅರಾಜಕತೆ ಉಂಟಾಗಿದೆ. ಇವತ್ತು ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಮತ್ತು ಮಂಗಳೂರು ಜಿಲ್ಲೆಯಲ್ಲಿ ಅವತ್ತು ಇದು ಉಂಟಾಗಿದೆ. I want all the papers to be placed here. ಪರಮಾಧಿಕಾರ ಈ ಸದನಕ್ಕೆ ಇದೆ. ಆ ಸೆಕ್ಷನ್ 18ರ ನೋಟಿಫಿಕೇಷನ್ ಕೊಡಿ. ಅವರು ಫೈನಲ್ ನೋಟಿಫಿಕೇಷನ್ ಯಾವಾಗ ಮಾಡಿದ್ದೀರಿ ಅದನ್ನು ಕೊಡಿ. ಯಾವ ನೋಟಿಫಿಕೇಷನ್ ಕೆಳಗಡೆ ಅಧಿಕಾರ ಕೊಟ್ಟಿದ್ದೀರಿ ಅದನ್ನು ಕೊಡಿ. ಯಾವ ಅಬ್‌ಜೆಕ್ಷನ್ ಬಂದಿದೆ ಅದನ್ನು ಕೊಡಿ. All these papers will have to be placed before this House. A Joint House Committee should go into those papers, inspect those areas and these officers who have played fraud on the people, on the enactment, will have to be punished. I know that it is all done without the knowledge of the cabinet, Without the knowledge of the Ministers, without the knowledge of the Chief Minister, without the knowledge of this House. Please, in future, in the guise of showing a big face, I am a big protector of the forests, this psychophancy among the officers to defraud the people should be faulted to. ತಾವು ಇದನ್ನು ಒಂದು ನಿದರ್ಶನವಾಗಿ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ತಾವು ದಯಮಾಡಿ ನೋಡಿ. ತಾವು ಉತ್ತರ ಕೊಡುವಾಗ we want a Joint House committee to be constituted. All the papers should be placed here for the scrutiny of this House, for the scrutiny of the people of the State. ಸುಪ್ರೀಂ ಕೋರ್ಟ್‌ಗೆ ಹೋಗಿ ಅಲ್ಲಿ ಅವರ ಸ್ಕಿನ್ ಉಳಿಸುವುದಕ್ಕೆ ಅವರು ಮಾಡಿದಂತಹ ತಪ್ಪಿಗೆ ಇವತ್ತು ನಿಮ್ಮನ್ನೆಲ್ಲಾ ಭಾಗಿ ಮಾಡುತ್ತಿದ್ದಾರೆ. otherwise, I will don my lawyers coat and argue before the Supreme Court. I have taken a decision. This kind a of fraud cannot be played by the officers against the people. We are the ones to protect the forests, but

not to destroy the people, not to destroy the forests. ಆಮೇಲೆ ರಿಸರ್ವ್ ಫೆರೆಸ್ಟ್‌ನಲ್ಲಿ ಕೂಡ ಹಾಗೆ. ಇವತ್ತು ಅವರಿಗೆ ಒಂದು ರೀತಿಯ dictatorial ಅಧಿಕಾರ ಬಂದಿದೆ. ಜನಗಳ ಮೇಲೆ ಅನುಕಂಪ ಬಿಡಿ. ಅವರಿಗೆ ದಕ್ಕತಕ್ಕಂಥ ಹಕ್ಕನ್ನು ಪ್ರೊಟೆಕ್ಟ್ ಮಾಡುವುದಕ್ಕೆ ನಾವೆಲ್ಲಾ ಇದ್ದೇವೆ. ತಮಗೆ ಗೊತ್ತಿದೆ ರಿಸರ್ವ್ ಫರೆಸ್ಟ್‌ನಲ್ಲಿ ಕೂಡ ಒಂದು ನಮ್ಮ ನಂಬರ್‌ನಲ್ಲಿ ಒಂದು ಸಾವಿರ ಎಕರೆ ಇದ್ದರೆ ಅದರಲ್ಲಿ 50 ಎಕರೆ ಮಾತ್ರ ರಿಸರ್ವ್ ಫಾರೆಸ್ಟ್ ಇರುತ್ತದೆ. ಅವರು ಏನು ಮಾಡುತ್ತಾರೆ ಇಡೀ ಒಂದು ಸಾವಿರ ಎಕರೆಯಲ್ಲಿರತ್ಕಂಥ ಜನರನ್ನು ಎಬ್ಬಿಸಲಿಕ್ಕೆ ಪ್ರಯತ್ನ ಮಾಡುತ್ತಾರೆ. ಒಂದು ಚಾರಾ ವಿಲೇಜ್ ಎಂಬುದು ಕಾರ್ಕಳ ತಾಲ್ಲೂಕಿನಲ್ಲಿದೆ. ಅಲ್ಲಿ ಬರೀ 50 ಎಕರೆ ಮಾತ್ರ ರಿಸರ್ವ್ ಫಾರೆಸ್ಟ್‌ಗೆ ಸೇರಿದ್ದು, ಆದರೆ ಆದು ಡಿವಿಜನ್ ಆಗಿಲ್ಲ. ಸರ್ವೆ ಯಾವುದೋ ಕಾಲದಲ್ಲಿ ಆಗಿದೆ. ಅನೇಕ ರೀತಿಯಲ್ಲಿ ಇವತ್ತು ರಿಸರ್ವ್ ಫಾರೆಸ್ಟ್‌ನಲ್ಲಿ ಕೂಡ ತಮಗೆ ಗೊತ್ತಿದೆ ಸಿ ಅಂಡ್ ಡಿ ಲ್ಯಾಂಡ್ ಎಂದು ಫಾರೆಸ್ಟ್‌ಗೆ ಹ್ಯಾಂಡ್ ಒವರ್ ಮಾಡಿದರು. ಅದನ್ನು ಆಮೇಲೆ ಬ್ಲಾಂಕೆಟ್ ಆರ್ಡ್‌ರ್ ಮೂಲಕ ವಿತ್‌ಡ್ರಾ ಮಾಡಿದರು. ಅದು ಈಗ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಬಂದಿದೆ. ಅದನ್ನು ಜಿಲ್ಲಾಧಿಕಾರಿಗಳು ಇನ್ಸ್‌ಪೆಕ್ಟ್ ಮಾಡಿದ ಮೇಲೆ ಆ ಜಾಗವನ್ನು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಕೊಡಬೇಕು. ಆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಡೀಮಾರ್ಕೆಟ್ ಮಾಡಿ ಜಿಲ್ಲಾಧಿಕಾರಿಗಳು ಯಾವುದನ್ನು ಕೊಟ್ಟಿಲ್ಲ. ಸಿ ಅಂಡ್ ಡಿ ಲ್ಯಾಂಡ್‌ಗಳನ್ನು ಇನ್ಸ್‌ಪೆಕ್ಟ್ ಮಾಡಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಕೊಟ್ಟೇ ಇಲ್ಲ. ತಾವು ನೋಡಿ ಬೇಕಾದರೆ ಬರೀ ಪೇಪರ್‌ನಲ್ಲಿ. ಒಮ್ಮೆ ಬ್ಲಾಂಕೇಟ್ ಆರ್ಡರ್ ಮೂಲಕ ಫಾರೆಸ್ಡ್‌ಗೆ ಕೊಟ್ಟರು. ಆಮೇಲೆ ಬ್ಲಾಂಕೆಟ್ ಆರ್ಡರ್ ಪ್ರಕಾರ ಸಿ ಅಂಡ್ ಡಿ ಲ್ಯಾಂಡ್ ಕೊಟ್ಟಿದ್ದು ಕಂಪ್ಲೀಟ್ ವಿತ್‌ಡ್ರಾ ಆಗಿದೆ. ಅದನ್ನು ಪುನಃ ಯಾವಾಗ ಕೊಟ್ಟಿರಿ? ಯಾವಾಗ ನೋಟಿಫಿಕೇಶನ್ ಆಯಿತು? ಎಲ್ಲಿ ಸರ್ವೆ ಆಗಿದೆ. ಎಲ್ಲಿ ಡಿಮಾರ್ಕೇಷನ್ ಆಗಿದೆ. ದಯಮಾಡಿ ಅದನ್ನು ಆಲೋಚನೆ ಮಾಡಬೇಕು. ಇದರಲ್ಲಿ ಕೂಡ ಫ್ರಾಡ್ ಆಗಿದೆ. ಇವತ್ತು ಜನಗಳ ಮೇಲೆ ಸಮಾಧಿ ಮಾಡಿ ಸವಾರಿ ಮಾಡತಕ್ಕಂಥ ಏನು ಧೋರಣೆ ಇದೆ ಅಧಿಕಾರಿಗಳದ್ದು this, we will have to put halt to. otherwise I will have to say you have no political will to govern the State.

DR. M.P.KARKI : They have become tyrants....

SRI.M.VEERAPPA MOILY: They have become tyrants.

ತಾವು ಹಿರಿಯ ಸಚಿವರು ಇದ್ದೀರಿ. You will have to put a halt to this kind of a thing committed on the people. ದಯಮಾಡಿ ವಿಚಾರವನ್ನು ಮಾಡಬೇಕು. ಆಮೇಲೆ ಸಿ ಅಂಡ್ ಡಿ ಲ್ಯಾಂಡ್ ಮತ್ತು ಸೋಷಿಯಲ್ ಫಾರೆಸ್ಟ್ರಿ ಲ್ಯಾಂಡ್ ಸೋಷಿಯಲ್ ಫಾರೆಸ್ಟ್ ರೆವಿನ್ಯೂ ಲ್ಯಾಂಡ್‌ನಲ್ಲಿ ಆಗಿರುತ್ತದೆ. ರೆವಿನ್ಯೂ ಲ್ಯಾಂಡ್‌ನಲ್ಲಿಅದ ಕೂಡಲೇ ಆ ಸೋಷಿಯಲ್ ಫಾರೆಸ್ಟ್ರಿ ಲ್ಯಾಂಡ್‌ಗಳನ್ನು ಡಿ.ಸಿ.ಯವರು ಇನ್ಸ್‌ಪೆಕ್ಟ್ ಮಾಡಿ ಹ್ಯಾಂಡ್‌ಓವರ್ ಮಾಡಬೇಕು. ಅದನ್ನು ಮಾಡಿದ ಕೂಡಲೇ ಅದು ನಮ್ಮ ಲ್ಯಾಂಡ್ ಫಾರೆಸ್ಟ್‌ನವರು ಅದರ ಮೇಲೆ ಅಧಿಕಾರ ಪ್ರಭುತ್ವ ಸ್ಥಾಪನೆ ಮಾಡುವುದಕ್ಕೆ ನೋಡುತ್ತಾರೆ. ಮಾನ್ಯ ಅಧ್ಯಕ್ಷರೇ, ಹಿಂದೆ ಎಲ್ಲಾ ರೆವಿನ್ಯೂ ಲ್ಯಾಂಡ್‌ನ್ನು ಪಂಚಾಯಿತಿ ಕಾಡು ಎಂದು ಮಾಡುತ್ತಿದ್ದರು ಅದು ರೆವಿನ್ಯೂ ಲ್ಯಾಂಡ್ ...

ಶ್ರೀ ಯು ಆರ್ ಸಭಾಪತಿ : ಮಾನ್ಯ ಅಧ್ಯಕ್ಷರೇ, ಇಷ್ಟೊಂದು ಪ್ರಮುಖವಾದ ವಿಚಾರ

ಮಾತನಾಡುವಾಗ ಅಧಿಕಾರಿಗಳು ಯಾರೂ ಇಲ್ಲ. ಅವರು ಬೈಕಾಟ್ ಏನಾದರೂ ಮಾಡಿದ್ದಾರೆಯೇ ನಿನ್ನೆ ಸಹ ನಾವು ಹೇಳಿದ್ದೇವೆ. ಅವತ್ತು ಒಬ್ಬರೇ ಒಬ್ಬರು ಅಧಿಕಾರಿಗಳು ಇದ್ದಾರೆ. ಮಂತ್ರಿಗಳು ಯಾರೂ ಇಲ್ಲ.ಒಬ್ಬರು ಮಾತ್ರ ಇದ್ದಾರೆ. ಅಧಿಕಾರಿಗಳು ಬರಬಾರದು ಎಂದು ಏನಾದರೂ ಸೂಚನೆ ಕೊಟ್ಟಿದ್ದಾರೆ ಯೇ? ಇದಕ್ಕೆ ಉತ್ತರ ಯಾರು ಕೊಡುವವರು. ದಯಮಾಡಿ ಅಧಿಕಾರಿಗಳನ್ನು ಕರೆಸಿ. ಮಾಜಿ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ. ಬಹಳ ಗಂಭೀರವಾದ ವಿಚಾರ ಇಲ್ಲಿ ಚರ್ಚೆಯಾಗುತ್ತಿದೆ.

ಶ್ರೀ ಸಿ.ಎಂ. ಲಿಂಗಪ್ಪ : ಜೊತೆಗೆ ಇವತ್ತು ಪ್ರಶ್ನೋತ್ತರ ಕೂಡ ಆಗಬೇಕಾಗಿತ್ತು. ಈ ಸರ್ಕಾರ ಈ ಸದನವನ್ನು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ(ಶಿಕಾರಿಪುರ):- ಮಾನ್ಯ ಮಾಜಿ ಮುಖ್ಯಮಂತ್ರಿಯವರು ಹಾಗೂ ಒಬ್ಬ ಪ್ರಮುಖ ಪಕ್ಷದ ನಾಯಕರು ಸದನದಲ್ಲಿ ಮಾತನಾಡುವಂಥ ಕಾಲದಲ್ಲಿ ಅಧಿಕಾರಿಗಳು ಇಲ್ಲ ಎಂದು ಹೇಳಿದರು ಮಂತ್ರಿಮಂಡಲದ ಸದಸ್ಯರೂ ಕೂಡ ಮೊದಲನೇ ಸಾಲಿನಲ್ಲಿ ಒಬ್ಬರು ಕುಳಿತಿದ್ದಾರೆ , ಹಿಂದಿನ ಸಾಲುಗಳಲ್ಲಿ ಒಬ್ಬರು ಕುಳಿತಿದ್ದಾರೆ. 50 ಜನ ಮಂತ್ರಿಗಳಿದ್ದು ಸದನದಲ್ಲಿ ಅವರು ಕೆಲವರಾದರೂ ಉಪಸ್ಥಿತರಿರುವುದು ಬೇಡವೇ? ಇದನ್ನು ನಾವು ಪ್ರತಿಭಟಿಸಿ ವಾಕ್ ಔಟ್ ಮಾಡುತ್ತೇವೆ. ಮಂತ್ರಿಗಳನ್ನು ತಾವು ಕರೆಸಿ ನಂತರ ಶುರು ಮಾಡೋಣ. ಇಲ್ಲದಿದ್ದರೆ ಇದಕ್ಕೆ ಮಹತ್ವ ಹಾಗೂ ಗಂಭೀರತೆ ಎನ್ನುವುದು ಇರುವುದಿಲ್ಲ. ಮಂತ್ರಿಗಳು ಇಲ್ಲಿ ಬಾರದಿದ್ದರೆ ಅಧಿಕಾರಿಗಳು ಹೇಗೆ ಬರುತ್ತಾರೆ ?ಅಧಿಕಾರಿಗಳನ್ನು ಇಲ್ಲಿ ಕೂರಿಸಿಕೊಂಡು ಮಂತ್ರಿಗಳು ಇದ್ದರೆ ಅದು ಸರಿ ಹೋಗುತ್ತದೆ. ಹೀಗೆ ನಡೆದರೆ ನಾವು ಸದನದಿಂದ ಏನು ನಿರೀಕ್ಷೆ ಮಾಡುವುದು? ನಾವು ಹೀಗೆ ಪ್ರತಿಭಟನೆ ಮಾಡುವುದಿಲ್ಲ. ಆದರೂ ಕೂಡ ಒಬ್ಬ ಮಾಜಿ ಮುಖ್ಯಮಂತ್ರಿಯವರು ಗಂಭೀರವಾದಂಥ ವಿಚಾರಗಳನ್ನು ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಹೀಗೆ ಅಗೌರವ ತೋರುವುದು ಸರಿಯಲ್ಲ. ನಿಮ್ಮ ಮಂತ್ರಿಗಳು ತಮ್ಮ ಬೇರೆ ಗೊಂದಲದಲ್ಲಿ ಇದ್ದು ಸದನಕ್ಕೆ ಬಾರದಿದ್ದರೆ ಇಲ್ಲಿ ಯಾವ ಮಹತ್ವ ಬರುತ್ತದೆ?

ಶ್ರೀ ಡಿ. ಮಂಜುನಾಥ (ಅರಣ್ಯ ಸಚಿವರು):- ಮಾನ್ಯ ಮೋಯಿಲಿಯವರು ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ವಿಷಯಗಳನ್ನು ಹೇಳುತ್ತಾ ಇದ್ದಾರೆ ....

ಶ್ರೀ ಯು.ಆರ್. ಸಭಾಪತಿ : ನಿಮಗೆ ಮಾಹಿತಿಗಳನ್ನು ಕೊಡದೇ ಅಧಿಕಾರಿಗಳೇ ವ್ಯವಹಾರ ಮಾಡುತ್ತಿದ್ದಾರೆ .

ಶ್ರೀ ಮಲ್ಲಿಕಾರ್ಜುನ ಖರ್ಗೆ(ವಿರೋಧ ಪಕ್ಷದ ನಾಯಕರು): ಇದು ಡಿಮ್ಯಾಂಡ್ ಮೇಲೆ ಮಾತನಾಡತಕ್ಕಂಥಾದ್ದು ಅಲ್ಲ. ಇಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುತ್ತಿದೆ. ಇಂಥ ಸಂದರ್ಭದಲ್ಲಿ ಇಂಥಾದ್ದೇ ಇಲಾಖೆ ವಿಚಾರಗಳು ಬರುತ್ತವೆ ಎಂದು ಇರುವುದಿಲ್ಲ. ಯಾವುದೇ ಇಲಾಖೆಯ ವಿಚಾರ ಯಾವಾಗಲೂ ಬರಬಹುದು. ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ನಾಲ್ಕೈದು ಸಾಲುಗಳಲ್ಲಿ ಒಟ್ಟು ನಾಲ್ಕು ಜನ ಸಚಿವರಿದ್ದಾರೆ . ಅಂದರೆ ಅದರ ಅರ್ಥ ಏನು? ಇದು ಏನು ತೋರಿಸುತ್ತದೆ? ಈ ಸದನವನ್ನು ಹೇಗಾದರೂ ನಡೆಸಿಕೊಂಡು ಹೋದರೆ ನಡೆಯುತ್ತಿದೆ ಎಂದು ನಿಮ್ಮ ಭಾವನೆಯೇ ? ನಾವು ಮರ್ಯಾದೆ ಕೊಟ್ಟರೇನು ಬಿಟ್ಟರೇನು ಎಂದು ಭಾವಿಸಿದ್ದೀರಾ ಅಥವಾ ಉದ್ದೇಶಪೂರ್ವಕವಾಗಿ ಅವರು ಏನು ಹೇಳುತ್ತಾರೋ ಹೇಳಲಿ, ಏನೂ ಮಾಡುತ್ತಾರೋ ಮಾಡಲಿ

ಎಂದು ಇದ್ದೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ: ಮಂತ್ರಿಗಳು ಮತ್ತು ಅಧಿಕಾರಿಗಳು ಸದನದಲ್ಲಿ ಉಪಸ್ಥಿತರಿಲ್ಲವೆಂಬ ಕಾರಣಕ್ಕಾಗಿ ನಾವು ವಾಕ್‌ಔಟ್ ಮಾಡುತ್ತೇವೆ. ಅವರುಗಳನ್ನು ಕರೆಸಿ ನಂತರ ಪ್ರಾರಂಭ ಮಾಡಿದರೆ ನಾವು ಬರುತ್ತೇವೆ. ಇದು ರಾಜ್ಯದ ಜನರಿಗೆ ಗೊತ್ತಾಗಲಿ. ಬೇಜವಾಬ್ದಾರಿ ಸರಕಾರವು ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂದು ಗೊತ್ತಾಗಲಿ. ಅಧಿಕಾರಿಗಳಿಗೆ ಮತ್ತು ಮಂತ್ರಿಗಳಿಗೆ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ಕೇಳಲು ಪುರುಸೊತ್ತು ಹಾಗೂ ಸಂಯಮವಿಲ್ಲವೆನ್ನುವುದಾದರೆ ನಿಮಗೆ ರಾಜ್ಯದ ಜನತೆಯು ಮಾಲೀಕರು ಎಂಬುದನ್ನು ಮರೆತಿದ್ದೀರಿ. ಇದನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ. (ಮಾನ್ಯ ಬಿಜೆಪಿ ಸದಸ್ಯರುಗಳು ಪ್ರತಿ ಭಟನೆ ವ್ಯಕ್ತಪಡಿಸಿ ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಮ್ಮ ಇಂಟೆನ್‌ಶನ್ ಏನೆಂದರೆ, ಈ ಸದನದ ಕಾರ್ಯಕಲಾಪಗಳನ್ನು ಡಿಸ್ಟರ್ಬ್‌ಮಾಡಬೇಕು. ತೊಂದರೆ ಮಾಡಬೇಕು, ಅದಕ್ಕೆ ತಡೆಒಡ್ಡ ಬೇಕೆಂದು ಇಲ್ಲ. ಕಲಾಪಗಳು ಸುಲಲಿತವಾಗಿ ನಡೆಯಲಿ ಎಂದು ನಾವುಗಳು 2-3 ದಿವಸಗಳಲ್ಲಿ ರೂಲಿಂಗ್ ಪಾರ್ಟಿಯಲ್ಲಿ ಕೋರಂ ಇಲ್ಲದಿದ್ದರೂ ಕೂಡ ನಾವು ಸಹಕರಿಸಿ ನಾವೇ ಕೋರಂ ಮಾಡಿಕೊಟ್ಟು ಸಹಕಾರ ನೀಡಿಕೊಂಡು ಬಂದಿದ್ದೇವೆ. ನಾವು ಸತತವಾಗಿ ಮಂತ್ರಿಗಳನ್ನು ಕರೆಸಿ ಎಂದು ನಾವು 2-3 ದಿನಗಳಿಂದ ಕೇಳುತ್ತಾ ಇದ್ದೇವೆ. ಅಧಿಕಾರಿಗಳನ್ನು ಹಾಜರಿರಲು ಸೂಚಿಸಿ ಎಂದು ಕೇಳುತ್ತಿದ್ದೇವೆ. ಯಾಕೆಂದರೆ ಅಧಿಕಾರಿಗಳು ಮಂತ್ರಿಗಳು ಇಲ್ಲಿ ಹಾಜರಿದ್ದರೆ ಸದನದಲ್ಲಿ ಚರ್ಚೆಯಲ್ಲಿ ಯಾವ ಯಾವ ವಿಚಾರ ಬರುತ್ತದೆ ಅದಕ್ಕೆ ಉತ್ತರ ಕೊಡಲು, ಸ್ಪಂದಿಸಲು ಸಂಬಂಧಪಟ್ಟವರು ಇರಬೇಕಾಗುತ್ತದೆ. ಜನರಿಗೆ ಈ ಕಲಾಪಗಳ ಪರಿಣಾಮವಾಗಿ ಏನು ಉತ್ತರ ಸಿಗುತ್ತದೆ, ಅವರಿಗೆ ಪರಿಹಾರ ಏನು ಸಿಗುತ್ತದೆ ಎಂಬುದನ್ನು ನಾವು ಜನತೆಗೂ ಸರಕಾರದವರು ತೆಗೆದುಕೊಂಡ ನಿರ್ಣಯಗಳು ಕೂಡ ಜನತೆಗೆ ಗೊತ್ತಾಗಬೇಕಾಗುತ್ತದೆ. ಇಲ್ಲಿ ಸದಸ್ಯರು ಎತ್ತಿದಂಥ ಪ್ರಶ್ನೆಗಳಿಗೆ, ವಿಚಾರಗಳಿಗೆ ಸರಕಾರದವರು ಯಾವ ರೀತಿಯಾಗಿ ಸ್ಪಂಧಿಸುತ್ತದೆ ಎನ್ನುವುದು ಜನತೆಗೆ ತಿಳಿಯಬೇಕಾಗುತ್ತದೆ. ಜನರಲ್ಲಿ ಒಂದು ನಿರೀಕ್ಷಣೆ ಇರುತ್ತದೆ. ಅನೇಕ ಸಲ ನಮ್ಮ ಹತ್ತಿರ , ಸರಕಾರಿ ನೌಕರರು, ಜನತೆಗೆ, ರೈತರು, ಯುವಕರು, ನಿರೋದ್ಯೋಗಿ ಯುವಕರು, ಪಂಪ್‌ಸೆಟ್‌ಗಳ ತೊಂದರೆ, ಕೆಇಬಿಯವರ ತೊಂದರೆ, ನೀರಿನ ತೊಂದರೆ, ರಿಸರ್‌ವೇಶನ್ಸ್ ತೊಂದರೇಗಳೇ ಮುಂತಾಗಿ ಅನೇಕ ಸಮಸ್ಯೆಗಳನ್ನು ನಮ್ಮಲ್ಲಿ ಹೇಳಿಕೊಂಡಿರುತ್ತಾರೆ. ಅಂಥ ಸಮಸ್ಯೆಗಳನ್ನು ನಾವು ಇಲ್ಲಿ ಪ್ರಸ್ತಾಪ ಮಾಡುವಾಗ ಸಂಬಂಧಪಟ್ಟಂಥ ಅಧಿಕಾರಿಗಳು ಇಲ್ಲದೇ ಹೋದಾಗ. ಸಂಬಂಧಪಟ್ಟಂಥ ಮಂತ್ರಿಗಳು ಇಲ್ಲದೇ ಹೋದಾಗ, ನಾವು ಯಾವ ರೀತಿಯಿಂದ ಸದನವನ್ನು ನಡೆಸಿಕೊಡಬೇಕು? ಯಾವ ರೀತಿಯಿಂದ ತಾವು ನಮ್ಮ ಸಹಕಾರವನ್ನು ಅಪೇಕ್ಷೆ ಪಡುತ್ತೀರಿ? ಯಾವ ರೀತಿಯಿಂದ ಸರಕಾರದವರು ನಮ್ಮಿಂದ ಸಹಕಾರವನ್ನು ಅಪೇಕ್ಷೆ ಪಡುತ್ತಾರೆ ಎಂಬುದನ್ನು ಹೇಳಬೇಕು. ಇಂಥ ಕಲಾಪಗಳು ಎರಡೂ ಕಡೆಯ ಸಹಕಾರದಿಂದ ನಡೆಯ ಬೇಕಾಗುತ್ತದೆ. ಸರಕಾರವು ಕೂಡ ಸಹಕರಿಸಬೇಕು, ನಾವು ಕೂಡ ಸಹಕರಿಸಬೇಕು. ನಾವು ಸಹಕರಿಸುತ್ತಾ ಇದ್ದೇವೆ. ಅವರು ಮಾತ್ರ ನಮ್ಮನ್ನು ತಿರಸ್ಕಾರ ಮಾಡುತ್ತಾ

ಇದ್ದಾರೆ. ಇದು ಸದನಕ್ಕೆ ಅವರು ತೋರಿಸತಕ್ಕಂಥ ಅಗೌರವ ಎಂದು ಹೇಳಬೇಕಾಗುತ್ತದೆ. ರಾಜ್ಯದ ಐದು ಕೋಟಿ ಜನರಿಗೆ ಮಾಡತಕ್ಕಂಥ ಅಪಮಾನ ರಾಜ್ಯದ ಯಾವುದೇ ಸಮಸ್ಯೆಗಳಿಗೆ ಸ್ಪಂದಿಸದೇ ಇರತಕ್ಕಂಥ ಅವರ ನಿಲುವನ್ನು ಪ್ರತಿಭಟಿಸಿ ನಾವು ವಾಕ್ ಔಟ್ ಮಾಡುತ್ತೇವೆ. ಅವರುಗಳು ಎಲ್ಲರೂ ಬಂದ ಮೇಲೆ ನಮ್ಮನ್ನು ಕರೆಯಿರಿ, ಬರುತ್ತೇವೆ

(ಮಾನ್ಯ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೇ, ನಾವು ಪ್ರತಿ ಸಂದರ್ಭದಲ್ಲಿಯೂ ಕಾಡಿ-ಬೇಡಿ ಇವರುಗಳನ್ನು ಕರೆಸತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇವರು ವಿಧಾನಸಭೆಯನ್ನು ಕಡೆಗಣಿಸಿದ್ದಾರೆ. ಇಲ್ಲಿ ಒಬ್ಬ ಅಧಿಕಾರಿ, ಒಬ್ಬ ಮಂತ್ರಿ ಇಲ್ಲ ಎಂಬ ಸ್ಥಿತಿ ಇರುವಾಗ ಮಾನ್ಯ ಅರಣ್ಯಸಚಿವರು ಸಮಜಾಯಿಸಿ ನೀಡಲು ಹೊರಟಿದ್ದಾರೆ. ನಾವೇನು ಇಲ್ಲಿನ ಗೋಡೆಗಳಿಗೆ ಭಾಷಣವನ್ನು ಮಾಡಬೇಕೇ? ಇದನ್ನು ವಿಧಾನಸಭೆ ಅಂದು ಕೊಂಡಿದ್ದೀರಾ ಅಥವಾ ಬೇರೆ ನಾವಾದರೂ ಅಂದುಕೊಂಡಿದ್ದೀರಾ? ಇಷ್ಟು ನಿರ್ಲಕ್ಷವಿದ್ದರೆ ಸಭೆ ನಡೆಸುವುದು ಬೇಡ ರದ್ದು ಮಾಡಿಬಿಡಿ. ಒಂದು ದಿನಕ್ಕೆ ವಿಧಾನಸಭೆ ಸೇರಿದರೆ ಎಷ್ಟು ಖರ್ಚಾಗುತ್ತದೆ? ಎಷ್ಟು ಲಕ್ಷ ರೂಪಾಯಿಗಳ ವೆಚ್ಚ ತಗಲುತ್ತದೆ ಎಂಬುದು ಸರಕಾರಕ್ಕೆ ಗೊತ್ತಿದೆ. ನೀವುಗಳು ಯಾರೂ ಬರುವುದಿಲ್ಲವೆಂದ ಮೇಲೆ ಇಷ್ಟು ಲಕ್ಷ ರೂಪಾಯಿಗಳನ್ನು ಯಾಕೆ ಖರ್ಚು ಮಾಡಬೇಕು? ಬರಖಾಸ್ತು ಮಾಡಿಬಿಡಿ. ಅವರಿಗೆ ಇಷ್ಟಬಂದ ಹಾಗೆ ಆಡಳಿತವನ್ನು ನಡೆಸಿ ಕೊಂಡು ಹೋಗಲಿ. ಪ್ರತಿ ದಿನವು ಮಂತ್ರಿಗಳು ಇಲ್ಲ, ಅಧಿಕಾರಿಗಳು ಇಲ್ಲ ಎಂದು ನಾವುಗಳು ಹೇಳಾತ್ತಾ ಇರುವುದು ಸರಿಯೇ? ಇದಕ್ಕೆ ಏನು ಹೇಳುತ್ತೀರಿ?

ಶ್ರೀ ಡಿ. ಮಂಜುನಾಥ: ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತು ನಡೆಯುತ್ತಿದ್ದು ಅಲ್ಲಿಗೆ ಕೆಲವರು ಹೋಗಿದ್ದಾರೆ .....

ಗೊಂದಲ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : 50ಜನ ಮಂತ್ರಿಗಳಲ್ಲಿ ಎಲ್ಲರೂ ಅಲ್ಲಿಯೇ ಇದ್ದಾರೆಯೇ? ಅಧಿಕಾರಿಗಳು ಎಲ್ಲಿಗೆ ಹೋಗಿದ್ದಾರೆ?

ಗೊಂದಲ

ಉಪಾಧ್ಯಕ್ಷರು : ಈಗ ಸದನವನ್ನು 15 ನಿಮಿಷಗಳ ಕಾಲ ಮುಂದಕ್ಕೆ ಹಾಕಲಾಗಿದೆ.

(ಸದನವು 15 ನಿಮಿಷಗಳ ಕಾಲ ಮುಂದೂಡಲ್ಪಟ್ಟು ಮತ್ತೆ ಸದನವು 10-55ಗಂಟೆಗೆ ಸೇರಲು ನಿಶ್ಚಯಿಸಿತು).

(ಸದನವು 11.00 ಗಂಟೆಗೆ ಪುನರಾರಂಭಗೊಂಡಿತು. ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ರೆಡ್ಡಿ ದೇಶಮುಖ್‌ಮದನಾರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಉಪಾಧ್ಯಕ್ಷರೇ, ಕ್ಷಮಿಸಿಬೇಕು. ಏಕೆಂದರೆ ತಾವು ಮೊದಲನೆಯ ದಿವಸ ಈ ಪೀಠವನ್ನು ಅಲಂಕಾರ ಮಾಡಿದ ಮೇಲೆ ಈ ಒಂದು ಘಟನೆ ನಡೆಯಿತು ಎನ್ನತಕ್ಕ ಒಂದುವ್ಯಥೆ ತಮಗೆ ಇರಬಹುದು. ಆದರೆ ನಾವು ಯಾವುದೇ ಒಂದು ದುರುದ್ದೇಶದಿಂದ

ವಾಕೌಟ್ ಮಾಡಲಿಲ್ಲ. ನಾವು ಮಾಡಿದ್ದು ಏಕೆ ಎಂದರೆ to show our resentment and protest. ರೂಲಿಂಗ್ ಪಾರ್ಟಿಯಲ್ಲಿ, ಸರ್ಕಾರದಲ್ಲಿ ಸುಮಾರು50-51 ಮಂತ್ರಿಗಳು ಇದ್ದಾರೆ. ಅದಕ್ಕೆ ಇಲ್ಲಿ ಹಾಜರಾತಿ ಕಡಿಮೆ ಇದ್ದ ಕಾರಣ, ಅಧಿಕಾರಿಗಳು ಕೂಡ ಯಾರೂ ಇರಲಿಲ್ಲ. ತಮಗೂ ಕೂಡ ಗೊತ್ತಿದೆ. ಆ ದೃಷ್ಟಿಯಿಂದ ನಾವು ಅದೇ ರೀತಿಯಾಗಿ ಪ್ರೊಸೀಡಿಂಗ್ಸ್ ನಡೆಸಿಕೊಂಡು ಹೋದರೆ ಪ್ರಜಾಪ್ರಭುತ್ವಕ್ಕೆ ಒಂದು ಅವಮಾನ ಆಗತಕ್ಕಂಥ ವ್ಯವಸ್ಥೆ ನಡೆದಿದೆ ಎಂದು ಹೇಳಿ ಸರ್ಕಾರದ ವಿರುದ್ಧ ನಾವು ಪ್ರೊಟೆಸ್ಟ್ ಮಾಡಿ ವಾಕೌಟ್ ಮಾಡಿದೆವೆಯೇ ಹೊರತಾಗಿ ಬೇರೆ ಯಾವುದೇ ಧೋರಣೆಯಿಂದ ಅಲ್ಲ. ಅದಕ್ಕಾಗಿ ನಾನು ತಮಗೇನಾದರೂ ನೋವಾದರೆ ಅದಕ್ಕೆ ನಾನು ಕ್ಷಮೆ ಕೇಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ತಮ್ಮ ಕೊಠಡಿಯಲ್ಲಿ ನಮ್ಮ ವಿಚಾರಗಳನ್ನು ಎಕ್ಸ್‌ಪ್ರೆಸ್ ಮಾಡಿದ್ದೇವೆ. ಈ ಸದನದ ಕಾರ್ಯಕಲಾಪ ಆದಾಗಿನಿಂದಲೂ ಸಹ ಯಾವುದೇ ಸಂದರ್ಭದಲ್ಲಿ ಕೂಡ ಈ ಭಾಗದಲ್ಲಿ ವಿರೋಧ ಪಕ್ಷದವರ ಸಂಖ್ಯೆ ಜಾಸ್ತಿ ಇರುತ್ತದೆಯೇ ಹೊರತು, ಆ ಕಡೆಗೆ ಸಂಖ್ಯೆ ಕಡಿಮೆ ಇರುತ್ತದೆ. ಮಂತ್ರಿಗಳಲ್ಲಿ ಎಂದೂ ಸಹ 49 ಜನ ಒಟ್ಟಿಗೇ ಕುಳಿತಿದ್ದನ್ನು ಅಂತೂ ನಮ್ಮ ಕಣ್ಣಿನಿಂದ ಈ ಅಧಿವೇಶನದಲ್ಲಿ ನೋಡಿಲ್ಲ. ಆ ಪುಣ್ಯ ನಮಗೆ ಸಿಕ್ಕಿಲ್ಲ. ನಾನು ವಿನಂತಿ ಮಾಡುತ್ತೇನೆ. ಈ ತರಹ ಬೇರೆ ಬೇರೆ ಕಾರ್ಯ ಕಲಾಪಗಳು ಇರುತ್ತದೆ. ವಿಧಾನ ಪರಿಷತ್ ಇರುತ್ತದೆ. ಎಲ್ಲರೂ ಇರಬೇಕೆಂದು ನಾವೇನೂ ನಿರೀಕ್ಷೆ ಮಾಡುವುದಿಲ್ಲ. ಆದರೆ ಕೊನೆಯ ಪಕ್ಷ 49 ಜನ ಮಂತ್ರಿಗಳಲ್ಲಿ 25 ಜನಾದರೂ ಇಲ್ಲಿ ಇರಬೇಕು ಎಂದು ನಿರೀಕ್ಷೆ ಮಾಡುವುದು ಸ್ವಾಭಾವಿಕ. ಅದೂ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಸಂದರ್ಭದಲ್ಲಿ ಎಲ್ಲಾ ಇಲಾಖೆಗೆ ಸಂಬಂಧಪಟ್ಟಂತಹ ಕೊರತೆ ಏನು ಇದೆ. ಏನು ಆಗಬೇಕು ಎಂದು ಸಲಹೆಗಳನ್ನು ಕೊಡುವಂತಹ ಕಾಲದಲ್ಲಿ ಅಧಿಕಾರಿಗಳು ಇರಬೇಕೋ ಬೇಡವೋ ಎಂಬ ಬಗ್ಗೆ ನಾನು ಅದನ್ನು ಚರ್ಚೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಮಂತ್ರಿಗಳಾದರೂ ಇರಬೇಕು. ಇನ್ನು ಮುಂದಾದರೂ ಮತ್ತೆ ಮತ್ತೆ ಈ ತರಹ ವಾಕೌಟ್ ಮಾಡಿ, ಆಡಳಿತ ಪಕ್ಷದ ಮಂತ್ರಿಗಳು ಬರುವ ಹಾಗೆ ನೋಡಿಕೊಳ್ಳುವ ದುಸ್ಥಿತಿಗೆ ಬರದಂತೆ ಆ ಕಡೆ ಆಡಳಿತ ಪಕ್ಷದವರು ಎಚ್ಚರ ವಹಿಸುವಂತೆ ತಾವು ತಮ್ಮದೇ ಆದ ಭಾಷೆಯಲ್ಲಿ ಛೀಮಾರಿ ಹಾಕುತ್ತೀರೋ ಆದೇಶ ಕೊಡುತ್ತೀರೋ ಅಥವಾ ಅದೇನು ಮಾಡುತ್ತೀರೋ ಮಾಡಬೇಕು. ಮಾನ್ಯ ವಾಟಾಳ್ ನಾಗರಾಜ್ ಅವರು ಲೇಟಾಗಿ ಬಂದರು. ಇವರ ವಿಚಾರ ಏನು ಎಂಬುದು ಗೊತ್ತಿಲ್ಲ. ದಯಮಾಡಿ ಅವರಿಗೆ ಮಾತನಾಡಲು ಅವಕಾಶ ದಯಮಾಡಿ ಕೊಡಬಾರದು ಎಂದು ವಿನಂತಿ ಮಾಡುತ್ತೇನೆ.

+ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಉಪಾಧ್ಯಕ್ಷರೆ, ನಾನು ನನ್ನ ಜೀವನದಲ್ಲಿ ತಡವಾಗಿ ಬಂದಿರುವುದು ನಿಜ. ಆದರೂ ಸಹ ಅವರ ಸಭಾತ್ಯಾಗಕ್ಕೆ ನನ್ನ ಬೆಂಬಲ ಇದೆ. ಈಗೇನೂ ಹೊರಗೆ ಹೋಗುವುದಿಲ್ಲ. ನಿಮ್ಮ ಸಭಾತ್ಯಾಗಕ್ಕೆ ಬೆಂಬಲವಂತೂ ಇದೆ, ತಲೆ ಕೆಡೆಸಿಕೊಳ್ಳುವುದಕ್ಕೆ ಹೋಗಬೇಡಿ. ಆದ್ದರಿಂದ ನಾನು ಬೆಂಬಲ ಕೊಟ್ಟಿದ್ದೇನೆ. ಬೆಂಬಲ ಕೊಟ್ಟಿದ್ದೇನೆಂದು ತಿರುಗಿ ನಾನು ಸಭಾತ್ಯಾಗ ಮಾಡುವುದಕ್ಕೆ ಹೋಗುವುದಿಲ್ಲ. ಬೆಂಬಲವಂತೂ ಕೊಟ್ಟಿದ್ದೇನೆ, ಅದು ಸ್ಪಷ್ಟ. ಒಂದು ಮಾತು ತಮಗೆ ಹೇಳುತ್ತೇನೆ. ನಾವಿಲ್ಲಿ ಸದನದಲ್ಲಿ ಮಾತನಾಡುವಾಗ ಹೇಳಿದ್ದೇವೆ. ಹೊಸ ಮಂತ್ರಿಗಳ ನೇಮಕ ಆಗಿದೆ ಮತ್ತು ಇಲಾಖೆಗಳ ಬದಲಾವಣೆಗಳು ಆಗಿವೆ. ಯಾವ್ಯಾವ ಇಲಾಖೆ ಯಾರ್‍ಯಾರಿಗೆ ಕೊಟ್ಟಿದ್ದಾರೆಂದು ನಮಗೆ ಪ್ರಾಮಾಣಿಕವಾಗಿ ಗೊತ್ತಿಲ್ಲ. ಪತ್ರಿಕೆಯಲ್ಲಿ ನೋಡಿದ್ದನ್ನು ಬಿಟ್ಟರೆ ಯಾವ್ಯಾವ ಇಲಾಖೆ ಯಾರ್‍ಯಾರಿಗೆ ಕೊಟ್ಟಿದ್ದಾರೆಂದರೆ ಈ ಸದನದಲ್ಲಿ ಇದುವರಿಗೂ ಗೊತ್ತಾಗಿಲ್ಲ.

ಒಬ್ಬರಂತೂ ರಾಜೀನಾಮೆ ಕೊಟ್ಟಿದ್ದಾರೆ . ರಾಜೀನಾಮೆ ಕೊಟ್ಟಂತಹ ಸಚಿವರು ಸದಸ್ಯರಾಗಿ ಆದರೂ ಬರಬೇಕಲ್ಲಾ. ಅವರು ಇಲ್ಲಿಲ್ಲ ಅಥವಾ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟರೇ, ಹೊರಗಡೆ ಹೋದರೆ ಎನ್ನತಕ್ಕ ಪ್ರಶ್ನೆನೂ ಇಲ್ಲ. ಮಾನ್ಯ ವರದೇಗೌಡರು ರಾಜೀನಾಮೆಕೊಟ್ಟಿದ್ದಾರೆ ಎಂದು ಹೇಳಿ ಆಗಲೇ ಹೆಚ್ಚು ಕಡಿಮೆ 15-20 ದಿವಸ ಆಗಿದೆ. ಅವರ ರಾಜೀನಾಮೆ ಏನಾದರೂ ಅಂಗೀಕಾರ ಆಯಿತೇ ಅಥವಾ ಸರ್ಕಾರಕ್ಕೆ ಅವರಿಂದ ಏನು ಪ್ರಶ್ನೆ ಅಥವಾ ಅವರಿಗೇನಾದರೂ ಖಾತೆಯನ್ನು ಬದಲಾವಣೆ ಮಾಡಿ ಕೊಟ್ಟಿದ್ದೀರಾ? ಆ ಖಾತೆ ಕೊಡದಿದ್ದರೆ ನಾನು ಈ ಖಾತೆಗೆ ಬರುವುದಿಲ್ಲವೆಂದು ಹೇಳಿ ಅವರು ಒಂದು ರೀತಿಯ ಪ್ರತಿಭಟನೆ ಮಾಡುತ್ತಿದ್ದಾರೆ ಅದರ ಬಗ್ಗೆ ಸರ್ಕಾರದ ನಿಲುವು ಏನು? ಅದರ ಬಗ್ಗೆ ಯಾರಾದರೂ ಏನಾದರೂ ಹೇಳ ಬೇಕಲ್ಲಾ. ಇಂತಹವರು ರಾಜೀನಾಮೆ ಕೊಟ್ಟಿದ್ದಾರೆ. ಅದ್ದರಿಂದ ನಾವು ಅವರ ರಾಜೀನಾಮೆಯನ್ನು ಒಪ್ಪಿಕೊಂಡಿದ್ದೇವೆ ಅಥವಾ ಬಿಟ್ಟಿದ್ದೇವೆಂದು ಸರ್ಕಾರ ಹೇಳಬೇಕಲ್ಲಾ. ಮಾನ್ಯ ಮುಖ್ಯಮಂತ್ರಿಗಳುಹೇಳಬೇಕು. ಮುಖ್ಯಮಂತ್ರಿಗಳೇ ಹೇಳಬೇಕಲ್ಲದೆ ಬೇರೆಯವರು ಹೇಳುವುದಕ್ಕೆ ಬರುವುದಿಲ್ಲ. ಈ ಸದನ ಆರಂಭ ಆದ ತಕ್ಷಣವೇ ಮಾನ್ಯ ಮುಖ್ಯಮಂತ್ರಿಗಳೇ ಈ ಮಾತನ್ನು ಹೇಳಬೇಕಾದವರು.ಅವರು ಇದುವರೆಗೂ ಹೇಳಿಲ್ಲ. ಅವರು ಈ ಸದನವನ್ನೂ ಕಗ್ಗತ್ತಲಿನಲ್ಲಿ ಇಟ್ಟಿದ್ದಾರೆ. ಈ ರಾಜ್ಯವನ್ನೂ ಕಗ್ಗತ್ತಲಿನಲ್ಲಿಟ್ಟಿದ್ದಾರೆ. ಮತ್ತು ಆಡಳಿತ ಒಂದು ರೀತಿ ಕಗ್ಗತ್ತಲು ಆಗಿದೆ. ಅದಕ್ಕಾಗಿ ನಾನು ತಮ್ಮಲ್ಲಿ ಕಳಕಳಿಯ ಮನವಿ ಮಾಡುತ್ತಿದ್ದೇನೆ ; ತಾವಾದರೂ ಹೇಳಿ, ಯಾವ್ಯಾವ ಮಂತ್ರಿಗಳು ಯಾವ್ಯಾವ ಇಲಾಖೆ ಎಂದು ಹೇಳಬೇಕು. ಶ್ರೀ ಅಶ್ವತ್ಥನಾರಾಯಣರೆಡ್ಡಿಯವರು ಹಿಂದೆ ಹೋಗಿ ಕುಳಿತಿದ್ದಾರೆ. ಅವರು ಇಲ್ಲಿ ಕುಳಿತುಕೊಳ್ಳುತ್ತಿದ್ದರು . ನನಗೇ ಅನುಮಾನ, ಅವರು ಏಕೆ ಅಲ್ಲಿ ಹೋದರು? ಅವರು ಯಾವ ಸಚಿವರು? ನಾನು ಪತ್ರಿಕೆಯಲ್ಲಿ ನೋಡಿದೆನೇ ಹೊರತು ಅವರು ಆ ಕಡೆಗೆ ಹೋಗಿದ್ದಾರೆ ಈ ಸ್ಥಾನ ಬಿಟ್ಟು ಬಿಟ್ಟು ಮುಜರಾಯಿ ಇಲಾಖೆ ಸಚಿವರು ಇಲ್ಲಿದ್ದವರು ಅಲ್ಲಿಗೆ ಹೋಗಿದ್ದಾರೆ. ಇಲ್ಲಿ ಏನೇನಾಗಿದೆ ಎನ್ನತಕ್ಕದ್ದು ಗೊತ್ತಿಲ್ಲ. ಕುರ್ಚಿಗಳ ಬದಲಾವಣೆ ಆಗಿದೆ, ಬಹಳ ಗೊಂದಲ ಸೃಷ್ಟಿ ಆಗಿದೆ. ಏನಾಗಿದೆ ಎನ್ನತಕ್ಕದ್ದನ್ನು ತಾವು ಸ್ವಲ್ಪ ಹೇಳಬೇಕು. ಮತ್ತು ನಿನ್ನೆಯವರೆಗೂ ಸಾರಿಗೆ ಸಚಿವರಾಗಿದ್ದವರು ಗೃಹ ಸಚಿವರಾಗಿದ್ದಾರೆ ಎಂದು ಸುದ್ದಿ ಬಂದಿದೆ. ಅದು ನಿಜವೇ? ಇದೆಲ್ಲಾ ಸ್ವಲ್ಪ ಹೇಳಬೇಕು. ಅದನ್ನು ಲಘುವಾಗಿ ತೆಗೆದುಕೊಳ್ಳತಕ್ಕದ್ದು ಅಲ್ಲ. ಈ ಸದನಕ್ಕೆ ಹೇಳಬೇಕು. ಈ ಸದನ ಎಲ್ಲಕ್ಕಿಂತ ಬಹಳ ಎತ್ತರವಾದಂತಹ ಸದನ . ಈ ಸದನ ಆರಂಭ ಆದಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾದ್ದು ಕರ್ತವ್ಯ. ಅದನ್ನು ಬಿಟ್ಟು ಈ ಬಗ್ಗೆ ಯಾರೂ ಮಾತನಾಡುತ್ತಿಲ್ಲ ಎಂದು ಒಂದು ವಿಚಾರ.. ನಾನು ಮತ್ತೆ ಮತ್ತೆ ಅದನ್ನೇ ಹೇಳಬೇಕಾಗಿಲ್ಲ. ಮಾನ್ಯ ಪ್ರಕಾಶ್‌ಅವರು ಹೇಳಿದ್ದಾರೆ. ನನಗೆ ಇರತಕ್ಕ ಇಲಾಖೆಯೇ ಸಾಕು. ವಾರ್ತಾ ಇಲಾಖೆ ನನಗೆ ಬೇಡ ಎಂದು ಬಹಳ ಪ್ರಾಮಾಣಿಕವಾಗಿ ಹೇಳಿದ್ದಾರೆ. ಮಾನ್ಯ ನಾಣಯ್ಯನವರಿಂದ ವಾರ್ತಾ ಇಲಾಖೆಯನ್ನು ಹಿಂತೆಗೆದುಕೊಂಡಂತಹ ಉದ್ದೇಶ ಏನು? ಮಾನ್ಯ ನಾಣಯ್ಯನವರಿಗೂ ಸರ್ಕಾರಕ್ಕೂ ಅಥವಾ ಮಾನ್ಯ ಮುಖ್ಯಮಂತ್ರಿಗಳಿಗೂ ಏನಾದರೂ ಭೇಧ ಭಾವನೆ ಇದೆಯಾ? ಅದನ್ನು ಹೇಳಬೇಕಲ್ಲಾ ಈ ಸದನದಲ್ಲಿ. ಯಾವುದೂ ಗೊತ್ತಿಲ್ಲದೇ ಈ ಸದನವನ್ನು 'ಅಯ್ಯಪ್ಪನ ಭಾವಡಿ' ಮಾಡುವ ಹಾಗೋ ಇಲ್ಲ ಅಥವಾ ದೊಡ್ಡಿ ಮಾಡುವುದಕ್ಕ ಆಗುವುದಿಲ್ಲ ಅಥವಾ ಅರಳೀಮರದ ಕೆಳಗೆ ಸಭೆ ಎಂದು ಈ ಸದನವನ್ನು ಮಾಡುವುದಕ್ಕೆ ಆಗುವುದಿಲ್ಲ. ಅದ್ದರಿಂದ ಈ ಸಭೆ ಅತ್ಯುನ್ನತವಾದಂತಹ ಪ್ರಜಾತಂತ್ರ ವ್ಯವಸ್ಥೆಯಲ್ಲಿ, ಬಂದು ಪ್ರಾಮುಖ್ಯವಾದ ಸಭೆ, ಈ ಸಭೆಗೆ ಪ್ರಾಮಾಣಿಕವಾಗಿ ಅವತು ತಮ್ಮ ಸರ್ಕಾರದ ನಿಲುವುಬದಲಾವಣೆ ಆಗಿರತಕ್ಕ ವಿಚಾರವನ್ನೆಲ್ಲಾ ತಮ್ಮ ಮೂಲಕ ತಿಳಿಸಬೇಕೆಂದು ಕಳಕಳಿಯ ಮನವಿ ಮಾಡುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್(ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್‌ಹಾಗೂ ವಾರ್ತಾ ಸಚಿವರು): ಅಧಿವೇಶನದ ಪ್ರಾರಂಭದಲ್ಲಿ ಮಂತ್ರಿಮಂಡಲದ ಪುನರಾಚನೆ ಆದಂತಹ ಸಂದರ್ಭದಲ್ಲಿ ಹೊಸ ಮಂತ್ರಿಗಳನ್ನು ಪರಿಚಯಿಸಿಕೊಡತಕ್ಕದ್ದು ಒಂದು ಸಂಪ್ರದಾಯ. ಅದು ಲೋಪ ಆಗಿದೆ ಎಂದು ನನಗೂ ಕೂಡ ತಿಳಿದು ಬಂದಿದೆ. ಹೊಸ ಮಂತ್ರಿಗಳನ್ನು ನಾವು ಪರಿಚಯಿಸಲೇ ಬೇಕು. ಆದರೆ ಖಾತೆಗಳು ಬದಲಾವಣೆ ಆದಂತಹ ಸಂದರ್ಭದಲ್ಲಿ ಅವತ್ತು ಬೇರೆ ಅನ್ಯ ಕಾರಣ ಇದ್ದುದರಿಂದ ಅದನ್ನು ಯಾರೂ ಗಮನಿಸದೇ ಇದ್ದುದರಿಂದ ಪ್ರಾಯಶಃ ಆ ಸಂಪ್ರದಾಯ ಸ್ವಲ್ಪ ಮಟ್ಟಿಗೆ ತೊಂದರೆ ಆಗಿರತಕ್ಕದ್ದು ಕಾನೂನು ಅಂತೂ ಅಲ್ಲ. ನಾವು ನಮ್ಮ ಸರ್ಕಾರ,ನಮ್ಮ ಮುಖ್ಯಮಂತ್ರಿಗಳು ಯಾರೇ ಆಗಿರಲೀ, ಈ ಸದನವನ್ನು ಅತ್ಯಂತ ಗೌರವದಿಂದ ಕಾಣಬೇಕಾದ್ದು ಕೂಡ ಸರಿಯಾದಂತಹದು ಮತ್ತು ಸತ್ಸಂಪ್ರದಾಯಗಳನ್ನು ಪಾಲಿಸಬೇಕಾದ್ದು. ಅದು ಸಣ್ಣ ಮಟ್ಟಿಗೆ ಲೋಪ ಆಗಿದೆ. ಆದರೆ ಖಾತೆಗಳು ಮರು ಹಂಚಿಣಿಕೆ ಆದಂತಹ ಸಂದರ್ಭದಲ್ಲಿ ಯಾವ ಕಾರಣಗಳಿಗಾಗಿ ಯಾವ ಖಾತೆಯನ್ನು ಯಾರಿಗೆ ಕೊಟ್ಟಿದ್ದೇವೆಂದು ಹೇಳಿ ಸರ್ಕಾರ ವಿವರಿಸಬೇಕಾದಂತಹ ಅಗತ್ಯ ಇಲ್ಲ. ತಾವು ಹಿರಿಯರು, ಇದು ಅಂತರ್ಹತವಾದಂತಹ ಮಾನ್ಯ ಮುಖ್ಯಮಂತ್ರಿಗಳ ಹಕ್ಕು. ಆ ಹಕ್ಕನ್ನು ಅವರು ಚಲಾಯಿಸಿದ್ದಾರೆ.ಇದರ ಬಗ್ಗೆ ಅಧಿಕೃತವಾದಂತಹ ಹೇಳಿಕೆ ಮತ್ತು ಗೆಜೆಟ್‌ನಲ್ಲಿ ಕೂಡ ಬಂದಿರತಕ್ಕದ್ದು ಇದೆ. ರಾಜ್‌ಭವನದಿಂದ ಈ ರೀತಿಯ ಪ್ರಕಟಣೆ ಕೂಡ ಆಗಿದೆ. ಆದ್ದರಿಂದ ತಮಗೆಲ್ಲಾ ಗೊತ್ತಿದೆ; ಯಾರ‍್ಯಾರು ಯಾವ್ಯಾವ ಖಾತೆಯನ್ನು ನಿರ್ವಹಿಸುತ್ತಾರೆ ಎಂದು ಹೇಳಿ ಗೊತ್ತಿದೆ. ತಾವು ಆಯಾಯ ಖಾತೆಗಳನ್ನು ನಿರ್ವಹಿಸುತ್ತಾರೆ ಎನ್ನುವ ಕಾರಣಕ್ಕಾಗಿ ಅದಕ್ಕೆ ಸಂಬಂಧಿಸಿರತಕ್ಕ ಪ್ರಶ್ನೆಯನ್ನೂ ಕೇಳಿದ್ದೀರಿ. ಉಪ ಪ್ರಶ್ನೆಯನ್ನೂ ಹೇಳಿದ್ದೀರಿ. ಅವರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಆದ್ದರಿಂದ ಯಾವುದೇ ತರಹದ ಗೊಂದಲ ಇಲ್ಲ ಮತ್ತು ಯಾವುದೇ ತರಹದ ಭಿನ್ನಾಭಿಪ್ರಾಯಗಳು ಮಂತ್ರಿಮಂಡಲದಲ್ಲಿ ಆಗಲೀ ಅಥವಾ ನಮ್ಮ ಪಕ್ಷದಲ್ಲಿ ಆಗಲೀ ಅಥವಾ ಶಾಸಕಾಂಗ ಪಕ್ಷದಲ್ಲಿ ಆಗಲೀ ಇಲ್ಲ ಎನ್ನುವ ಮಾತನ್ನು ಮತ್ತೊಮ್ಮೆ ಧೃಡೀಕರಿಸಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಯ್ಯದ್ ಜುಲ್ಫೀಕರ್ ಹಷ್ಮಿ: ಇವತ್ತು ನನ್ನ ಪ್ರಶ್ನೆ ಇದೆ. ಮಂತ್ರಿಗಳು ಬರುತ್ತಾ ಇಲ್ಲ. ನಾವು ಯಾರಿಗೆ ಕೇಳಬೇಕು? ವಕ್ಫ್ ಮಿನಿಸ್ಟರ್ ಬರುತ್ತಿಲ್ಲ. ನಾವು ಯಾರನ್ನು ಕೇಳಬೇಕು?

ಶ್ರೀ ಬಿ.ಎಸ್.ಯಡಿಯೂರಪ್ಪ: ಹೊಸದಾಗಿ ಪ್ರವಾಸೋದ್ಯಮ ಇಲಾಖೆಯನ್ನು ವಹಿಸಿಕೊಂಡಿರುವಂತಹ ಮಾನ್ಯ ರೋಷನ್‌ಬೇಗ್ ಅವತ್ತಿನಿಂದ ಇವತ್ತಿನವರೆಗೆ ಬಂದಿಲ್ಲ. ತಮ್ಮ ಕೊಠಡಿಗೂ ಅವರು ಬರುತ್ತಿಲ್ಲ. ಆ ಇಲಾಖೆ ಬಗ್ಗೆ ನಾವು ಯಾರನ್ನು ಕೇಳಬೇಕು?

ಉಪಾಧ್ಯಕ್ಷರು: ಅವರು ಹಜ್ ಯಾತ್ರೆಗೆ ಹೋಗಲು ತಯಾರಿ ನಡೆಸುತ್ತಿದ್ದೇವೆಂದು ಹೇಳಿದ್ದಾರೆ, ಅದಕ್ಕಾಗಿ ಅವರು ಬಂದಿಲ್ಲ. ಅವರು ಮಾನ್ಯ ಸಭಾಧ್ಯಕ್ಷರ ಅನುಮತಿಯನ್ನು ತೆಗೆದುಕೊಂಡಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ವರದೇಗೌಡರ ರಾಜೀನಾಮೆ ಸರ್ಕಾರ ಒಪ್ಪಿಕೊಂಡಿದೆಯೋ ಇಲ್ಲವೋ ಗೊತ್ತಿಲ್ಲ.

ಶ್ರೀ ಕೆ.ಎಸ್ ಈಶ್ವರಪ್ಪ: ವರದೇಗೌಡರ ರಾಜೀನಾಮೆ ಅಂಗೀಕಾರವಾಗಿದೆಯೇ ಇಲ್ಲವೇ ಎಂಬುದು ಇಡೀ ರಾಜ್ಯದ ಪ್ರಶ್ನೆಯಾಗಿದ್ದು, ಗೊಂದಲವುಂಟಾಗಿರುವುದರಿಂದ ಅವರ ಬಗ್ಗೆ ಸ್ಪಷ್ಟಪಡಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೆ, ಮಂತ್ರಿಗಳಾದ ರೋಷನ್ ಬೇಗ್ ರವರು ಸಭಾಧ್ಯಕ್ಷರ ಒಪ್ಪಿಗೆ ಪಡೆದು ಸದನಕ್ಕೆ ಗೈರು ಹಾಜರಾಗಿದ್ದಾರೆ. ಅವರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಅವರು ವಕ್ಫ್ ಮಂತ್ರಿಗಳಾಗಿರುವುದರಿಂದ ಹಜ್ ಯಾತ್ರೆಗೆ ಯತ್ರಾರ್ಥಿಗಳನ್ನು ಕಳುಹಿಸುವ ದಿಶೆಯಲ್ಲಿ ಮಗ್ನರಾಗಿರುವುದರಿಂದ ಗೈರು ಹಾಜರಾಗಲು ಸದನದ ಒಪ್ಪಿಗೆ ಪಡೆದಿದ್ದಾರೆ. ಅವರು ಹಜ್ ಯಾತ್ರೆಗೆ ಹೋಗಿಲ್ಲ. ಹಜ್ ಯಾತ್ರಾರ್ಥಿಗಳಿಗೆ ಏರ್ಪಾಡು ಮಾಡುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಅವರು ತಮ್ಮ ಕರ್ತವ್ಯ ನಿರ್ವಹಿಸುವ ವಿಚಾರದಲ್ಲಿ ಯಾವುದೇ ತರಹದ ಅಸ್ಪಷ್ಟತೆಯಿಲ್ಲ. ಇನ್ನು ಮಾನ್ಯ ವರದೇಗೌಡರ ವಿಚಾರ ಹೇಳಬೇಕೆಂದು ಕೇಳಿರುವುದರಿಂದ ಅವರು ರಾಜೀನಾಮೆ ಕೊಟ್ಟಿರುವುದರ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಸಂಬಂಧವಾಗಿ ಮಾನ್ಯ ಮುಖ್ಯಮಂತ್ರಿಗಳು ಅವರೊಂದಿಗೆ ಮಾತನಾಡಿದ್ದಾರೋ ಇಲ್ಲವೋ ನನಗಂತೂ ಗೊತ್ತಿಲ್ಲ. ಎರಡನೆಯದಾಗಿ, ರಾಜೀನಾಮೆ ಪತ್ರ ಸ್ವೀಕರಿಸುವವರೆಗೂ ಕೂಡ ಅವರು ಮಂತ್ರಿಗಳಾಗಿರುತ್ತಾರೆ. ಆದುದರಿಂದ, ಅವರು ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ರಾಜ್ಯದ ಕೆಲಸ ಆಗಬೇಕಲ್ಲಾ, ಮಂತ್ರಿಗಳಾಗಿ ಮನೆಯಲ್ಲೇ ಕುಳಿತುಕೊಂಡು ಮುಂದುವರೆಯುತ್ತಾರೆಂದರೆ ಏನರ್ಥ?

ಶ್ರೀ ಎಂ.ಪಿ. ಪ್ರಕಾಶ್: ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೆ ವಿಚಾರ ತಿಳಿಸುವುದೇನೆಂದರೆ, ಅಕಸ್ಮಾತ್ ಪ್ರವಾಸೋದ್ಯಮಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳೇನಾದರೂ ಇದ್ದರೆ ಹಿಂದಿದ್ದಂಥ ಪ್ರವಾಸೋದ್ಯಮ ಮಂತ್ರಿಗಳವರೇ ಉತ್ತರಿಸುತ್ತಾರೆ. ಇಡೀ ಸರ್ಕಾರಕ್ಕೆ ಒಂದು ಜಂಟಿಯಾದ ಜವಾಬ್ದಾರಿಯಿರುವುದರಿಂದ .....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಸದನಕ್ಕೆ ಅವರು ಎಷ್ಟು ಗೌರವ ಕೊಡುತ್ತಿದ್ದಾರೆಂಬುದರಲ್ಲಿ ನನ್ನದೇನೂ ತಕರಾರಿಲ್ಲ. ಪ್ರಶ್ನೆಯೇನೆಂದರೆ, ನನಗಿನ್ನೂ ಅರ್ಥವಾಗುತ್ತಿಲ್ಲ. ಏಕಿಷ್ಟು ಗೊಂದಲದಲ್ಲಿದ್ದಾರೆ? ಮಾನ್ಯ ಪ್ರಕಾಶ್‌ರವರ ಬಗ್ಗೆ ನಾನು ಬಹಳ ಗೌರವದಿಂದ ಹೇಳುತ್ತಿದ್ದೇನೆ : ಅವರು ಹಿರಿಯ ಸಚಿವರಾಗಿದ್ದು, ಮಾತನಾಡುತ್ತಾ, ಮಂತ್ರಿಗಳು ಕೊಟ್ಟ ರಾಜೀನಾಮೆಯನ್ನು ಒಪ್ಪುವವರೆಗೆ ಅವರು ಮಂತ್ರಿಗಳಾಗಿರುತ್ತಾರೆಂದು ಹೇಳಿದರು. ಅವರು ಮಂತ್ರಿಗಳಾಗಿರುವುದು ಎಲ್ಲಿಗೆ? ಮನೆಗೋ? ಸರ್ಕಾರಕ್ಕೋ? ರಾಜ್ಯಕ್ಕೋ ? ಊರಿಗೋ? ಅಥವಾ ಎಲ್ಲಿಗೆ? ಎಲ್ಲಿದ್ದಾರೆ ಅವರು? ಈಗ ಸೋಮಣ್ಣ ಅವರನ್ನು ಜೈಲಿನಿಂದ ತೆಗೆದು ಹೊರಗೆ ಹಾಕಿದಿರಿ. ಏಕೆ ಹಾಕಿದಿರಿ? ಅವರಿಗೆ ಅವಕಾಶ ಕೊಟ್ಟವರು ಯಾರು? ನಗರಾಭಿವೃದ್ಧಿ ಖಾತೆಯನ್ನು ಅವರಿಗೆ ಏಕೆ ಕೊಟ್ಟಿರಿ? ಅದು ಬಹಳ ಪ್ರಾಮುಖ್ಯವಲ್ಲವೇ?

ಶ್ರೀ ಕೆ.ಎಸ್. ಈಶ್ವರಪ್ಪ: ಅವರು ಜೈಲಿನಲ್ಲಿಯೇ ಇರುವುದಕ್ಕೆ ಇಷ್ಟಪಟ್ಟಿದ್ದರಾ?

ಶ್ರೀ ವಿ. ಸೋಮಣ್ಣ: ವಾಟಾಳ್ ನಾಗರಾಜ್‌ರವರು ಏನಾದರೂ ಜೈಲಿನಲ್ಲಿರುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ನನ್ನನ್ನು ಹೊರಗಡೆ ಹಾಕಿದರು ಎಂದರೆ ಏನರ್ಥ?

ಶ್ರೀ ವಾಟಾಳ್ ನಾಗರಾಜ್: ನಾನು ಈಗಾಗಲೇ ನಾಲ್ಕೈದು ಬಾರಿ ಜೈಲಿಗೆ ಹೋಗಿ ಬಂದಿದ್ದೇನೆ. ಜೈಲಿಗೆ ಹೊಸದಾಗಿ ಹೋಗಲು ಅಡ್ಡಿಯೇನೂ ಇಲ್ಲ. ನೀವು ಹೊಸದಾಗಿ ಖಾತೆ ಇಟ್ಟುಕೊಂಡಿದ್ದು ಒಳಗೆ ಹೋಗಿಲ್ಲ. ನಾನು ಜೈಲಿಗೆ ಅನೇಕ ಸಾರಿ ಹೋಗಿ ಬಂದಿರುವ ಅನುಭವ ವಿರುವುದರಿಂದ ಅದರ ಬಗ್ಗೆ ಚಿಂತೆಯಿಲ್ಲ. ನಿಮ್ಮನ್ನು ಅವಹೇಳನ ಮಾಡಬೇಕೆಂದು ನಾನು ಹೇಳಿಲ್ಲ. ತಕ್ಷಣ ಖಾತೆಗಳು ಬದಲಾವಣೆಯಾಯಿತಲ್ಲಾ, ಸಮಸ್ಯೆ ಏನು ಉದ್ಭವಿಸಿತ್ತು ಎನ್ನುವುದೇ ನನ್ನ ಉದ್ದೇಶ ಹೊರತು ಯಾರನ್ನು ಅವಹೇಳನ ಮಾಡಬೇಕೆಂದಾಗಲೀ ಅಥವಾ ಸಚಿವರಾಗಬಾರದೆಂದು ಈ ಬಗ್ಗೆ ನಮ್ಮ ತಕರಾರೇನು ಇಲ್ಲ. ಈಗ ಮಂತ್ರಿಮಂಡಲದಲ್ಲಿ ಒಟ್ಟು 51 ಜನರಿದ್ದೀರಿ, ಇನ್ನೂ 78 ಸಂಖ್ಯೆಗೆ ಹೆಚ್ಚಿಸಿಕೊಳ್ಳಿ. ನಮ್ಮಪ್ಪನ ಮನೆ ಗಂಟೇನು ಹೋಗುತ್ತದೆ? ಯಾರು ಬೇಡ ಅನ್ನುತ್ತಾರೆ?

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದುವರಿದುದು)

+ಶ್ರೀ ಎಂ.ವೀರಪ್ಪ ಮೊಯಿಲಿ (ಕಾರ್ಕಳ) : ಮಾನ್ಯ ಉಪಾಧ್ಯಕ್ಷರೆ, ಕಾಡು ಎಂದು ಹೇಳಿದ ಕೂಡಲೇ ಅರಣ್ಯ ಇಲಾಖೆಯವರಿಗೆ ಅದು ನಮ್ಮದೆಂದು ತಿಳಿಯುತ್ತಾರೆ. ಈಗ ಪಂಚಾಯತ್ ಕಾಡು ಎಂದು ರೆವಿನ್ಯೂನಲ್ಲಿ ವಿಂಗಡಿಸುತ್ತಾರೆ ಅಥವಾ 'ನಮ್ಮಲ್ಲಿ ರಾಮ ಸಮುದ್ರ ಕಾಡು' ಎಂದು ಇದೆ. ಸುಮಾರು ಮೂರನೇ ಎರಡು ಭಾಗದಷ್ಟು ಅಂಶದ ಕಾರ್ಕಳ ಟೌನನ್ನು ರಾಮ ಸಮುದ್ರ ಕಾಡೆಂದು ಹೇಳುತ್ತಾರೆ. ಅರಣ್ಯ ಇಲಾಖೆಯವರು ಏನು ಮಾಡುತ್ತಾರೆಂದರೆ, ಅದು ನಮ್ಮ ಇಲಾಖೆಗೆ ಸೇರಿರುವ ಜಾಗವಾಗಿರುವುದರಿಂದ ನೀವೆಲ್ಲರೂ ಸ್ಥಳ ಬಿಟ್ಟು ಹೋಗಿ ಎನ್ನುತ್ತಾರೆ. ಈ ರೀತಿ ಇವರು ಮಾಡುವ ಅನಾಹುತದಿಂದ ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆ, ಈ ಎರಡೂ ಜಿಲ್ಲೆಗಳಲ್ಲಿರುವ ಸುಮಾರು ಇಪ್ಪತ್ತೈದು ಲಕ್ಷದಷ್ಟು ಜನರು ತೊಂದರೆಗೊಳಗಾಗಿ ಆತಂಕದಲ್ಲಿದ್ದಾರೆ. ಅನಂತರ, ಪಿಡಬ್ಲ್ಯೂಡಿ ರಸ್ತೆಗಳ ಕುರಿತು ಹೇಳುವುದಾದರೆ, ಅವು ಅನಾದಿ ಕಾಲದಿಂದಲೂ ಇವೆ.

ಶ್ರೀ ಡಿ.ಮಂಜುನಾಥ್(ಅರಣ್ಯ ಸಚಿವರು): ತಾವು ಮಾತನಾಡುತ್ತಾ ಏನು ಹೇಳಿದಿರಿ, ಕಡ್ಡಾಯವಾಗಿ ನಾವು ಯಾರನ್ನೂ ಕೂಡ ಹೊರಗಡೆ ಕಳುಹಿಸಿಲ್ಲ. ಅಲ್ಲಿನ ವನ್ಯ ಜೀವಿ ಮತ್ತು ಸಸ್ಯ ಸಂಪತ್ತನ್ನು ಕಾಪಾಡುವುದಕ್ಕೋಸ್ಕರ ಎಲ್ಲಾ ರೀತಿಯಾದ ಕ್ರಮಗಳನ್ನು ತೆಗೆದುಕೊಂಡಿದ್ದೇವೆಯೇ ಹೊರತು ಅಲ್ಲಿಂದ ಕಡ್ಡಾಯವಾಗಿ ಯಾರನ್ನೂ ಕೂಡ ಹೊರಗಡೆ ಕಳುಹಿಸಿಲ್ಲವೆಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ : ತಾವೇನೋ ಹೇಳುತ್ತಿದ್ದೀರಿ, ಆದರೆ, ಅಲ್ಲಿ ಅಧಿಕಾರಿಗಳು ಹೇಳಬೇಕಲ್ಲಾ.

ಶ್ರೀ ಡಿ. ಮಂಜುನಾಥ್ : ನಾನು ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿ ಬಂದಿದ್ದು ಅಲ್ಲಿ ಇದೇ ವಿಷಯವನ್ನು ಚರ್ಚಿಸಿದ್ದೇನೆ. ಮತ್ತು ಈ ಸಂಬಂಧವಾಗಿ ನಮ್ಮ ಇಲಾಖಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ : ತಾವೇನೋ ಹೇಳಿದ್ದೀರಿ. ಆದರೆ, ಆದೇಶ ಕೊಟ್ಟ ಕೂಡಲೇ ಅದು ನಡೆಯುವುದಿಲ್ಲ, ಅವರು ಮಾಡುತ್ತಿಲ್ಲ. ಅಲ್ಲಿ ಪಿಡಬ್ಲ್ಯೂಡಿ ವರ್ಕ್ಸ್ ಮತ್ತು ನಬಾರ್ಡ್‌ಗೆ

ಸಂಬಂಧಿಸಿದ ಎಲ್ಲಾ ರೀತಿಯ ಕಾರ್ಯಕ್ರಮಗಳಿದ್ದು ಮಾರ್ಚ್ ತಿಂಗಳೊಳಗೆ ಆಗಬೇಕು. ಆ ಕೆಲಸ ನಿಲ್ಲಿಸುತ್ತಾರೆ. ಕುಂದಾಪುರ ಹಾಗೂ ಬೈಂದೂರು ಕ್ಷೇತ್ರದಲ್ಲಿ ಕೆಲಸ ನಿಲ್ಲಿಸಿದರು, ನನ್ನ ಕ್ಷೇತ್ರವಾದ ಕಾರ್ಕಳದಲ್ಲಿ ನಿಲ್ಲಿಸಿದರು. ತಾವು ಹೇಳಿದಿರಿ, ಓರಲ್ ಆಗಿ ಬಂದರೆ ಸಾಲದು. ಇವೊತ್ತು ನೋಟೀಸ್ ಕೊಟ್ಟಿದ್ದು, ಅದನ್ನು ಅವರು ವಿತ್ ಡ್ರಾ ಮಾಡಬೇಕು, ಆತಂಕ ಬಂದಿದೆ. ಇನ್ನೊಂದು ವಿಚಾರವೇನೆಂದರೆ, ನಿಮ್ಮ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ಗೆ ಯಾವುದು ಹ್ಯಾಂಡ್ ಓವರ್ ಆಗಿದೆಯೋ ಅದರ ಪ್ರಾಪರ್ಟಿ ಲಿಸ್ಟ್ ಇರಬೇಕಲ್ಲಾ, ಅದು ನಿಮ್ಮ ಹತ್ತಿರ ಎಲ್ಲಿದೆ? ಇಂತಹ ಅನೇಕ ಸಮಸ್ಯೆಗಳಿವೆ. ಇವೊತ್ತು ಕುದುರೆಮುಖ ವನ್ಯಜೀವಿ ಉದ್ಯಾನವನವಿದ್ದು ಅದನ್ನು ಪ್ರೊಸಿಜರ್ ಡಿಸೈಡ್ ಆಗಿದೆ. ಅವರು ಹೈಕೋರ್ಟಿನಲ್ಲಿ ಏನು ಹೇಳಿದ್ದಾರೆಂದರೆ ,

"Order without jourisdiction can be set aside. Petitioners have been staying within the area described in the notices before passing of the order & with their huts and homes and also have cultivable lands. The impugned orders were purported to have been made under the provisions of the Wild Life Sancturary Protection Act, 1972, under which there may be a declaration of a sanctury by virtue of the provision of Section 18 of the Act. It is found out from the records that under Section 18 of the Act, notification has been issued on 20th January 1976 by the Development commissioner and ex-officio Secretary to Government of Mizoram declaring the area within that notification as Dampa Wild-Life Sanctuary. It appears that the Respondents have not followed any of the provsions of Chapter IV of the Act. It is true that the Respondents are entitiled to declare any area under Section 18 of the Act but that can be done only after following the provisions contained in the Act. The Respondents can take follow up action for evicting persons from the area fallaing within the declared sanctuary in accordance with the provisions as contained in Chapter IV of the Act. None of these things have been done, have been found to be followed by the respondents in passing the orders prejudicially affecting the petitioners. Therefore, the impugned orders are not sustainable in law and accordingly they deserve to be quashed." Jalandhar Chakma Vs. Deputy Commissioner, Aizwal, Mizoram. AIR 1983 GAUHATI Page 18."

ಆದುದರಿಂದ,ಇವೊತ್ತು ತಾವು ಕಾನೂನಿನ ಪ್ರಕಾರ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳಲಿಲ್ಲ. You must resort back to 18 and proper procedure ಏನು ಬೇಕೋ ಅದನ್ನು

ಮಾಡಬೇಕು. ಆದುದರಿಂದ, ತಾವು ಇದನ್ನು ವೆರಿಫೈ ಮಾಡಬೇಕೆಂದು ಹೇಳಿದ್ದೇನೆ, ಇದಕ್ಕೆ ಜಾಯಿಂಟ್ ಹೌಸ್ ಕಮಿಟಿ ಮಾಡಬೇಕು. ಕಾನೂನನ್ನು ಅನುಷ್ಠಾನಗೊಳಿಸುವುದಕ್ಕೆ ಸರ್ಕಾರ ಪಾರದರ್ಶಕವಾಗಿರುವುದಕ್ಕೆ ಏನು ತೊಂದರೆ ಇದೆ? you will have to be transperent in implementing law. ನಾನು ಈ ಬಗ್ಗೆ ತಮಗೂ ಪತ್ರ ಬರೆದಿದ್ದೇನೆ. ಚೀಫ್ ವೈಲ್ಡ್ ವಾರ್ಡ್‌ನ್‌ರವರ ಕಛೇರಿಗೆ ಎರಡು ತಿಂಗಳ ಹಿಂದೆ ಹೋಗಿ ನೀವು ಅಲ್ಲಿಗೆ ಬರಬೇಕೆಂದು ಹೇಳಿದೆ. ಅಲ್ಲದೆ, ಸನ್ಮಾನ್ಯ ಗೋವಿಂದೇಗೌಡರು ಸಹ ಕರೆದರೂ ಚೀಫ್ ವೈಲ್ಡ್ ವಾಡರ್ನ್‌ರವರು ಬರಲಿಲ್ಲ. ಅನಂತರ, ಪುನಃ ನಾನೇ ಒಂದು ದಿನಾಂಕವನ್ನು ನಿಗದಿಪಡಿಸಿ ಕರೆದರೂ ಆಗಲೂ ಬರಲಿಲ್ಲ I am Sorry , we have all humlity. ನಾವು ಮಾಜಿ ಮುಖ್ಯಮಂತ್ರಿಯಾಗಿರಬಹುದು, ಏನೇ ಆಗಿರಬಹುದು. ಆದರೆ, ಜನರ ಸಮಸ್ಯೆಯನ್ನು ಇವೊತ್ತು ಆ ಅಧಿಕಾರಿಗೆ ತಿಳಿಸಿ ಎರಡು ಬಾರಿ ಸಭೆ ಕರೆದಾಗಲೂ ಬರಲಿಲ್ಲ. ಅಧಿಕಾರಿ ಬರುತ್ತಾರೆಂದರು ಅಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ನರೆದಿದ್ದರು. He is the person who has to enlighten about the provisions of the law. ಅಲ್ಲಿಯೂ ಬರಲಿಲ್ಲ, ನಂತರ, ನಾವು ದಿನಾಂಕ ನಿಗದಿಪಡಿಸಿ ಸಭೆ ಕರೆದಾಗಲೂ ಬರಲಿಲ್ಲ. ಹಾಗಾದರೆ, ಅಧಿಕಾರಿಯ ದಾರ್ಷ್ಟ್ಯ ಎಷ್ಟಿರಬೇಕು? ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ: ಯಾವ ಸುಪ್ರೀಂಕೋರ್ಟಿಗೆ ಇವರು ನೋಟಿಫಿಕೇಷನ್‌ನಲ್ಲಿ ಆ್ಯಂಟಿ ಡೇಟ್ ಹಾಕಿ ಅಫಿಡವಿಟ್ ಕೊಟ್ಟಿದಾರೆ. ಇದರ ಬಗ್ಗೆ ಪ್ರೋಬ್ ಆಗಬೇಕು. ಯಾವ ಅಧಿಕಾರಿಗಳು ಎಲ್ಲಿ ಎಡವಿದ್ದಾರೆ ಎಂಬುದು ಗೊತ್ತಾಗಬೇಕು. ಏಕೆಂದರೆ ಮುಂದಿನವರಿಗೆ ಇದೊಂದು ಪಾಠವಾಗುತ್ತದೆ. ಕಾನೂನನ್ನು ಕೈಗೆತ್ತಿಕೊಂಡು ಜನರಿಗೆ ಹಿಂಸೆ ಕೊಡತಕ್ಕ ಪ್ರವೃತ್ತಿಯನ್ನೇನು ಬೆಳೆಸಿಕೊಂಡಿದ್ದಾರೆ , Sadism I must say, perverse attitude. ಇದರಿಂದ ಕರ್ನಾಟಕ ರಾಜ್ಯ ಮುಕ್ತವಾಗಬೇಕು. ಸಜ್ಜನಿಕೆ ಕರ್ಟೇಸೀಸ್ ಎಂದು ಹೇಳಿದರೆ ಒಬ್ಬ ಅಧಿಕಾರದಲ್ಲಿದ್ದವರೇ ಅಲ್ಲ Chief Warden. I called on him. I discussed with him. we decided on the date. ಮಾನ್ಯ ಗೋವಿಂದೇಗೌಡರು ಇದರ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ, ಅವರು ಬಹಳ ಧರ್ಮಾತ್ಮರು, ಅವರು ಅಲ್ಲಿ ಬರಲೇ ಇಲ್ಲ , ನಾನು ಹೋಗುವಾಗಲೂ ಅವರು ಬರಲಿಲ್ಲ. I talked to him. Forget about my status. Minimum courtesy should be there. ಆದರೆ ಕನಿಷ್ಟ ಪಕ್ಷದ ಸೌಜನ್ಯತೆಯೆಂಬುದು ಇದೆಯಲ್ಲಾ ಅದಾದರೂ ಬೇಡವೇ? ನಾನು ಏತಕ್ಕಾದರೂ ಅವರ ಹತ್ತಿರ ಹೋಗಿ ಚರ್ಚೆ ಮಾಡಿದೆಯೆಂದು ನನಗಿನ್ನಿಸಿತು. Because he doesn't deserve that. Because if a person does not deserve, if you call on him, ಆಗ ನಾನು ಸ್ವಲ್ಪ ಸಣ್ಣಗಾದೆ.

ಶ್ರೀ ಡಿ. ಮಂಜುನಾಥ್: ಮಾನ್ಯ ಉಪಾಧ್ಯಕ್ಷರೆ, ನಾನು ಈಗ ಎಲ್ಲಾ ವಿಚಾರವನ್ನು ತಿಳಿದುಕೊಂಡಿದ್ದೇನೆ. ಒಬ್ಬರು ಮಾಜಿ ಮುಖ್ಯಮಂತ್ರಿಗಳು ಅವರ ಕಛೇರಿಗೆ ಹೋಗಿದ್ದಿರಿ ಎಂಬುದು ಗೊತ್ತಾಯಿತು, ಇದರಿಂದ ನನಗೆ ಬಹಳ ವ್ಯಥೆಯಾಯಿತು. ಈಗಾಗಲೇ ಆ ಅಧಿಕಾರಿಯನ್ನು ಕರೆಸಿ ಹೇಳಿದ್ದೇನೆ. ಅದರ ಮೇಲೆ ಕ್ರಮ ತೆಗೆದುಕೊಳ್ಳಲು ನಾನು ಹಿಂದು ಮುಂದು ನೋಡುವುದಿಲ್ಲ. ಅದಕ್ಕಾಗಿಯೇ ನಾನು ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿ ಆ ಗಂಗಾಮೂಲಕ್ಕೂ ಹೋಗಿ ಬಂದಿದ್ದೇನೆ. ಅಲ್ಲಿನ ಜನರಿಗೆ ಯಾವುದೇ ತೊಂದರೆಯನ್ನು ಕೊಡಬೇಡಿ ಎಂದು ಹೇಳಿದ್ದೇನೆ. ಈಗೇನು ನ್ಯಾಷನಲ್

ಪಾರ್ಕ್ ಮಾಡಿದ್ದಾರೆ ಅದರ ಅಸುಪಾಸಿನಲ್ಲಿರುವ ಜನರೇನಿದ್ದಾರೆ ಅವರ ರಕ್ಷಣೆಗೆ ಏನು ಮಾಡಬೇಕು ಎಂಬ ಬಗ್ಗೆ ನಾನೂ ಸಹ ಯೋಚನೆ ಮಾಡುತ್ತಿದ್ದೇನೆ. ಬಹುಶಃ ಅಲ್ಲಿನ ಜನರನ್ನಾರನ್ನೂ ಸಹ ಕಡ್ಡಾಯವಾಗಿ ಹೊರಕ್ಕೆ ಕಳುಹಿಸಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ, ಜನರ ಸಮಸ್ಯೆಯನ್ನು ಅರಿತು ಕೊಂಡು ಒಬ್ಬರು ಮಾಜಿ ಮುಖ್ಯಮಂತ್ರಿಗಳು ಆ ಅಧಿಕಾರಿಯ ಕಛೇರಿಗೆ ಹೋಗಿರುವುದು ಅವರ ದೊಡ್ಡತನವನ್ನು ತೋರಿಸುತ್ತದೆ. ಆದರೆ ಆ ಅಧಿಕಾರಿಯಿಂದ ಇವರಿಗಾದ ಅಸೌಜನ್ಯದ ಬಗ್ಗೆ ಸರ್ಕಾರ ಬಹಳ ತೀವ್ರವಾಗಿ ಹಾಗೂ ಗಂಭೀರವಾಗಿಯೂ ಪರಿಗಣಿಸುತ್ತದೆ.

ಡಾ।। ಎಂ.ಪಿ. ಕರ್ಕಿ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಕೇಂದ್ರ ಸರ್ಕಾರದಿಂದ ಮಂಜೂರಾಗಿರತಕ್ಕ ರಸ್ತೆಯ ಕೆಲಸಗಳನ್ನು ಮಾಡಬೇಕಾದರೂ ಸಹ ಸ್ಥಳೀಯ ಅಧಿಕಾರಿಗಳು ಅದನ್ನು ಹೇಗೆ ಮಾಡುತ್ತೀರಿ ಎಂದು ಚಾಲೆಂಜ್ ಮಾಡತಕ್ಕ ಕೆಲಸ ಮಾಡುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಉಪಾಧ್ಯಕ್ಷರೆ, ತಾವು ದಯಮಾಡಿ ಕ್ಷಮಿಸಬೇಕು. Usually we don't complaint against officers. ಅಧಿಕಾರಿ ಬಗ್ಗೆ ಗೌರವದಿಂದ ನಡೆದುಕೊಳ್ಳದಿರುವವರು ಯಾರು ಇರುವುದಿಲ್ಲ. ನಾವು ಅಧಿಕಾರದಲ್ಲಿ ಇರುವಾಗ ಮತ್ತು ಇಲ್ಲದಿರುವಾಗ ಅಧಿಕಾರಿಗಳ ಬಗ್ಗೆ ಗೌರವಯುತವಾಗಿಯೇ ನಡೆದುಕೊಳ್ಳುತ್ತೇವೆ. ಗೋವಿಂದೇಗೌಡರು ಕರೆದಿದ್ದಾರೆ, ನಾವು ಕರೆದಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ : 1972ರಿಂದ ಇಲ್ಲಿನ ಸದಸ್ಯರಾಗಿ, ಹಿರಿಯರಾಗಿ, ಮಾಜಿ ಮುಖ್ಯ ಮಂತ್ರಿಗಳಾಗಿ ಕೆಲಸ ಮಾಡಿದಂಥವರು ಜನಗಳ ಕೆಲಸಕ್ಕೆ ಅಧಿಕಾರಿಗಳ ಹತ್ತಿರ ಹೋದಾಗ ಆ ಅಧಿಕಾರಿ ಅಸೌಜನ್ಯವನ್ನು ತೋರಿಸತಕ್ಕದನ್ನು ಸರ್ಕಾರ ಬಹಳ ಗಂಭೀರವಾಗಿ ಪರಿಗಣಿಸುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ: ನಮ್ಮ ಜೊತೆ ಅವರು ಚೆನ್ನಾಗಿ ಮಾತನಾಡಿದ್ದಾರೆ .ಅನಂತರ ಬರುತ್ತೇನೆಂದು ಹೇಳಿ ಬರಲಿಲ್ಲ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಅರ್ಬನ್ ಇನ್‌ಫ್ರಾಸ್ಟ್ರಕ್ಚರ್ ಕಾರ್ಪೊರೇಷನ್ ಎಂದು ಮಾಡಿದ್ದೆವು. ಅದರಲ್ಲಿ ಇ.ಎಲ್.ಟಿ.ಆರ್. ಎಸ್ ಎಂದು ಕೆಲವು ಯೋಜನೆಗಳನ್ನು ಸಹ ಹಾಕಿದ್ದೆವು.ಆಗ ಮಾನ್ಯ ಜಾಫರ್ ಷರೀಫ್‌ರವರು ರೈಲ್ವೆ ಸಚಿವರಾಗಿದ್ದರು. ಅವರು ಆ ಸಂದರ್ಭಲ್ಲಿ ಕೆಲವು ಹೆಜ್ಜೆ ಮುಂದೆ ಇಟ್ಟೆಯೇ ಬಿಟ್ಟರು. ದೇವನಹಳ್ಳಿ ರಸ್ತೆಯ ಕೆಲಸವನ್ನು ಮಾಡಿಯೇ ಬಿಟ್ಟರು. ನನಗೆ ತಿಳಿದಿರುವ ಪ್ರಕಾರ the Railways are still insisting on broadguage. ಆದರೆ ಈ.ಎಲ್.ಟಿ.ಆರ್.ಎಸ್ ಬ್ರಾಡ್‌ಗೇಜ್ ಕೆಲಸವನ್ನೇ ಮಾಡಲು ಆಗುವುದಿಲ್ಲ. You must have only the standrad guage, the only ideal approach for ELTRS. The ideal guage should be 20 feet above the road.

ಇವತ್ತಿನವರೆಗೆ ಇದನ್ನು ಕ್ಲಿಯರ್ ಮಾಡಲಿಲ್ಲ. ಇದು ಬಹಳ ಪ್ರಾಮುಖ್ಯವಾದಂಥ ಕಾರ್ಯಕ್ರಮವಾಗಿದೆ. ಇನ್ನು ಫ್ಲೈಓವರ್ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ನಾವು ಅಧಿಕಾರಿದಲ್ಲಿದ್ದಾಗ ಸಿರ್ಸಿ ಸರ್ಕಲ್, ಹಡ್‌ಸನ್ ಸರ್ಕಲ್, ರಿಚ್‌ಮಂಡ್ ಸರ್ಕಲ್, ಮೆಕ್ರಿ ಸರ್ಕಲ್,

ರಾಜಾಜಿನಗರ ಫ್ಲೈಓವರ್‌ಗಳನ್ನು ಮಾಡಲು ಯೋಜನೆ ಮಾಡಿದ್ದೆವು. ಆದರೆ ತಾವು ಈಗ ಸರ್ಕಲ್ ಮತ್ತು ಡಬ್ಬಲ್ ರೋಡ್ ಹತ್ತಿರ ಅದರ ಕೆಲಸವನ್ನು ಪ್ರಾರಂಭ ಮಾಡಿದ್ದೀರಿ. ತಾವು ಸಿರ್ಸಿ ಸರ್ಕಲ್‌ನ್ನು ಮುಂದುವರೆಸಿ ಹಡ್‌ಸನ್ ಸರ್ಕಲ್‌ಗೆ ಸಂಪರ್ಕ ಕಲ್ಪಿಸದಿದ್ದರೆ there will be a total anarchy in that junction. ತಾವು ಸಿರ್ಸಿ ಸರ್ಕಲ್‌ವರೆಗೆ ಕೆಲಸವನ್ನು ಮಾಡಿ ಬಿಟ್ಟುಬಿಟ್ಟರೆ ಯಾವ ಪ್ರಯೋನಜವೂ ಆಗುವುದಿಲ್ಲ. ಆದ್ದರಿಂದ ತಾವು ಇದರಲ್ಲಿ ವ್ಯವಸ್ಥಿತವಾದಂಥ ಪ್ಲಾನ್‌ನ್ನು ಮಾಡಬೇಕಾಗುತ್ತದೆ.

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಫ್ಲೈ-ಓವರ್ ಕೆಲಸವು ಇಂದು ಮೈಸೂರು ರಸ್ತೆ, ಸಿರ್ಸಿ ಸರ್ಕಲ್‌ನಿಂದ ಟಾನ್ ಹಾಲ್‌ವರೆಗೆ ನಡೆಯುತ್ತಿದೆ. ಇದನ್ನು ಹಡ್‌ಸನ್ ಸರ್ಕಲ್‌ವರೆಗೆ ತೆಗೆದುಕೊಂಡು ಹೋಗಲು ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಅರ್ಬನ್ ಆರ್ಟ್ ಕಮೀಷನ್‌ನವರು, ಫ್ಲೈ ಓವರ್ ಟಾನ್‌ಹಾಲ್ ಮತ್ತು ಬೆಂಗಳೂರು ಮಹಾನಗರಪಾಲಿಕೆಯ ಮುಂದೆ ಹೋಗುವುದರಿಂದ ಐತಿಹಾಸಿದ ಕಟ್ಟಡಗಳಾದ ಇವುಗಳಿಗೆ ಧಕ್ಕೆಯಾಗುತ್ತದೆಂದು ಹೇಳಿದ್ದರು. ಆದ್ದರಿಂದ ಅರ್ಬನ್ ಆರ್ಟ್ ಕಮೀಷನ್‌ನ ಲಕ್ಷ್ಮಣರಾಯರನ್ನು, ಮಹಾನಗರ ಪಾಲಿಕೆಯ ಕಮೀಷನರ್, ಪಾರ್ಥಸಾರಥಿಯವರನ್ನು ಇತರೇ ಅಧಿಕಾರಿಗಳನ್ನು ಕರೆದು ಮೊನ್ನೆ ಚರ್ಚೆ ಮಾಡಿದ್ದೇನೆ. ಈ ಫ್ಲೈ ಓವರ್ ಹಡ್‌ಸನ್ ವೃತ್ತದವರೆಗೆ ಬರುತ್ತದೆ. ಅನಂತರ ಕೆ.ಆರ್.ವೃತ್ತದವರೆಗೆ ಜೋಡಿ ರಸ್ತೆ ಮಾಡುವ ಕಾರ್ಯಕ್ರಮವನ್ನು ನಾವು ಹಮ್ಮಿಕೊಂಡಿದ್ದೇವೆ. ಮಾನ್ಯ ವೀರಪ್ಪ ಮೊಯಿಲಿರವರು ಹೇಳಿದಂತೆ ಈ ಕೆಲಸವನ್ನು ಮಾಡಬೇಕಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಫ್ಲೈ ಓವರ್ ಮಾಡುವಾಗ ಪ್ರಾಪರ್ ಇಂಟಿಗ್ರೇಷನ್ ಇಲ್ಲದಿದ್ದರೆ ಏನು ಪ್ರಯೋಜನವಾಗುವುದಿಲ್ಲ. you should have taken it up simultaneously. ಒಂದನ್ನು ಅರ್ಧ, ಮತ್ತೊಂದನ್ನು ಅರ್ಧ ಮಾಡಿ ಎಲ್ಲವನ್ನೂ ಅರ್ಧಂಬರ್ಧ ಮಾಡಿದರೆ ತಮಗೆ ಜಾಸ್ತಿ ಗೊಂದಲವಾಗುತ್ತದೆ. ತಾವು ಇನ್ನೂ ಪ್ಲಾನ್ ಮಾಡುವುದರಲ್ಲೇ ಇದ್ದರೆ ಕೆಲಸವನ್ನು ಕಾರ್ಯರೂಪಕ್ಕೆ ತರುವುದು ಯಾವಾಗ? ಆದ್ದರಿಂದ ಈ ಕೆಲಸಗಳನ್ನು ತೆಗೆದುಕೊಳ್ಳುವುದಾಗಿದ್ದರೆ ಆ ಆರೂ ಯೋಜನೆಗಳನ್ನು ಒಟ್ಟಿಗೆ ತೆಗೆದುಕೊಳ್ಳಬೇಕು. ತಾವು ಸಿರ್ಸಿ ವೃತ್ತದ ಕೆಲಸ ಮಾಡಿದ ಮೇಲೆ ಹಡಸನ್ ವೃತ್ತದವರೆಗೆ ಅದನ್ನು ಮುಂದುವರೆಸಬೇಕಾದರೆ ಮತ್ತೆ ಎರಡು ಮೂರು ವರ್ಷಗಳಾಗುತ್ತದೆ. ಆದ್ದರಿಂದ ಎಲ್ಲಾ ಕೆಲಸಗಳನ್ನು ಒಟ್ಟಿಗೆ ತೆಗೆದುಕೊಳ್ಳಬೇಕು ಎಂಬ ಉದ್ದೇಶದಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಆ ರೀತಿ ಒಟ್ಟಿಗೆ ತೆಗೆದುಕೊಳ್ಳಬೇಕು ಎಂಬ ಉದ್ದೇಶದಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಆ ರೀತಿ ಒಟ್ಟಿಗೆ ಈ ಕೆಲಸಗಳನ್ನು ಮಾಡಬೇಕೆಂಬ ಉದ್ದೇಶದಿಂದ ನಾವು ಯೋಜನೆ ಮಾಡಿದ್ದೇವು. ಇನ್ನು ಸಬ್‌ವೇಗಳ ಬಗ್ಗೆ ಹೇಳುವುದಾದರೆ , ಸಂಗಂ ಥಿಯೇಟರ್, ಮೆಜೆಸ್ಟಿಕ್ ಸರ್ಕಲ್, ಎಸ್.ಬಿ.ಎಂ. ಮತ್ತು ಕೆ.ಜಿ.ರಸ್ತೆ, ನವರಂಗ್ ಸರ್ಕಲ್, ನಗರ ಮಾರುಕಟ್ಟೆ, ಶಿವಾಜಿನಗರ, ಬಸವೇಶ್ವರ ನಗರ ಮುಂತಾದ ಕಡೆಗಳಲ್ಲಿ ಸಬ್‌ವೇ ಮಾಡುವ ಯೋಜನೆ ಮಾಡಿದ್ದೆವು. ನನಗೆ ತಿಳಿದ ಮಟ್ಟಿಗೆ ಸಂಗಂ ಥಿಯೇಟರ್‌ನ ಹತ್ತಿರ ಮಾತ್ರ ಪ್ರಾರಂಭವಾಗಿದೆ. ಬೇರೆ ಎಲ್ಲೂಕೆಲಸ ಪ್ರಾರಂಭವಾಗಿಲ್ಲ. ಕಾರುಪಾರ್ಕಿನ ಬಗ್ಗೆ ' ಹೇಳುವುದಾದರೆ, ಗಾಂಧೀನಗರ, ಡಿಕನ್‌ಸನ್ ರಸ್ತೆ, ಸಿಟಿ ಮಾರುಕಟ್ಟೆ, ಮೆಜೆಸ್ಟಿಕ್ ಮತ್ತು ಎಂ.ಜಿ.ರಸ್ತೆ ಈ ಐದು ಕಡೆಗಳಲ್ಲಿ ಪ್ರಾಜೆಕ್ಟ್‌ಗಳು ಇತ್ತು. ಆದರೆ ನನಗೆ ತಿಳಿದ ಮಟ್ಟಿಗೆ ಈ ಐದು ಯೋಜನೆಗಳು

ನೆನೆಗುದಿಗೆ ಬಿದ್ದಿದೆ. ಇದನ್ನು ಬಹಳ ಜಾಗ್ರತೆಯಾಗಿ ಮಾಡುವ ಅವಶ್ಯಕತೆ ಇದೆ. ಇನ್ನು ಕೈಗಾರಿಕೆಗಳಲ್ಲಿನ ಪರಿಸರದ ಬಗ್ಗೆ ಹೇಳುವುದಾದರೆ, ನಮ್ಮ ಸರ್ಕಾರವಿದ್ದಾಗ Managing Sustainable Development. ಎಂದು ಎನ್‌ವೆರಾನ್‌ಮೆಂಟ್ ಮೆನೇಜ್‌ಮೆಂಟ್ ಪ್ಲಾನ್ ಎಂಬುದನ್ನು ಸಿದ್ಧಪಡಿಸಿ, ಅದರ ವರದಿ ಸಹ ತಮ್ಮ ಹತ್ತಿರ ಇದೆ. ಇದರ ಬಗ್ಗೆ ಜನರಲ್ಲಿ ಒಂದು ರೀತಿಯಾದ ಗೊಂದಲವಿದೆ. ಪರಿಸರದ ಪ್ರಶ್ನೆ ಬಂದಾಗ ಎಲ್ಲರೂ ಎದ್ದು ಬರುತ್ತಾರೆ. ಕೈಗಾರಿಕೆಗಳು ಬರುವುದಾಗಿದ್ದರೆ ಕೋಸ್ಟಲ್ ಏರಿಯಾದಲ್ಲಿ ಬರಬೇಕೆಂದು ನಾನು ನಿನ್ನೆ ಸಹ ಹೇಳಿದ್ದೇನೆ. ಇಲ್ಲದಿದ್ದರೆ ಕೊಂಕಣ ರೈಲ್ವೆ ಮತ್ತೊಂದು ವ್ಯರ್ಥವಾಗುತ್ತದೆ. ಆದ್ದರಿಂದ ಕ್ಯಾರಿಯಿಂಗ್ ಕೆಪ್ಯಾಸಿಟಿಯ ಬಗ್ಗೆ ಸ್ಟಡೀಸ್ ಆಗಿಲ್ಲವೆಂದರೆ ಹೇಗೆ? ಆದ್ದರಿಂದ ಜನರು ಎಲ್ಲವನ್ನೂ ವಿರೋಧ ಮಾಡುತ್ತಿದ್ದಾರೆ. ಅಲ್ಲಿ ಕುಡಿಯುವ ನೀರಿಲ್ಲ, ಟೌನ್‌ಶಿಫ್ ಬೆಳೆದರೆ ನೀರನ್ನು ಎಲ್ಲಿಂದ ತರುವುದು ಎಂದು ಅವರು ಕಾರಣ ಹೇಳುತ್ತಾರೆ, ತಮಗೆ ಆಶ್ಚರ್ಯವಾಗಬಹುದು.

11.30 ಪಿ.ಎಂ.

ಅಲ್ಲಿನ ಸರ್‌ಫೇಸ್ ವಾಟರ್‌ನ್ನು ತೆಗೆದುಕೊಂಡರೆ ಸುಮಾರು 759 ಟಿ.ಎಂ.ಸಿ. ನೀರು ಲಭ್ಯವಾಗುತ್ತದೆ. ಆದರೆ ಅಷ್ಟೊಂದು ನೀರು ವ್ಯರ್ಥವಾಗಿ ಈಗ ಸಮುದ್ರಕ್ಕೆ ಹೋಗುತ್ತಿದೆ. ಎಲ್ಲಾ ಸೇರಿ ಅಲ್ಲಿ 14-15 ನದಿಗಳಿವೆ. ತಮಗೆ ಆಶ್ಚರ್ಯವಾಗಬಹುದು. Do you know the consumption? 2.5%. Exploitation of river water, ಇದು ಎಷ್ಟಿದೆ ಎಂದರೆ, it comes to about 15,000 TMC. It should be treated as a wealth, not as a liablity. ಆದರೆ ಪರಿಸರವಾದಿಗಳ ವಾದ ಏನೆಂದರೆ, ಅಲ್ಲಿ ಕುಡಿಯಲಿಕ್ಕೆ ನೀರು ಇರುವುದಿಲ್ಲ. See, modern methods, scientific methods are available. ಇದನ್ನು ಸರಿಯಾಗಿ ಉಪಯೋಗ ಮಾಡಲಿಕ್ಕೆ ಇವತ್ತು ಸಾಧ್ಯವಿಲ್ಲವೇ? ಗ್ರೌಂಡ್ ವಾಟರ್ ಕೂಡ ಈಗ ಎಷ್ಟು ಎಕ್ಸ್‌ಪ್ಲಾಯ್ಟ್ ಆಗುತ್ತಿದೆ? ಅದು ಕೂಡ ಈ ರಿಪೋರ್ಟ್‌ನಲ್ಲಿದೆ. ಅದು ಎಷ್ಟು ಎಕ್ಸ್‌ಪ್ಲಾಯ್ಟ್ ಆಗಿದೆ ಎಂದು ಹೇಳಿದರೆ only 38% ground water utilisation and consumption. ಇದರ ಬಗ್ಗೆ ತಾವು ಪ್ರತಿ ಜಿಲ್ಲೆಗಳಲ್ಲೂ ಸಭೆ ಮಾಡಬೇಕು. ಜನಗಳಿಗೆ ತಿಳುವಳಿಕೆಯನ್ನು ಕೊಡಬೇಕು . ಈಗ ಏನಾಗುತ್ತದೆ ಎಂದರೆ, ಜನಗಳು ತೋರಿಕೆಯ ಮಟ್ಟಿಗೆ people will be carried away by mobocracy. ಒಂದು ಮಾಸ್ ಮೆಂಟಾಲಿಟಿ ಮೇಲೆ ಎಲ್ಲರೂ ಮೀನುಗಳು ಸಾಯುತ್ತದೆ ಇತ್ಯಾದಿಯಾಗಿ ಬೊಬ್ಬೆ ಹಾಕಿದರು. ಹಾಗಾದರೆ ನಾವು ಇವತ್ತು we are not in medieval age. We are today in the most scientific age.

ಹೀಗೆ ಇರುವಾಗ ನಾವು ಕ್ಯಾರಿಯಿಂಗ್ ಕೆಪಾಸಿಟಿ ಅಧ್ಯಯನ ಮಾಡುವಾಗಲೂ ಕೂಡ ಒಂದು ಪ್ರಾಕ್ಟಿಕಲ್ ಸ್ಟಡಿ ಇರಬೇಕು. ಅದನ್ನು ಅನಲೈಸ್ ಮಾಡಿಕೊಂಡು ಅದನ್ನು ಆಯಾಯ ಕಂಡೀಷನ್‌ಗೆ ಹೊಂದಿಕೊಂಡು ಅಧ್ಯಯನ ಮಾಡಬೇಕು. ಅದರ ವಿವರಗಳಿಗೆ ನಾನು ಈಗ ಹೋಗುವುದಿಲ್ಲ. ಆದರೆ ಒಂದು ವಿಚಾರವನ್ನು ನಾನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರೂ ಕೂಡ ಇಲ್ಲೇ ಇದ್ದಾರೆ. I think we should educate people. ನಾನು ಅವರನ್ನು ದೂರುವುದಿಲ್ಲ. ಏಕೆಂದರೆ ಶ್ರೀಸಾಮಾನ್ಯ ಏನೋ ಗಂಡಾಂತರವಾಗುತ್ತದೆ ಎಂದು ಹೆದರಿ ಬಿಡುತ್ತಾನೆ.

ಕೆಲವು ಪತ್ರಿಕೆಗಳಲಂತೂ ಕಳೆದ ವರ್ಷ ಫೆಬ್ರವರಿಯಲ್ಲಿ ಪ್ರಳಯವಾಗುತ್ತದೆ ಎಂದು ಬರೆದಿದ್ದೆವು. ಆದರೆ ಇನ್ನೂ ಕೂಡ ಪ್ರಳಯವಾಗಿಲ್ಲ. ಅದು ಯಾವಾಗ ಆಗುತ್ತದೋ ಗೊತ್ತಿಲ್ಲ. ಏನೋ ಒಂದು ಪ್ರಳಯವಾಗುತ್ತದೆ. ಜನಜೀವನವೇ ನಾಶವಾಗುತ್ತದೆ ಎಂಬತಕ್ಕಂಥ ಮಾತುಗಳನ್ನೂ ಕೂಡ ನಂಬತಕ್ಕಂಥ ಜನಗಳೂ ಕೂಡ ನಮ್ಮಲ್ಲಿದ್ದಾರೆ. ತಮಗೆ ಆಶ್ಚರ್ಯವಾಗಬಹುದು, At the singrauli region of UP and MP, ಅಲ್ಲಿ ಗೋವಿಂದ ವಲ್ಲಭಪಂತ್ ರಿಸರ್ವಾಯರ್ಎಂಬ ಒಂದು ರಿಸರ್ವಾಯರ್ ಇದೆ. ಅಲ್ಲಿ ಹತ್ತು ಸಾವಿರ ಮೆಗಾವ್ಯಾಟ್ ಪವರ್ ಉತ್ಪಾದನೆ ಮಾಡುತ್ತಾರೆ. ಆ ಯು.ಪಿ.ಎಂ.ಪಿ. ಪ್ರದೇಶದಲ್ಲಿ ಏನಾಗಿದೆ ಎಂಬುದನ್ನು ಅಧ್ಯಯನ ಮಾಡುವ ಸಲುವಾಗಿ ನೀವು ಕೆಲವು ಜನರನ್ನು ಅಲ್ಲಿಗೆ ಕಳುಹಿಸಬೇಕು. ತಮಗೆ ಆಶ್ಚರ್ಯವಾಗಬಹುದು. ಇನ್ನೂ ಹತ್ತು ಸಾವಿರ ಮೆಗಾವ್ಯಾಟ್ ಪವರ್ ಅನ್ನು ಪ್ರೊಡಕ್ಷನ್ ಮಾಡಲು ಈಗ ಅಲ್ಲಿ ಹೊರಟಿದ್ದಾರೆ. ಅಂದರೆ ಆಗ 20 ಸಾವಿರ ಮೆಗಾವ್ಯಾಟ್ ಪವರ್ಒಂದೇ ರೀಜನ್‌ನಲ್ಲಿ ಪ್ರೊಡ್ಯೂಸ್‌ವಾದಂತಾಗುತ್ತದೆ. ಈಗ ನಾವು ಐದು ಮೆಗಾವ್ಯಾಟ್ ವಿದ್ಯುತ್ ಪ್ರೊಡ್ಯೂಸ್ ಮಾಡಲಿಕ್ಕೆ ಹೋದರೂ ಕೂಡ ನಮಗೆ ನೀರು ಇಲ್ಲ, ನೀರು ಕಲುಷಿತವಾಗುತ್ತದೆ, ಆ ನೀರು ಕಲುಷಿತವಾದ ಕೂಡಲೇ ಅದು ಸಮುದ್ರಕ್ಕೆ ಹೋಗುತ್ತದೆ. ಇದರಿಂದಾಗಿ ಸಮುದ್ರದ ಮೀನುಗಳೆಲ್ಲಾ ಸಾಯುತ್ತದೆ ಎಂಬ ವಾದ ಬರುತ್ತದೆ. ಎಂಸಿಎಫ್ ಮಾಡುವಾಗಲೂ ಕೂಡ ಅದೇ ವಾದ ಇತ್ತು. ಎಲ್ಲಾ ಮೀನುಗಳು ಸಾಯುತ್ತವೆ, ಮೀನುಗಳು ತಿಂದು ಜನರೂ ಕೂಡ ಸಾಯುತ್ತಾರೆ ಎಂಬ ವಾದ ಇತ್ತು. ಆದರೆ ಮೀನುಗಳೂ ಸಾಯಲಿಲ್ಲ, ಜನರೂ ಸಾಯಲಿಲ್ಲ, ದೇವರ ದಯೆಯಿಂದ ಇವತ್ತಿನವರೆಗೂ ಹಾಗೆ ಹಾಗಿಲ್ಲ. ಮುಂದೆ ಏನಾಗುತ್ತದೋ ನೋಡಬೇಕು. ನಮ್ಮ ಕರ್ನಾಟಕ ರಾಜ್ಯ ಭಾರತದಲ್ಲೇ ಏಳನೇ ಅತ್ಯಂತ ದೊಡ್ಡದಾದ ರಾಜ್ಯ. ನಮ್ಮಲ್ಲಿ 4 ಸಾವಿರ ಮೆಗಾವ್ಯಾಟ್‌ನಷ್ಟು ಪವರ್ ಮಾತ್ರ ಇದೆ. ಅದರೆ ಜರ್ಮನಿಯಂತಹ ಸಣ್ಣ ರಾಷ್ಟ್ರವೊಂದರಲ್ಲಿ 75 ಸಾವಿರ ಮೆಗಾವ್ಯಾಟ್ ಅಷ್ಟು ಪವರ್ ಉಪಯೋಗ ಮಾಡುತ್ತಾರೆ. Still it is environment friendly. ಆದುದರಿಂದ ಜರ್ಮನಿ ರಾಷ್ಟ್ರ ಮುಂದೆವರೆಯುತ್ತಿದೆ. ಸಿಂಗಾಪೂರ್‌ನಂಥ ಸಣ್ಣ ಟೌನ್‌ನಲ್ಲಿ ಎಷ್ಟು ಥರ್ಮಲ್ ಪ್ಲಾಂಟ್ಸ್ ಇದೆ ಎಂಬುದು ನಿಮಗೆ ಗೊತ್ತೇ? ಅಲ್ಲಿ ಎಷ್ಟು ಕ್ಲೀನಾಗಿ ಸಿಟಿಯನ್ನು ಇಟ್ಟಿದ್ದಾರೆ. Environment friendly can co-exist with the Development. ಯಾವಾಗಲೂ ಕೂಡ modernity should co-exist with this kind of ecological development. ಅದು ಒಂದಕ್ಕೆ ಒಂದು ವಿರೋಧ ಆಗಲಿಕ್ಕೆ ಸಾಧ್ಯವಾಗುವುದಿಲ್ಲ. 75 ಸಾವಿರದಷ್ಟು ಮೆಗಾವ್ಯಾಟ್ ಪವರ್‌ನಷ್ಟು ವಿದ್ಯುತ್ ಅನ್ನು ಅವತ್ತು ಜರ್ಮನಿ ರಾಷ್ಟ್ರ ಡೆವಲಪ್ ಮಾಡಲು ಸಾಧ್ಯವಾಗುವುದಾದರೆ, ಇವತ್ತು ನಾವು ಎಲ್ಲೋ ಎಡವಿದ್ದೇವೆ. ಸರ್ಕಾರಗಳು ಅದರ ಬಗ್ಗೆ ಜನರಿಗೆ ಸರಿಯಾದಂತಹ ತಿಳುವಳಿಕೆ ಕೊಡಬೇಕಾಗುತ್ತದೆ. ವೈಜ್ಞಾನಿಕವಾದಂತಹ ಅಭಿವ್ಯಕ್ತಿಯ ಒಂದು ಫಲವೇನು? ಅದರ ಪರಿಣಾಮ ಏನಾಗುತ್ತದೆ? ಎಂಬ ಬಗ್ಗೆ ಜನರಿಗೆ ತಿಳಿಸ ಬೇಕಾಗುತ್ತದೆ. ದುಷ್ಪರಿಣಾಮಗಳೂ ಕೂಡ ಇವೆ. ಅದನ್ನು ತಡೆಯಬೇಕಾಗುತ್ತದೆ. ಆದರೆ ಆದು ಬರುತ್ತದೆಂದು ಹೇಳಿ ನಾವು ಇವತ್ತು ಅಭಿವೃದ್ಧಿಯ ಒಂದು ಮಹಾವೃಕ್ಷವನ್ನೇ ಕಡಿದು ಹಾಕಿ, ಎಲ್ಲರಿಗೂ ಕೊಡತಕ್ಕಂತಹ ಒಂದು ಅಭಿವೃದ್ಧಿಯ ನೆರಳನ್ನು ತಪ್ಪಿಸುವಂತಹ ಪ್ರಯತ್ನ ಮಾಡುವುದು ಖಂಡಿತವಾಗಿಯೂ ತಪ್ಪಾಗುತ್ತದೆ. ತಾವು ದಯಮಾಡಿ ಇದರ ಬಗ್ಗೆ ತಿಳುವಳಿಕೆ ಕೊಡುವಂತೆ ನಿಮ್ಮ ಡಿಸ್ಟ್ರಿಕ್ಟ್ ಅಥಾರಿಟೀಸ್‌ಗೆ ಹೇಳಿ. ನಿಮ್ಮ ಡಿಸಿ ಅಥವಾ ಎಸ್.ಪಿ. ಯವರಿಗಾಗಲಿ ಇದರ ಬಗ್ಗೆ ಗೊತ್ತಿಲ್ಲ.

ಒಮ್ಮೆ ಇದೇ ಪ್ರಕಾರ ಯಾವುದೋ ಒಂದು ಟಾರ್ಗೆಟ್ ಹಾಕಿ, ಕೈಗಾರಿಕೆ ಎಂಆರ್‌ಎಲ್‌ಗೆ ಕೊಡಬೇಕೆಂದು ಹೇಳಿ ಒಬ್ಬ ಎಸ್‌ಪಿಯವರು he is dilly-dallying. He wanted to negotiate. ನಾವು ಇಂತಹ ಒಂದು ಒಮ್ಮತವಾದ ಡಿಸಿಷನ್ ತೆಗೆದುಕೊಂಡ ಮೇಲೆ, ಎನ್‌ವೈರನ್‌ಮೆಂಟ್ ಕ್ಲಿಯರೆನ್ಸ್ ಬಂದ ಮೇಲೆ, ಪುನಃ ಇಂತಹ ಅಭಿವೃದ್ಧಿಗಳನ್ನು ತಡೆಯತಕ್ಕಂಥ ಪ್ರವೃತ್ತಿ ಏನಿದೆ, ಅದನ್ನು ನಾವು ನಿಲ್ಲಿಸಬೇಕಾಗುತ್ತದೆ. we have to lead, not to be led by certain elements, vested interests, who do not want any developments whats ever. ಇದು ಇಡೀ ಕರ್ನಾಟಕಕ್ಕೆ ಅನ್ವಯವಾಗುತ್ತದೆ. ಆದ್ದರಿಂದ ಈ ಬಗ್ಗೆ ಇನ್ನೂ ಹೆಚ್ಚು ವಿಚಾರಗಳನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಆದ್ದರಿಂದ ತಾವು ದಯಮಾಡಿ ಯಾವ ಒಂದು ಮ್ಯಾನೇಜ್‌ಮೆಂಟ್ sustainable development ಮಾಡುತ್ತೀರಿ? ಏನು ವರದಿಮಾಡುತ್ತೀರಿ ? ಅದಕ್ಕೊಂದು action programme. ಬೇಕು. The Government should draw up a development programme. ಅದರ ಪ್ರಕಾರ ಅಭಿವೃದ್ಧಿ ಎಲ್ಲಿ ಆಗಬೇಕು? ಎಲ್ಲಿ ಆಗಬಾರದು? ಯಾವ ಪ್ರಿವೆಂಟೀವ್ ಸ್ಟೆಪ್ ತೆಗೆದುಕೊಳ್ಳಬೇಕು ಎಂಬುದು ಏನೂ ಇಲ್ಲ. ಇದಕ್ಕೆ ಸ್ಪಷ್ಟವಾದಂತಹ ಒಂದು lucid picture ತಾವು ಕೊಡತಕ್ಕಂಥ ಒಂದು ಪ್ರಯತ್ನವನ್ನೂ ಮಾಡಬೇಕು. ಮಂಗಳೂರಿನಲ್ಲಿ ಒಂದು ಕೈಗಾರಿಕೆಯನ್ನು ಬಿರ್ಲಾದವರು ಸ್ಥಾಪನೆ ಮಾಡಲಿಕ್ಕೆ ಮುಂದೆ ಬಂದರು. ಅದು ಕಾಪರ್‌ಗೆ ಸಂಬಂಧಪಟ್ಟ ಕೈಗಾರಿಕೆಯಾಗಿತ್ತು. ಅಲ್ಲಿ ಆರು ಸಾವಿರ ಕೋಟಿ ರೂ.ಗಳನ್ನು ಇನ್‌ವೆಸ್ಟ್ ಮಾಡುವ ಸಲುವಾಗಿ ಅವರು ಬಂದರು. ಅದನ್ನುಸ್ಥಾಪಿಸುವುದರ ವಿರುದ್ಧ ಇಲ್ಲಿ ಗಲಾಟೆ ಮಾಡಿದರು. ಯುಎಸ್‌ಎ ಯ ಕಂಡೆಂಮ್ಡ್ ಯೂನಿಟ್ ಒಂದನ್ನು ತಂದು ಇಲ್ಲಿ ಹಾಕುತ್ತಿದ್ದಾರೆ ಎಂದು ಇಲ್ಲಿ ಗಲಾಟೆ ಮಾಡಿದರು. ಈಗ ಆ ಕೈಗಾರಿಕೆಯನ್ನು ಬಿಜೆಪಿ ಸರ್ಕಾರ ಅಧಿಕಾರದಲ್ಲಿರುವ ಗುಜರಾತ್ ರಾಜ್ಯದ ಕೋಸ್ಟಲ್ ಲೈನ್‌ಗೆ ಶಿಫ್ಟ್ ಮಾಡಲಾಗಿದೆ. ಆ ಕೈಗಾರಿಕೆ ಅಲ್ಲಿ ಉದ್ಘಾಟನೆ ಕೂಡ ಆಯಿತು. ಅದರಿಂದ ಯಾರಿಗೂ ಯಾವ ತೊಂದರೆಯು ಕೂಡ ಆಗಿಲ್ಲ. It is one of the best environment-friendly industries. That is why Gujarat is No.1 in industrialisation in the country.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಗುಜರಾತ್ ರಾಜ್ಯ ಕೇವಲ ಕೈಗಾರಿಕೀಕರಣದಲ್ಲಿ ಮಾತ್ರವಲ್ಲ. ಮೀನುಗಾರಿಕೆಯಲ್ಲೂ ಕೂಡ ನಂಬರ್ ಒನ್ ಸ್ಥಾನದಲ್ಲಿದೆ. ಇಲ್ಲಿ ಮಾಹಿತಿಯನ್ನು ಕೊಟ್ಟದ್ದನ್ನು, ಕೆಲವರು ತಮಗೆ ಮಾತ್ರ ಈ ವಿಷಯ ಗೊತ್ತು ಎಂಬ ರೀತಿಯಲ್ಲಿ ಜನರನ್ನು ತಪ್ಪು ದಾರಿಗೆ ಎಳೆಯುತ್ತಾರೆ. ಅವರಿಂದಾಗಿ ಇಲ್ಲಿ ಅಭಿವೃದ್ಧಿಗೆ ತೊಂದರೆಯಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಅದನ್ನೇ ಹೇಳುತ್ತಿದ್ದೇನೆ. ದಯಮಾಡಿ ಇದರ ಬಗ್ಗೆ if possible, you must bring out a paper to the House. ಮಾನ್ಯ ಪ್ರಕಾಶ್‌ರವರೇ, ನೀವು ಎಷ್ಟೇ ಪ್ರಯತ್ನ ಮಾಡಿದರೂ ಕೂಡ, ಎಷ್ಟೇ ಕೈಗಾರಿಕಾ ಉದ್ಯಮಿಗಳ ಹತ್ತಿರ ಮಾತನಾಡಿದರೂಕೂಡ, ಯಾವ ಕೈಗಾರಿಕೆಗಳೂ ಕೂಡ ಕರ್ನಾಟಕ್ಕೆ ಬರುವುದಿಲ್ಲ. ಏಕೆ ಇಲ್ಲಿ ಬಂದು ಕೈ ಸುಟ್ಟಕೊಳ್ಳಬೇಕೆಂದು ಅವರು ಯೋಚಿಸುತ್ತಾರೆ? ಏಕೆ ಇಲ್ಲಿ ಹೊಡೆಸಿಕೊಳ್ಳಬೇಕು? ಏಕೆ ಇಲ್ಲಿ ಇನ್‌ವೆಸ್ಟ್‌ಮೆಂಟ್‌ಗೆ ಧಕ್ಕೆ ಮಾಡಿಕೊಳ್ಳಬೇಕು ಎಂಬ ಉದ್ದೇಶದಿಂದ ಯಾರೂ ಇಲ್ಲಿಗೆ ಬರುವುದೇ ಇಲ್ಲ. Unless you create that atmosphere... ಗುಜರಾತ್‌ನಲ್ಲಿ ಅಂತಹ ಒಂದು

ವಾತಾವರಣವನ್ನು ಸೃಷ್ಟಿ ಮಾಡಿದ್ದಾರೆ. ದಯಮಾಡಿ you must send some people to Gujarat about this copper. Now the Birlas have refused to come to Karnataka. ಏಕೆ ಬರಬೇಕು ಇಲ್ಲಿ? ಅಲ್ಲಿ ಎಂಆರ್‌ಪಿಎಲ್ ಬಂದದ್ದೇ ಅವರಿಗೆ ಈಗ ಸಾಕಾಗಿದೆ. ಆದ್ದರಿಂದ ದಯಮಾಡಿ ಇದರ ಬಗ್ಗೆ ಒಂದು ಪೇಪರ್ ತಯಾರು ಮಾಡಬೇಕು. Place it before the House. Let there be a debate inside and outside the House. ನೀವು ಕರೆಕ್ಟಾಗಿ ಒಂದು ಕೈಗಾರಿಕಾ ಫ್ರೆಂಡ್ಲಿ ವಾತಾವರಣವನ್ನು, ಎನ್‌ವೈರ್ನ್‌ಮೆಂಟ್ ಫ್ರೆಂಡ್ಲಿ ವಾತಾವರಣವನ್ನು ಜೊತೆ ಜೊತೆಯಲ್ಲಿ ಕೊಂಡು ಹೋಗತಕ್ಕಂಥ ಒಂದು ಸಮನ್ವತೆಯ ಸರ್ವ ಸಮರ್ಪಕವಾದಂತಹ ನೀತಿಯನ್ನು ನೀವು ಮುಂದೆ ತರದೇ ಇದ್ದರೆ Karnataka will be doomed.

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ವೀರಪ್ಪ ಮೊಯಿಲಿಯವರು ಇತ್ತೀಚಿನ ದಿನಗಳಲ್ಲಿ ನಡೆಯತಕ್ಕಂಥ pseudo enivronmentalists, ವಿಚಾರದಲ್ಲಿ ಅವರು ಬಹಳ ಸ್ಪಷ್ಟವಾಗಿ ಮಾತನಾಡಿದ್ದಾರೆ. ಇದರ ಬಗ್ಗೆ ಆರ್ಥರ್ ಹೇಲಿಯವರು 'ಓವರ್ ಲೋಡ್' ಎನ್ನತಕ್ಕಂಥ ಒಂದು ಒಳ್ಳೆಯ ಪುಸ್ತಕವನ್ನೂ ಕೂಡ ಬರೆದಿದ್ದಾರೆ. ಈ ಥರ್ಮಲ್ ಪ್ಲಾಂಟ್‌ನ ವಿಚಾರದಲ್ಲಿ ಯಾವ್ಯಾವ ಶಕ್ತಿಗಳು ಯಾವ ರೀತಿ ಕೆಲಸ ಮಾಡುತ್ತವೆ ಎಂಬುದನ್ನು ಆ ಪುಸ್ತಕದಲ್ಲಿ ಹೇಳಿದ್ದಾರೆ. ತಾವು ಬಹಳ ಗಂಭೀರವಾಗಿ ಈ ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ತಮ್ಮದೇ ಆಗಿರತಕ್ಕಂಥ ಧಾಟಿಯಲ್ಲಿ ಈ ವಿಚಾರದಲ್ಲಿ ಸ್ಪಷ್ಟಪಡಿಸಿದ್ದರೆ. ಇನ್ನು ಮೇಲೆ ಈ ತರಹದ ಪರಿಸರವಾದಿಗಳು ಸೈಕಲ್ ಮೇಲೆಯೇ ತಿರುಗಾಡಬೇಕು, ಸೈಕಲ್ ಮೇಲೆಯೇ ನಮ್ಮ ಕಡೆಗೆ ಬರಬೇಕು, ಆಟೋಮೊಬೈಲ್ ಅನ್ನು ತೆಗೆದುಕೊಂಡು ಕಾರಿನಲ್ಲಿ ಬರುವುದಾದರೆ ಹೊರಗೆ ಬರುತ್ತದೆ. ಆದರಿಂದ ಪರಿಸರ ಮಾಲಿನ್ಯವಾಗುತ್ತದೆ.ಶಬ್ಧ ಮಾಲಿನ್ಯವಾಗುತ್ತದೆ. ಆದ್ದರಿಂದ ಅವರು ಸೈಕಲ್ ಮೇಲೆಯೇ ಬರಬೇಕು, ಆರು ಗಂಟೆಯೊಳಗಾಗಿಯೇ ಪರಿಸರವಾದಿಗಳು ಊಟ ಮಾಡಬೇಕು, ಮಲಗಬೇಕು, ಏಕೆಂದರೆ ದೀಪ ಉರಿಸುವುದರಿಂದ ಅದು ಪರಿಸರ ಮಾಲಿನ್ಯವಾಗುತ್ತದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಪರಿಸರವಾದಿಗಳ ಕುರಿತು ವ್ಯಂಗ್ಯವಾಗಿ ಹೇಳಿದ್ದಾರೆ. ಆದರೆ ತಾವು ಇಲ್ಲಿ ಆ ವಿಚಾರವನ್ನು ಬಹಳ ಗಂಭೀರವಾಗಿ ಪ್ರಸ್ತಾಪಿಸಿದ್ದೀರಿ. ಇದರ ಬಗ್ಗೆ ಸದನದಲ್ಲಿ ಕೂಡ ಒಂದು ಸಲ ಚರ್ಚೆ ಆಗುವುದು ಒಳ್ಳೆಯದೆಂದು ನಾನು ಭಾವಿಸಿಕೊಂಡಿದ್ದೇನೆ.

ಡಾ॥ ಎಂ.ಪಿ. ಕರ್ಕಿ: ಜನತೆಗೆ ಸರ್ಕಾರದ ಮೇಲಿರುವ ವಿಶ್ವಾಸ ಹೊರಟು ಹೋಗಿರುವುದೇ ಒಂದು ರೀತಿಯಲ್ಲಿ ಇದಕ್ಕೆಲ್ಲಾ ಮೂಲ ಕಾರಣ. ಯಾವುದೇ ಒಂದು ಪ್ರಾಜೆಕ್ಟ್ ತೆಗೆದುಕೊಂಡಾಗ ಆ ಪ್ರಾಜೆಕ್ಟ್ ಬಗ್ಗೆ ಜನರಿಗೆ ಸರಿಯಾದ ಮಾಹಿತಿಯನ್ನು ಕೊಟ್ಟು, ಅವರನ್ನು ಮನವೊಲಿಸಿಕೊಂಡು ಕೆಲಸ ಮಾಡಿದರೆ ಚೆನ್ನಾಗಿರುತ್ತದೆ. ಯಾರೋ ಒಬ್ಬರು ಬಂದು ಸರ್ವೆ ಮಾಡುತ್ತಾರೆ. ಏತಕ್ಕೆ ಸರ್ವೆ ಮಾಡುತ್ತಾರೆ ಎಂಬುದು ಗೊತ್ತಿರುವುದಿಲ್ಲ. ಏನೋ ಒಂದು ಬರುತ್ತದೆ ಎಂದು ಅವರು ಹೇಳುತ್ತಾರೆ. ಇದರಿಂದಾಗಿ ಆಗಾಗ ಜನರಲ್ಲಿ ಸಂಶಯ ಮೂಡಲಿಕ್ಕೆ ಪ್ರಾರಂಭವಾಗುತ್ತದೆ. ಸಂಶಯ ಕಳೆಯಬೇಕದರೆ ಅಧಿಕಾರಿಗಳು, ಸರ್ಕಾರ ಏನಾಗುತ್ತದೆ, ಏನು ತೊಂದರೆಯಾಗುತ್ತದೆ ಅನ್ನುವುದನ್ನು ಮೊದಲೇ ತಿಳಿಸಿ ಅದನ್ನು ಜನತೆ ತಿಳಿದುಕೊಳ್ಳುವಂತೆ ಮಾಡುವಂತಹ ಪ್ರಯತ್ನ ಮಾಡುತ್ತಿಲ್ಲ. ಪ್ರಯತ್ನ ಮಾಡಿದರೆ ನಾವು ಇಂಡಸ್ಟ್ರೀಸ್ ಮಾಡಬಹುದು. ನಮ್ಮ ಪರಿಸರಕ್ಕೂ ದಕ್ಕೆ ಆಗದ ಹಾಗೆ ಮಾಡಬಹುದು. ಅದನ್ನು ಮಾಡದೆ ಇದ್ದರೆ ತಪ್ಪಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಪ್ರಕಾಶ್‌ರವರು ಬಹಳ ಚೆನ್ನಾಗಿ ಸ್ಪಂದಿಸಿದರು. ಎಲ್ಲೆಲ್ಲಿ ಇಂತಹ ಕೈಗಾರಿಕೆಗಳು ಜಿಲ್ಲೆಯಲ್ಲಿ ಬರುವುದಕ್ಕೆ ಸಾಧ್ಯವಾಗುವುದಿಲ್ಲ, ಎಲ್ಲೆಲ್ಲಿ ಇಂತಹ ಕೈಗಾರಿಕಾ ವಾತಾವರಣ ನಿರ್ಮಾಣವಾಗಲಿ, you must put senior people as Deputy Commissioner, senior people as S.Ps and they should give a orientation training to them ಅಲ್ಲಿ ಅವರುಏನು ಮಾಡುತ್ತಾರೆ, ಜನಗಳ ಹತ್ತಿರ ಬಹಳ ಚೆನ್ನಾಗಿ ಇರಬೇಕೆಂದು ಮಾಡುತ್ತಾರೆ. ಅಧಿಕಾರಿಗಳು ಮಾಡಿದಾಗ ನಮ್ಮಂತಹ ಪ್ರತಿನಿಧಿಗಳು ಏನು ಮುಂದೆ ಓಟು ಬೇಕು, ಇಂಥದ್ದು ಹೇಳಿದಾಗ ಒಂದು ಎಲೆಕ್ಷನ್‌ನಲ್ಲಿ ಮಾತ್ರ ಬರುವುದು, ಮುಂದಿನ ಎಲೆಕ್ಷನ್‌ನಲ್ಲಿ ಆ ಎಮ್‌ಎಲ್‌ಎ ಬರುವುದಿಲ್ಲ. ನಾವೆಲ್ಲಾ ದೇವರ ದಯೆಯಿಂದ ಆರು ಆರು ಸಲ ಬರುತ್ತೇವೆ. ಇಂತಹ ಚೀಫ್ ಟ್ಯಾಕ್ಟಿಕ್ಸ್ ಉಪಯೋಗ ಮಾಡದೇ ಆರು ಆರುಸಾರಿ ಬರುತ್ತೇವೆ. ಆದರೆ ನಾವು ತಿಳಿದುಕೊಳ್ಳುವುದಿಲ್ಲ. ಮಾರ್ಚ್‌ನಲ್ಲಿಇದು ಟೆಂಪರರಿ ನಾವೂ ಸೇರಿಕೊಳ್ಳೋಣ ಎಂದು ಹೊರಡುತ್ತೇವೆ. ಆದರೆ ಇದಕ್ಕೆ ತಪ್ಪು ಮುಖ್ಯ ಆ ಜಿಲ್ಲೆಯ ಆಡಳಿತ ಬಿಗಿ ಇಲ್ಲದೆ ಇರುವುದು. ನೀವು ಇಲ್ಲಿ ಸರಿಯಾದ ಲೀಡ್ ತರದೆ ಇದ್ದರೆ ಅಸಾಧ್ಯ. ದಯವಿಟ್ಟು ಈ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಮೈನಾರಿಟೀಸ್ ಬಗ್ಗೆ ಸೋಷಿಯೋ ಎಕನಾಮಿಕ್ ಮತ್ತು ಎಜ್ಯುಕೇಷನಲ್ ಸರ್ವೇ ಮಾಡಿದ್ದೀರಿ. ಸುಮಾರು 40-45 ಲಕ್ಷ ರೂಪಾಯಿ ಖರ್ಚು ಮಾಡಿ ನಮ್ಮ ಸರ್ಕಾರ ಇರುವಾಗ ಅದು ಒಂದು ಸುಮಾರು 20ವಾಲ್ಯುಮ್‌ನಲ್ಲಿ ರಿಪೋರ್ಟ್ ಬಂದಿದೆ. ಅದನ್ನು ಇತ್ತೀಚೆಗೆ ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಇದರ ಬಗ್ಗೆ ಆ್ಯಕ್ಷನ್ ಪ್ಲ್ಯಾನ್ ಮಾಡಬೇಕೆಂದು ಮೈನಾರಿಟಿ ಕಮಿಷನರ್‌ರವರು ಹೊರಟಿದ್ದಾರೆಂದು ಪತ್ರಿಕೆಯಲ್ಲಿ ಬಂದಿತ್ತು. ಇವತ್ತಿಗೆ ಸುಮಾರು ಐದುವರೆ ವರ್ಷವಾಯಿತು. ಆ ವರದಿ ಸರ್ಕಾರಕ್ಕೆ ಕೊಟ್ಟು. ಆ ವರದಿಯ ಪ್ರತಿಗಳನ್ನು ನಮ್ಮ ಸದಸ್ಯರಿಗೆ ಪ್ರಿಂಟ್ ಮಾಡಿ ಹಂಚಬೇಕು. ಪ್ರಿಂಟ್ ಮಾಡಿ ಹಂಚುವ ಆ್ಯಕ್ಷನ್ ಪ್ರೋಗ್ರಾಮ ಕೂಡ ತಾವು ಈ ಅಧಿವೇಶನ ಮುಗಿಯುವ ಮೊದಲು you must place before this House your action plans. ಆ್ಯಕ್ಷನ್ ಪ್ರೋಗ್ರಾಮ ಮಾಡುವುದಕ್ಕೆ ಎಷ್ಟು ವರ್ಷಬೇಕು? ಕೇಂದ್ರ ಸರ್ಕಾರ ನಾನು ತಿಳಿದುಕೊಂಡಂತೆ ಅನೇಕ ವರ್ಷಗಳಿಂದ ಬಹುಶಃ ಈ 50ವರ್ಷಗಳಿಂದ ಜೈನರನ್ನು ಅಲ್ಪ ಸಂಖ್ಯಾತರು ಎಂದು ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರ ಇಬ್ಬರೂ ಸೇರಿ ವರ್ಗಿಕರಣ ಮಾಡಿದ್ದೆವು.ಆದರೆ ಇತ್ತೀಚಿಗೆ ಕೇಂದ್ರ ಸರ್ಕಾರವನ್ನು ಒಂದು ಅಲ್ಪಸಂಖ್ಯಾತರ ಪಟ್ಟಿಯಿಂದ ತೆಗೆದಿದ್ದಾರೆಂದು ನನಗೆ ವರ್ತಮಾನ ಬಂದಿತ್ತು. ದಯವಿಟ್ಟು ರಾಜ್ಯಸರ್ಕಾರ ಇದನ್ನು ತಾವು ಕೈಗೆತ್ತಿಕೊಂಡು ಜೈನರನ್ನು ಅಲ್ಪಸಂಖ್ಯಾತರ ವರ್ಗೀಕರಣದಲ್ಲಿ ಮುಂದುವರೆಸಿಕೊಂಡು ಹೋಗಬೇಕೆಂದು ತಾವು ತಮ್ಮ ಕ್ಯಾಬಿಟ್‌ನಲ್ಲಿ ನಿರ್ಣಯ ಮಾಡಿಕೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ತಮ್ಮನ್ನು ವಿಶೇಷವಾಗಿ ನಾನು ಕೇಳಿಕೊಳ್ಳುತ್ತೇನೆ. ಇನ್ನು ಚಿನ್ನಪ್ಪ ರೆಡ್ಡಿ ಕಮಿಷನ್ ಜಾರಿ ಮಾಡುವಾಗ ಏನು ಮಾಡಿದ್ದೇವೆ ಎಂದರೆ, ದೇವರಾಜ್ ಅರಸ್ ಸಂಶೋಧನಾ ಸಂಸ್ಥೆ ನಾವು ಸ್ಥಾಪನೆ ಮಾಡಿದೆವು. ಆದರೆ ಸ್ಥಾಪನೆ ಮಾಡಿದ್ದು ಬರೀ ಪುಸ್ತಕಗಳನ್ನು ಪ್ರಕಟಣೆ ಮಾಡುವುದಕ್ಕೆ ಅಲ್ಲ. ನಮ್ಮ ಉದ್ದೇಶ ಏನಿತ್ತು ಎಂದರೆ, ಆ ಒಂದು ಸಂಶೋಧನಾ ಕೇಂದ್ರವನ್ನು ಮಾಡಿದಾಗ, ಆ ಸಂಸ್ಥೆ ಮೈನಾರಿಟೀಸ್‌ಗೆ ಯಾವ ರೀತಿಯಲ್ಲಿ ನಾವು ಒಂದು ಸೋಷಿಯೋ ಎಕನಾಮಿಕ್ ಎಜ್ಯುಕೇಷನಲ್ ಸರ್ವೇ ಮಾಡಿದ್ದೇವೆ. ಇದಕ್ಕೆ ಒಂದು 50 ಲಕ್ಷ ರೂಪಾಯಿ ಅಥವಾ ಒಂದು ಕೋಟಿ ರೂಪಾಯಿ ವೆಚ್ಚವಾಗಬಹುದು. ಅಂತಹ ಡೋರ್ ಟು ಡೋರ್ ಸರ್ವೇ ನೀವು ಮಾಡಬೇಕೆಂದು ಒಂದು ಉದ್ದೇಶ ಸರ್ಕಾರದ ಆಜ್ಞೆ ನಾವು ನೀಡುವಾಗಲೀ

ಆ ವಿಷಯವನ್ನೂ ಕೂಡ ಹೇಳಿದ್ದೆವು. ಕೆಲವು ವಿಷಯಗಳನ್ನು ಕೆಲವು ಕಾರ್ಯಕ್ರಮಗಳನ್ನು ಕೂಡ ನೀವು ಹಾಕಬೇಕೆಂದು ಒಂದು ಸರ್ಕಾರಿ ಆಜ್ಞೆಯಲ್ಲಿ ನಾವು ಕೇಳಿದ್ದೇವೆ. ಆದರೆ ಇವತ್ತಿಗೂ ಕೂಡ ಈ ಕೆಲಸ ಆಗಿಲಿಲ್ಲ. ನೀವು ಬ್ಯಾಕ್‌ವರ್ಡ್ ಕ್ಲ್ಯಾಸ್ ಕಮಿಷನ್ ಮಾಡುವಾಗ , ರಿ ಕಾನ್‌ಸ್ಟಿಟ್ಯೂಟ್ ಮಾಡುವಾಗ 3-4 ವರ್ಷ ಹೋಗಿದೆ. ಆದ್ದರಿಂದ ನಾವು ದೇವರಾಜ ಅರಸ್ ಸಂಶೋಧನಾ ಕೇಂದ್ರ ಮಾಡಿದ ಉದ್ದೇಶ ಏನು ಆ ದಿವಸ ಗವರ್ನಮೆಂಟ್ ಆರ್ಡರ್‌ನಲ್ಲಿ ಕಾಣಸಿದ್ದೇವೆ,ಆ ರೀತಿ ದಯಮಾಡಿ ಅದರ ಬಗ್ಗೆ ಒಂದು ಸೋಷಿಯೋ ಎಕನಾಮಿಕ್ ಸರ್ವೇ, ಮಾಡಿ ನಾನು ಸಣ್ಣ ಕೈಗಾರಿಕಾ ಮಂತ್ರಿ ಆಗಿದ್ದಾಗ ನಾವು ಎಂಟೈರ್ ಸ್ಟೇಟ್‌ನಲ್ಲಿ ಆರ್ಟಿಸನ್ ಸರ್ವೇ ಮಾಡಿದ್ದೆವು. ಅದರಲ್ಲಿ ಅನೇಕ ಆರ್ಟಿಸಾನ್ಸ್ ಇದ್ದವು. Unless you have this a survey report before you, we cannot do any thing ಏಕೆಂದರೆ ಪಂಚಾಯತ್ ಆ್ಯಕ್ಟ್‌ನಲ್ಲಿ ಫರ್ಸ್ಟ್ ಟೈಮ್ ನಮ್ಮ ದೇಶದಲ್ಲಿ ಹಿಂದುಳಿದ ವರ್ಗದವರಿಗೂ ಕೂಡ ಒಂದು ರಿಸರ್ವೇಷನ್ ಕೊಡತಕ್ಕಂತಹ ಆಜ್ಞೆ ಮಾಡಿದ್ದೆವು. ಏನು ಸೈಂಟಿಫಿಕ್ಕಾಗಿ ಆದನ್ನು ಮಾಡಿದ್ದೇವೆ ಎಂದರೆ, ಹಿಂದೆ 10,000 ರೂಪಾಯಿ ಒಳಗೆ ಇನ್‌ಕಮ್ ಇದ್ದರೆ ಅವರು ಬ್ಯಾಕ್‌ವರ್ಡ್ ಕ್ಲ್ಯಾಸ್. ಉಳಿದವರು ಅಲ್ಲ ಎಂದು ನಾವು ಅದನ್ನು ಸೈಂಟಿಫಿಕ್ಕಾಗಿ ಕ್ಲ್ಯಾಸಿಫಿಕೇಷನ್ ಮಾಡಿ ಯಾವ ರೀತಿಯಲ್ಲಿ ಒಂದು ಸೈಂಟಿಫಿಕ್ ರೀತಿಯಲ್ಲಿ ರಿಸರ್ವೇಷನ್ ಪಾಲಿಸಿ ಆಗಬೇಕೆಂದು ನಾವು ಮಾಡಿದ್ದೆವು. ಆದ್ದರಿಂದ ತಾವು ದಯಮಾಡಿ ದೇವರಾಜ್ ಅರಸ್ ಸಂಶೋಧನಾ ಕೇಂದ್ರಗಳನ್ನು ಬರೀ ಭಾಷಣ ಮಾಡುವುದಕ್ಕೆ ಅಥವಾ ಪುಸ್ತಕಗಳನ್ನು ತರುವುದಕ್ಕೆ ಅಥವಾ ಬರೀ ಡಾಕ್ಯುಮೆಂಟ್‌ಗಳನ್ನು ತರುವುದಕ್ಕೆ ಉಪಯೋಗಿಸದೆ, ಯಾವ ಉದ್ದೇಶದಿಂದ ಆ ಒಂದು ಸಂಸ್ಥೆ ಸ್ಥಾಪನೆಯಾಗಿತ್ತು, ಇದಕ್ಕೆ ತಕ್ಷಣ ಸರ್ವೇ ಆಗಬೇಕು. You release one crore of rupees ಸರ್ವೇ ಪ್ರಾರಂಭಮಾಡಿ.ಇದರಿಂದ ಒಳ್ಳೆಯ ಪ್ರಯೋಜನ ಇದೆ. ಎಲ್ಲರೂ ಕೂಡ ಇದರಿಂದ ವಿಶೇಷವಾದ ಲಾಭ ಪಡೆಯುವುದಕ್ಕೆ ಸಾಧ್ಯ ಇದೆ ಎಂದು ಹೇಳಿ, ಅದಕ್ಕೆ ವಿಶೇಷವಾದ ವ್ಯಾಖ್ಯಾನವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಎಸ್.ಸಿ/ಎಸ್.ಟಿ ಬಗ್ಗೆ ಕೂಡ ಒಂದು ಸೋಷಿಯೋ ಎಕನಾಮಿಕ್ ಎಜ್ಯುಕೇಷನಲ್ ಸರ್ವೇ ಮಾಡಬೇಕಾದ ನಿಜವಾಗಿ ಒಂದು ನಮ್ಮ ಸರ್ಕಾರದ ಕಾರ್ಯಕ್ರಮಗಳ ಯೋಜನೆಗಳ ಫಲ ಎಲ್ಲಾ ಸಮಾಜದ ಆಯಾಯ ವರ್ಗದ ಎಲ್ಲಾ ಪದವಿಗೆ ತಲುಪಬೇಕಾದ ವರ್ಕ್ ಅಲಾಟ್ ಆಗಬೇಕು. ಯಾವ ಜನ ಏನು ಮಾಡುತ್ತಿದ್ದಾರೆ, ಯಾವ ಕಾರ್ಯಕ್ರಮಗಳನ್ನು ಕೊಡುವುದಕ್ಕೆ ಸಾಧ್ಯ ಇದೆ, ಬರೀ ಮ್ಯಾಕ್ರೋ ಪ್ರೋಗ್ರಾಂ ನಿಂದ ಸಾಧ್ಯವಾಗುವುದಿಲ್ಲ. ಮೈಕ್ರೋ ಪ್ರೋಗ್ರಾಂನಲ್ಲಿ ಇವತ್ತು ಯೋಜನೆಗಳ ಅವಶ್ಯಕತೆ ಇದೆ. ಅದನ್ನು ಗುರುತಿಸಿದೆ ಇದ್ದರೆ ಬೇಸಿಕ್ ಫಂಡಮೆಂಟಲ್ ಡ್ಯೂಟೀಸ್ ಐಡೆಂಟಿಫಿಕೇಷನ್ ಕೆಲಸ ನೀವು ಮಾಡದೆ ಇದ್ದರೆ ಬೇರೆ ಯಾವ ಕೆಲಸವು ಪ್ರಯೋಜವಾಗುವುದಿಲ್ಲ. ಈ ಕಾರ್ಯಕ್ರಮ ಎಲ್ಲಾ ಆ ಸಂಶೋಧನಾ ಕೇಂದ್ರಕ್ಕೆ ನಾವು ಒಪ್ಪಿಸಿಕೊಟ್ಟಿದ್ದೇವೆ. ಆದೂ ಕೂಡ ಆಗಬೇಕು. ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಬಗ್ಗೆ ನಾನು ಹೇಳುವುದು ಇದ್ದರೆ ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಇದು ನಮ್ಮ ಕರ್ನಾಟಕ ರಾಜ್ಯದ ಒಂದು ದೊಡ್ಡ ದುರಂತ ಎಂದು ಹೇಳಿದರೂ ಅತಿಶಯೋಕ್ತಿ ಆಗಲಾರದು. ಇತ್ತೀಚೆಗೆ ಬಂದಂತಹ ವರ್ತಮಾನದ ಪ್ರಕಾರ ಕಾನೂನು ವ್ಯವಸ್ಥೆಯಲ್ಲಿ ಕೇಂದ್ರದ ಗೃಹ ಇಲಾಖೆಯಿಂದ ಒಂದು ಪ್ರಕಟಣೆ ಬಂದಿತ್ತು. ಅವರು ಏನು ಹೇಳುತ್ತಾರೆಂದರೆ, ಪಾಟ್ನಾ ಮತ್ತು ಪುಣೆ ನಗರವನ್ನು ಹೊರತುಪಡಿಸಿ ದೇಶದಲ್ಲೇ ಅತಿ ಹೆಚ್ಚು ಅಪರಾಧಗಳು ಸಂಭವಿಸುವ ನಗರ ಎಂಬ ಕುಖ್ಯಾತಿಗೆ ಬೆಂಗಳೂರು ಪಾತ್ರವಾಗಿದೆ. once known ad a garden city, once known as a cosmopolitan

city, ona best known for law and order,........ ಕೈಗಾರಿಕೆಗಳು ಇಲ್ಲಿ ಬರತಕ್ಕಂತಹ ಆಲೋಚನೆ ಏನೆಂದರೆ, ಇಲ್ಲಿ ಒಳ್ಳೆಯ ಲಾ ಅಂಡ್‌ಆರ್ಡರ್ ಸಿಚ್ಯುಯೇಷನ್ ಇದೆ ಎಂದು ಹೌಸ್‌ಓಲ್ಡ್ ಇಂಪ್ರೆಷನ್ ಜನಗಳಿಗೆ ಇದೆ. ಇವತ್ತು ಪಾಟ್ನಾ ಮತ್ತು ಪುಣೆ ನಗರವನ್ನು ಹೊರತು ಪಡಿಸಿದ್ದಾರೆ. ದೇಶದಲ್ಲೇ ಅತ್ಯಂತ ಅಪರಾಧಗಳ ಪ್ರಕರಣಗಳು ಸಂಭವಿಸುವ ನಗರ ಎಂಬ ಕುಖ್ಯಾತಿಗೆ ಬೆಂಗಳೂರು ಪಾತ್ರವಾಗಿದೆ. ಕಲ್ಕತ್ತ ಅತಿ ಕಡಿಮೆ ಅಪರಾಧ ನಡೆಯುವ ನಗರವಾಗಿದೆ. ಪಾಟ್ನಾದಲ್ಲಿ ಪ್ರತಿ ಒಂದು ಲಕ್ಷ ಜನ ಸಂಖ್ಯೆಗೆ 114 ಅಪರಾಧಗಳು ಆದರೆ, ಬೆಂಗಳೂರಿನಲ್ಲಿ ಒಂದು ಲಕ್ಷ ಜನಸಂಖ್ಯೆ 103 ಅಪರಾಧ ಪ್ರಕರಣಗಳಿವೆ. ಇದು ಕೇಂದ್ರ ಸರ್ಕಾರಕ್ಕೆ ಗೃಹ ಇಲಾಖೆ ಕೊಟ್ಟಂತಹ ಒಂದು ಪ್ರಕಟಣೆ. ಅವತ್ತು ಎಂತಹ ದುರಂತ ಬಿಹಾರಿನ ಪಾಟ್ನಾ ಕರ್ನಾಟಕದ ಬೆಂಗಳೂರು ಇದಕ್ಕೆ ಹೋಲಿಸತಕ್ಕಂತಹ ದುಸ್ಥಿತಿಗೆ ನಾವು ಬರುವುದಿದ್ದರೆ ಯಾವ ಮಟ್ಟವನ್ನು ಇವತ್ತು ಬೆಂಗಳೂರು it is a reflection on the entire State.... ಅತಿ ದೊಡ್ಡ ದುರಂತದ ವಿಚಾರ ಎಂದರೆ, ನಾವೂ ಕೂಡ ವಿಶೇಷವಾಗಿ ಮಾನ್ಯ ಹಿರಿಯ ಸದಸ್ಯರಾದಂತಹ ಶ್ರೀ ವಾಟಾಳ್‌ನಾಗರಾಜ್‌ರವರು ತಾವು ಪ್ರಶ್ನೆ ಕೂಡ ಹಾಕಿದ್ದೀರಿ. ಎಷ್ಟು ಸುಲುಗೆ ಆಗಿದೆ, ಅಪರಾಧಗಳ ಸಂಖ್ಯೆ ಎಷ್ಟು, ದರೋಡೆ ಎಷ್ಟು ಆಗಿದೆ, ವರ್ಷದಿಂದ ವರ್ಷಕ್ಕೆ 1996ರಲ್ಲಿ 221 ದರೋಡೆ ಆದರೆ, 1997ರಲ್ಲಿ 214, ಆದರೆ 31. 1.99ಕ್ಕೆ 254ಕ್ಕೆ ಹೋಯಿತು. ನೀವು ಪ್ರಶ್ನೆ ಹಾಕಿದ್ದಕ್ಕೆ ಸರ್ಕಾರ ಉತ್ತರ ಕೊಟ್ಟಿದೆ. 1996ರಲ್ಲಿ 808 ಸುಲಿಗೆ ಆದರೆ, 1997ರಲ್ಲಿ 886, 31. 1.99ಕ್ಕೆ 989ಕ್ಕೆ ಏರಿದೆ. ಕೊಲೆ ಕೂಡ ಹಾಗೆ 1,412 ಈಗಾಗಲೇ ಆಗಿ ಬಿಟ್ಟಿದೆ. ಲೂಟಿ ಎಲ್ಲಾ ರೀತಿಯಲ್ಲಿ ನಗರದ ವರದಿ ಕೂಡ ಕೊಟ್ಟಿದ್ದಾರೆ. ಅದರ ಉತ್ತರ ಕೂಡ ಇಲ್ಲಿ ಕೊಟ್ಟಿದ್ದಾರೆ. Anti-Gowda Ministers attacked at Dal Meet-Ugly scenses...... ನೀವು ಫೋಟೋ ನೋಡಿ. ಸಿಟಿ ಪೋಲೀಸ್ ಕಮಿಶನರ್‌ರವರಿಗೆ ಸಿಂಧ್ಯಾರವರು ತಮ್ಮ ತಲೆಗೆ ಆಗಿರುವ ಗಾಯವನ್ನು ತೋರಿಸುತ್ತಿದ್ದಾರೆ.

ಶ್ರೀ ಸಿ.ಆರ್ ಸಗೀರ್ ಅಹಮದ್: ಮಾನ್ಯ ಉಪಾಧ್ಯಕ್ಷರೆ, ಸಿಂಧ್ಯಾರವರಿಗೆ ಗಾಯವಾಗಿರುವಂಥ ವಿಷಯವನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಇಂದು ಸದನದಲ್ಲಿ ಸಿಂಧ್ಯಾರವರ ಗಾಯ ಕಾಣುತ್ತಿಲ್ಲ. ಆದರೆ ಅಂದು ಸಿಂಧ್ಯಾರವರಿಗೆ ಬಿದ್ದಿರುವ ಪೆಟ್ಟಿನ ಗಾಯವನ್ನು ತಾವು ಪೋಟೋದಲ್ಲಿ ನೋಡಬಹುದು. ಇದರಿಂದ ತಮಗೆ ಗೊತ್ತಾಗುತ್ತದೆ ನಮ್ಮ ರಾಜ್ಯದಲ್ಲಿರುವ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿ ವಿಚಾರ. ಮಂತ್ರಿಗಳಿಗೇ ರಕ್ಷಣೆ ಕೊಡುವ ವಿಚಾರದಲ್ಲಿ ಈ ಸರ್ಕಾರ ವಿಫಲವಾಗಿರುವಾಗ ಇನ್ನು ಈ ನಾಡಿನ ಜನರಿಗೆ ಯಾವ ರೀತಿಯಾಗಿ ರಕ್ಷಣೆಯನ್ನು ಇವರು ಕೊಡುತ್ತಿದ್ದಾರೆ ಎಂಬ ಬಗ್ಗೆ ನಾವು ಮತ್ತು ತಾವು ಆಲೋಚನೆ ಮಾಡಬೇಕಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಸಿಂಧ್ಯಾರವರು ಏನು ಹೇಳಿದ್ದಾರೆಂದರೆ I have asked both the Chief Minister Sri J.H. Patel and party president Mr. Shard Yadav to take action, ಇದು ನಿಮ್ಮ ಪಾರ್ಟಿ ಮ್ಯಾಟರ್‌ಅಲ್ಲ, ಕಾನೂನು ಮತ್ತು ಸುವ್ಯವಸ್ಥೆಯ ಪ್ರಶ್ನೆ ಇದಾಗಿದೆ. ಇವೊತ್ತು ಕಾನೂನಿನ ವಿಚಾರವನ್ನು ತಾವು ಮಾಡಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಯಾವ ರೀತಿಯ ಎನ್‌ಕ್ವೈರಿಗೆ ಆರ್ಡ್‌ರ್ ಮಾಡಿದ್ದೀರಿ? ನಿಮಗೆ ಏನು ವರದಿ ಬಂದಿದೆ? ಈಗ ಸಿಂಧ್ಯಾರವರೇ ಗೃಹ ಮಂತ್ರಿಗಳಾಗಿದ್ದಾರೆ. ಗೃಹ ಮಂತ್ರಿಗಳಾಗ ತಕ್ಕಂಥವರಿಗೇ ಅಥವಾ ಯಾವುದೇ ಒಬ್ಬ ಮಂತ್ರಿಗಳಿಗೇ ಆ ರೀತಿಯಲ್ಲಿ ಅಟ್ಯಾಕ್ ಆದರೆ ಉಳಿದವರ ಗತಿ ಏನು? ನಿನ್ನೆ ಪತ್ರಿಕೆಯಲ್ಲೂ ಕೂಡ ವರದಿ ಬಂದಿದೆ.

ಶ್ರೀ ಸಿ.ಆರ್ ಸಗೀರ್ ಅಹಮದ್: ಉಪಾಧ್ಯಕ್ಷರೆ, ಇದೇನೂ ಮೊದಲ ಘಟನೆಯಲ್ಲ. ಮೈಸೂರಿನಲ್ಲೂ ಕೂಡ ಇದೇ ರೀತಿಯ ಒಂದು ಘಟನೆ ನಡೆದಿದೆ. ಕಪಾಳ ಮೋಕ್ಷ ಆಗಿರುವ ವಿಚಾರ ಪತ್ರಿಕೆಗಳಲ್ಲಿ ವರದಿಯಾಗಿದೆ. ಮುಖದ ಮೇಲೆ ಹೊಡೆದಿರುವಂಥ ಘಟನೆ ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಇದರ ಬಗ್ಗೆ ಕೂಡ ಸರ್ಕಾರ ಮೊಕದ್ದಮೆಗೆ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಬಿ.ಬಿ. ಶಿವಪ್ಪ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವೀರಪ್ಪಮೊಯಿಲಿಯವರು ಮಾತನಾಡುತ್ತಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದಂತೂ ಈಗಾಗಲೇ ತೀರ್ಮಾನವಾಗಿದೆ. ಇಂದು ಚಪ್ಪಲಿ ಹೊಡೆಯುವರು, ಕಪಾಳ ಮೋಕ್ಷ ಮಾಡುವವರೆಲ್ಲರೂ ಈಗ ಮಂತ್ರಿಗಳ ಕಡೆಗೆ ತಿರುಗಿಬಿಟ್ಟಿದ್ದಾರೆಯಾದ ಕಾರಣ ಸಾರ್ವಜನಿಕರೆಲ್ಲರೂ ಕ್ಷೇಮವಾಗಿರಬಹುದು ಎನ್ನುವುದು ನನ್ನ ಭಾವನೆಯಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಗುಲ್ಬರ್ಗಾದಲ್ಲಿ ವಿಠಲ್ ಹೆರೂರ್ ಎನ್ನುವವರ ಮೇಲೆ ಅಟ್ಯಾಕ್ ಮಾಡಿದ್ದಾರೆ. ಸುರತ್ಕಲ್‌ನ ಪ್ರೇಯರ್ ಹಾಲ್‌ನಲ್ಲಿ ಅಟ್ಯಾಕ್ ಆಗಿರುವ ವಿಚಾರ. ಇನ್ನೂ ಬಹಳ ಇದೆ. ಮಾನ್ಯ ಮುಖ್ಯಮಂತ್ರಿಗಳೇಹೇಳಿರುವ ಹಾಗೆ Chief Minister J.H. Patel castigated on Bangalore police for corruption and inefficiency in the department, ಎಂದು ಪತ್ರಿಕೆಯಲ್ಲಿ ಬಂದಿದೆ.ಇನ್ನು ಡಕಾಯಿತಿ, ಮರ್ಡ್‌ರ್, ರಾಬರಿ ಸುದ್ದಿಗಳು ಅಂದು ದಿನನಿತ್ಯ ಬರುವಂತವುಗಳಾಗಿವೆ. ಹೀಗಿರುವಾಗ the Government has not acted on anything.... ಯಾರ ತಲೆ ಕೂಡ ಉರುಳಲಿಲ್ಲ. ಇಂದು ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಏನೆಂದರೆ ಇಂದು ಬೆಂಗಳೂರು ಪೋಲೀಸ್‌ರಲ್ಲಿ ಕರೆಪಶನ್‌ಮತ್ತು ಅದಕ್ಷತೆ ಇದೆಯೆಂದು ಮುಖ್ಯಮಂತ್ರಿಗಳೇ ಹೇಳಿದ್ದಾರೆಂದರೆ ಯಾವ ಕ್ರಮಗಳನ್ನು ಅಂಥವರ ಮೇಲೆ ತೆಗೆದುಕೊಂಡಿದ್ದಾರೆ ಎಂದು ನಾನು ಪ್ರಶ್ನಿಸುತ್ತೇನೆ. ಆದುದರಿಂದ ಇಂದು marked rise of attack on minorities. Eveteasers are no longer just vulgar. They have turned murderers.

ಇನ್ನು ಮದ್ರಾಸ್‌ನಲ್ಲಿ ಯೀವ್ ಟೀಸರ್ಸ್ ಅನ್ನು ನಿಲ್ಲಿಸಲಿಕ್ಕೆ ಹೋಗಿ ಮರ್ಡರ್ ಆಗಿದೆ. ಬೆಂಗಳೂರಿನಲ್ಲೂ ಕೂಡ eve-teasers are no longer just vulgar but they have turned murderers, ಬೆಂಗಳೂರು ಸಿಟಿಯಲ್ಲಿ ಈ ರೀತಿಯಾಗುತ್ತಿದೆ. ಇನ್ನು ದೀಪ್ತಿ ಎನ್ನುವ ಹುಡುಗಿ ಬಗ್ಗೆ ಹೇಳಬೇಕೆಂದರೆ eve-teasing in its most givesome one ended in the list of a 20 year Dental Student in thecity on January 9th ಇನ್ನು ನಿನ್ನೆ ಪತ್ರಿಕೆಯಲ್ಲೂ ಕೂಡ ವರದಿ ಬಂದಿದೆ.ಅದೇನೆಂದರೆ a small boy of 4 years for was kidapped for money, ransom and found murdered, ಈ ರೀತಿಯಲ್ಲಿ ದಿನಬೆಳಗಾದರೆ ಒಂದಲ್ಲ ಒಂದು ಕಥೆ ರಾಜ್ಯದಲ್ಲಿ ಮರ್ಡರ್ ಆಗುತ್ತಿರುವದನ್ನು ಪತ್ರಿಕೆಯಲ್ಲಿ ಓದುತ್ತಿದ್ದೇವೆ. ಇನ್ನು ಭಾರಿ ಖೋಟಾ ನೋಟುಗಳ ಬಗ್ಗೆಯೂ ವರದಿ ಬಂದಿದೆ. ಇನ್ನು ಕಾರವಾರದಲ್ಲಿ ಮಾದಕ ದ್ರವ್ಯಗಳ ಮಾರಾಟದ ವ್ಯವಸ್ಥಿತ ಜಾಲದ ಬಗ್ಗೆಯೂ ವರದಿ ಬಂದಿದೆ. ಈ ವ್ಯವಸ್ಥಿತ ಜಾಲದಲ್ಲಿ ಪ್ರತಿಷ್ಠಿತರಿದ್ದಾರೆ ಎಂದು ಬಂದಿದೆ. ಆ ಪ್ರತಿಷ್ಠಿತರು ಯಾರು? ಯಾರೇ ಆಗಿರಲಿ ಹಿಡಿದು ದಂಡಿಸಬೇಕಾಗಿದೆ. ನಿಮ್ಮ ಪೋಲೀಸ್ ಜಾಗೃತಾ ದಳಗಳೇ ಇರುತ್ತವೆ.

ನೀವು ಇವುಗಳ ಬಗ್ಗೆ ಪರಿಶೀಲನೆ ಮಾಡಿರಬಹುದೇನೋ, ಬಾಂಬೆಯಿಂದ ಬರತಕ್ಕಂಥ ಗ್ಯಾಂಗ್‌ಗಳು ಹಾಗೂ ಬೇರೆ ಬೇರೆ ಕಡೆಯಿಂದ ಬರತಕ್ಕಂಥ ಗ್ಯಾಂಗ್‌ಗಳು ಇರುತ್ತದೆ They take one side,. ಬಾಂಬೆ ಪೋಲೀಸ್ ಮತ್ತು ಕರ್ನಾಟಕದ ಪೋಲೀಸ್‌ನವರ ಜೊತೆ ಲಿಂಕ್ ಇದೆ. ಒಂದು ಗ್ಯಾಂಗ್‌ನವನು ಅಲ್ಲಿಂದ ಹೊರಟ ಎಂದ ಕೂಡಲೇ ಮತ್ತೊಂದು ಗ್ಯಾಂಗ್‌ನವನು ಅವನನ್ನು ಮರ್ಡರ್ ಮಾಡುವುದಕ್ಕೆ ಪೋಲೀಸನವರನ್ನೇ ಉಪಯೋಗಿಸಿಕೊಳ್ಳುತ್ತಾ. This is what is happening. I am making serious allegations with all responsiblity ಈ ರೀತಿ ಷಾಮೀಲಾದರೆ ಮರ್ಡ್‌ರ್ ಮಾಡಿದವರನ್ನು ಬೇಗೆ ಹಿಡಿಯುವುದಕ್ಕಾಗುತ್ತದೆ. ಒಬ್ಬ ಕ್ರಿಮಿನಲ್ ಬಾಂಬೆಯಿಂದ ಹೊರಟ ಎಂದಕೊಡಲೇ ಅವನ ಬಗ್ಗೆ ಬಾಂಬೆ ಪೋಲೀಸ್ ಇಲ್ಲಿಯ ಗ್ಯಾಂಗ್‌ನವನಿಗೆ ತಿಳಿಸುತ್ತಾನೆ. ಇಲ್ಲಿಯ ಗ್ಯಾಂಗ್‌ನವನು ಇಲ್ಲಿಯ ಪೋಲೀಸರ ಜೊತೆ ಷಾಮೀಲಾಗಿ some of the police totally align with them a .There is protection..... They are colluded..... ಈ ರೀತಿಯಲ್ಲಿ ಮರ್ಡ್‌ರ್‌ಗಳು ಇಂದು ಆಗುತ್ತಿವೆ. ಕರ್ನಾಟಕ ರಾಜ್ಯದಲ್ಲಿ ಆ ರೀತಿಯಾಗಿ ವ್ಯಾಪಕವಾಗಿ ಪೋಲೀಸರು ಷಾಮೀಲಾಗಿ ಮರ್ಡ್‌ರ್‌ಗಳು ನಡೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇವೊತ್ತು ಮಂತ್ರಿಗಳ ವಿಚಾರದಲ್ಲೂ ಕೂಡ ಪತ್ರಿಕೆಗಳು ಹೇಳುತ್ತಲೇ ಬಂದಿದೆ. ಇದು ಏಕೆಂದರೆ ಅಂಥ ವಾತಾವರಣ ಇದೆ. ಮಂತ್ರಿಗಳ ವಿಚಾರದಲ್ಲಿ ಗೊಂದಲ ಜನಗಳಲ್ಲಿ ಉಂಟಾಗುತ್ತದೆ. Alright the Minister not involved. But the Ceasar's Wife should be above suspicion. ಆದರೆ ನಿಜವಾಗಿ ಜನಗಳಲ್ಲಿ ಗೊಂದಲ ಉಂಟಾಗುತ್ತದೆ. This will have serious impact on the law and order..... ಮಂತ್ರಿಗಳ ಮೇಲೆ ಯಾವುದಾದರೂ ಸೀರಿಯಸ್ ಚಾರ್ಜ್‌ಸ್ ಇರುವಾಗ ಅದನ್ನು ನೀವು passive spectator ಆಗಿ ನೀವು ಅಥವಾ ಸರ್ಕಾರ ಸುಮ್ಮನೇ ಕುಳಿತುಕೊಂಡು ಅದು ಸಸ್ಪೆಕ್ಟೆಡ್ ಲಿಸ್ಟ್ ಅಂದರೆ ಏನು? We are also Advocates, ಒಂದು ಚಾರ್ಜ್‌ಶೀಟ್‌ನಲ್ಲಿ ಕೆಲವು ಅಕ್ಯೂಸ್ಡ್‌ಗಳ ಬಗ್ಗೆ ಇಂಟರ್‌ಗೇಷನ್ ಮತ್ತು ಇನ್‌ವೆಸ್ಟಿಗೇಷನ್ ಮತ್ತು ಇನ್‌ವೆಸ್ಟಿಗೇಷನ್ ಕಂಪ್ಲೀಟ್ ಆಗಿರುತ್ತದೆ ಆದರೆ ಮತ್ತೊಂದು ಸೆಟ್ ಅಫ್ ಅಕ್ಯೂಸ್ಡ್‌ಗಳ ಮೇಲೆ ಇನ್‌ವೆಸ್ಟಿಗೇಷನ್ ಕಂಪ್ಲೀಟ್ ಆಗಿರವುದಿಲ್ಲ. It must have been half a way three or fourth ಆಗಿರಬಹುದು. ಅಂಥವರನ್ನು ಸಸ್ಪೆಕ್ಟೆಡ್ ಲಿಸ್ಟ್‌ನಲ್ಲಿ ಹಾಕಿ ಆಮೇಲೆ ಸೆಕೆಂಡ್ ಚಾರ್ಜ್‌ಶೀಟ್ ಹಾಕುತ್ತಾರೆ. It is so simple, fundamental law, the criminal investigation code. ಸಸ್ಪೆಕ್ಟೆಡ್ ಲಿಸ್ಟ್ ಆದಕೂಡಲೇ ಅವರನ್ನು exonerateಮಾಡಿದೆ ಎಂಬ ಅರ್ಥ ಅಲ್ಲ. ಇವೊತ್ತು ನಮಗೆ ಬೇಕಾದದ್ದು ಇಷ್ಟೆ . ಆ ಸಸ್ಪೆಕ್ಟೆಡ್ ಲಿಸ್ಟ್ ಸುಳ್ಳೋ ಅಥವಾ ಸತ್ಯವೋ ಎಂಬುದು ನಂತರ ಬರುತ್ತದೆ. ಆದರೆ ಆ ಸಸ್ಪೆಕ್ಟ್‌ಡ್ ಲಿಸ್ಟ್ ಎಂದು ಹೇಳಿದರೆ he is as good as an accused till he does not find a place in the charge-sheet, ಅದು ಮಂತ್ರಿಗಳ ವಿಚಾರದಲ್ಲಿ ತಕ್ಷಣ ನೀವು ಜಾಗ್ರತೆಯಾಗಿ ಎನ್‌ಕ್ವೈರಿ ಮಾಡಬೇಕಾದದು ಸರ್ಕಾರದ ಜವಾಬ್ದಾರಿಯಾಗಿದೆ. ಆ ಕಾರಣದಿಂದ ಸರ್ಕಾರ ಇದರ ಬಗ್ಗೆ ಸ್ಪಷ್ಟವಾದ ಹೇಳಿಕೆ ಯನ್ನು ಕೊಡಬೇಕು ಹೊರತು ಅದಕ್ಕೆ ಬದಲು ಅಕ್ಯೂಸ್ಡ್ ಬಗ್ಗೆ ಚಾರ್ಜ್‌ಶೀಟ್‌ನಲ್ಲಿ ಇನ್ನೂ ಸೇರಿಲ್ಲ, ನಾಳೆ ಸೇರಬಹುದು ಅಥವಾ ನಾಳಿದ್ದು ಸೇರಬಹುದು ಅಥವಾ ಸೇರದೇಯೇ ಇರಬಹುದು ಎಂದು ಹೇಳುವುದಕ್ಕೆ ಬರುವುದಿಲ್ಲ. You must see that culprits are brought to books ಮತ್ತು ಇದಕ್ಕೆ ಸಂಬಂಧಪಟ್ಟಂತೆ ನೀವು ಸರಿಯಾದಂಥ ಪರಿಸ್ಥಿತಿಯ ಹಂತಕ್ಕೆ ತರಬೇಕಾದ

ಅವಶ್ಯಕತೆಯಿದೆ. ಇಲ್ಲದೇ ಹೋದರೆ ಏನಾಗುತ್ತದೆ ಎಂಬುದನ್ನು ನೀವು ತಿಳಿದುಕೊಳ್ಳಬೇಕು. ಇಂಟ್ರಾಗೇಟ್ ಮಾಡುವಾಗ ಸಾಕ್ಷಿಗಳು ಇರುತ್ತಾರೆ. ಇಂಥ ವಿಟ್‌ನೆಸ್‌ಗಳನ್ನು ಅಥವಾ ಪೋಲೀಸ್ ಇನ್‌ವೆಸ್ಟಿಗೇಷನ್‌ಗಳನ್ನು ಪ್ರಭಾವಯುತವಾದ ವ್ಯಕ್ತಿಗಳು police investigation scuttle ಮಾಡತಕ್ಕಂಥ ಶಕ್ತಿಯನ್ನು ಹೊಂದಿರುತ್ತಾರೆ. ಅದನ್ನು ನೀವು ಮರೆಯಬಾರದು. ನಿಜವಾದಂಥ ರೂಲ್ ಆಫ್ ಲಾವನ್ನು ಕರ್ನಾಟಕದಲ್ಲಿ ನಿರ್ವಹಿಸುವಲ್ಲಿ ನಿಮಗೆ ಆಸಕ್ತಿ ಇದ್ದದ್ದೇ ಆದರೆ ಅಂಥ ಪ್ರವೃತ್ತಿಗಳನ್ನು ನಿಲ್ಲಿಸಬೇಕು. ಏಕೆಂದರೆ ಅದು ಒಳ್ಳೆಯ ಲಕ್ಷಣವಲ್ಲ. ಇದರ ಬಗ್ಗೆ ಸರ್ಕಾರ ಸ್ಪಷ್ಟೀಕರಣವನ್ನು ನೀಡಬೇಕಾಗುತ್ತದೆ. ಇತ್ತೀಚೆಗೆ ನಂಜನಗೂಡಿನಲ್ಲಿ ಗುಂಪು ಘರ್ಷಣೆಯಾಗಿ ಒಬ್ಬನಿಗೆ ಇರಿತವಾಗಿದೆ, ಆಟೋರಿಕ್ಷಾಕ್ಕೆ ಬೆಂಕಿ ಹಾಕಲಾಗಿದೆ, ಇದೇ ರೀತಿಯಲ್ಲಿ ನಟೋರಿಯಸ್ ಕ್ರಿಮಿನಲ್ಸ್‌ಗಳ ಬಗ್ಗೆ ಮತ್ತು ಅನೇಕ ಇಂಥವರ ಬಗ್ಗೆ ಪ್ರತಿ ನಿತ್ಯ ಪತ್ರಿಕೆಗಳಲ್ಲಿ ವರದಿ ಬರುತ್ತಲೇ ಇರುತ್ತದೆ. ಮಹಿಳೆಯರ ಮೇಲೆ ಅಟ್ರಾಸಿಟಿಯಾಗುತ್ತಿರುವ ಬಗ್ಗೆ ವರದಿ ಬರುತ್ತಿರುತ್ತದೆ. ವರದಕ್ಷಿಣೆ ಸಾವುಗಳ ಬಗ್ಗೆ ವರದಿ ಬರುತ್ತಿರುತ್ತದೆ ಕರ್ನಾಟಕ ರಾಜ್ಯದಲ್ಲಿ ಪ್ರತಿನಿತ್ಯ. ವರದಕ್ಷಿಣೆ ಸಾವುಗಳು ಆಗುತ್ತಿರುವದನ್ನು ನೋಡುತ್ತಿದ್ದೇವೆ. ಅದರಲ್ಲೂ ಬೆಂಗಳೂರು ನಗರದಲ್ಲಿ ಹೆಚ್ಚಾಗಿ ಆಗುತ್ತಿರುವುದನ್ನು ಪತ್ರಿಕೆಗಳಲ್ಲಿ ಓದಿತ್ತಿದ್ದೇವೆ. ಇಷ್ಟು ಮಾತ್ರವಲ್ಲ ಈಗ ಡೌರಿ ಡೆತ್‌ಗಳಲ್ಲೂ ಕೂಡ law is very strict. There is a report also, ಆದುದರಿಂದ ತಾವು ದಯಮಾಡಿ ಈ ಡೌರಿ ಆ್ಯಕ್ಟ್‌ನ್ನು ನೋಡಬೇಕಾಗುತ್ತದೆ. ಯಾವುದೇ ಮನೆಗೆ ಸೊಸೆಯಾಗಿ ಹೋದ ಹುಡುಗಿಯ ಮರಣ 7 ವರ್ಷದೊಳಗೆ ಆಗಿದ್ದು ಅದು ನಾರ್ಮಲ್ ಡೆತ್‌ಆಗದಿದ್ದರೆ by fire, there is a presenption,

12.00 ಪಿ.ಎಂ.

ತಾವು ದಯಮಾಡಿ ಇಲ್ಲಿ ಹೇಳಿಕೆ ಕೊಡಬೇಕಾಗುತ್ತದೆ. ಮದುವೆ ಆಗಿ ಎಷ್ಟು ಸಮಯವಾಯಿತು? ಇದಕ್ಕೆಲ್ಲಾ ಸ್ಪಷ್ಟವಾಗಿ ತಿಳಿದುಕೊಳ್ಳುವುದಕ್ಕೆ ಉನ್ನಾತಾಧಿಕಾರಿಗಳನ್ನು ಅಲ್ಲಿ ಕಳುಹಿಸಬೇಕಾಗುತ್ತದೆ. ಡೌರಿ ಡೆತ್‌ಗೆ ಒಂದು ಸೆಲ್ ಇದೆ. ದಕ್ಕೆ ಒಬ್ಬರು ಇನ್ಸ್‌ಪೆಕ್ಟರ್ ಜನರಲ್ ಇದ್ದಾರೆ. ಅವರು ಹೋಗಬೇಕಾಗುತ್ತದೆ. was it a normal affair? It has to automatically got to COD. ಅದನ್ನು ಕಳುಹಿಸಿದರು? ಉನ್ನತಾಧಿಕಾರಿಗಳು ಹೋಗಿ ಇದನ್ನು ತನಿಖೆ ಮಾಡಿದ್ದಾರೆ. ಡೌರಿ ಆ್ಯಕ್ಟ್‌ಗೆ ಯಾವುದು ಒಂದು ಪ್ರಿಸಂಷನ್ ಕೊಡುತ್ತಾರೆ, ಆ ಪ್ರಿಸಂಷನ್ ಪ್ರಕಾರ Unles contrary is proved, prima faice, the husband, or the father-in-law or the mother-in-law who ever it may be, they will be held responsible. ಇವತ್ತು ತನಿಖೆ ಆಗಬೇಕಾದರೆ ಕಾನೂನಿನ ಒಂದು ಹರಿತ ಏನಿದೆ, ಆ ಮೊನಚು ಕಾನೂನಿನಲ್ಲಿ ಕಳೆದುಕೊಂಡಿದ್ದಾರೆ. ಇದು ಒಂದು ಸಾಕ್ಷಿ. ಇದನ್ನು ಸರಿಯಾದ ರೀತಿಯಲ್ಲಿ ವ್ಯವಹರಿಸತಕ್ಕಂಥ ರೀತಿಯಲ್ಲಿ ನಾವು ಪ್ರಯತ್ನ ಮಾಡಬೇಕಾಗುತ್ತದೆ. ಇಂತಹ ಅಲೆಗೇಷನ್ ಪತ್ರಿಕೆಯಲ್ಲಿ ಬರುತ್ತದೆ. ಏನು ಹಣದ ಬಲದಿಂದ ಸಾಕ್ಷಾಧ್ಯಾರ ಅಳಿಸಿ ಹಾಕುವ ಯತ್ನದ ಆರೋಪ. ಇವತ್ತಿಗೂ ಬೇರೆ ಬೇರೆ ರೀತಿಯಲ್ಲಿ ಅಂತಹ ವರದಿಗಳು ಇಲ್ಲಿ ಬರುವುದನ್ನು ನಾವು ಕಾಣುತ್ತಿದ್ದೇವೆ. ಇವತ್ತು ಇದರ ಬಗ್ಗೆ ನಾವು ದಿನನಿತ್ಯ ಏನು ನೋಡುತ್ತಿದ್ದೇವೆ. ಮಗುವಿನ ಕೊಲೆ ಇರಬಹುದು. ಅಥವಾ ಬೇರೆ ಅನೇಕ ವಿಚಾರಗಳು ಇರಬಹುದು, spate of robbery cases have been reported. ಯಾರಿಗೂ ಏನೂ ಆಗುತ್ತಿಲ್ಲ. ಪೋಲೀಸ್ ಅಧಿಕಾರಿಗಳು ಎಲ್ಲಿ ಇರಬೇಕೋ ಅಲ್ಲಿ ಇರುತಾತನೆ. ನಿರಾಂತಕವಾಗಿ ಕೆಲಸ ಮಾಡತಕ್ಕಂಥ ಒಂದು ವಾತಾವರಣವನ್ನು ತಾವು ಕಲ್ಪಿಸಿದ್ದೀರಿ. Case laws regarding

Dowry death: Section 304(6): Where the death of a woman is caused by any burns or bodily injury, or occurs otherwise than under normal circumstances, within seven years of her marriage and it is shown that soon before her death she was subjected to cruelty or harassment by her husband or any relative of her husband or in connection with any demand for dowry, such death shall be called Dowry death and such husband or relative shall be deemed to have caused death. " It is not just like an ordinary law. Itis a law which makes you to take action immediately without any hesitation.

ಯಾವುದೇ ರಿಸರ್ವೇಷನ್ ಇಲ್ಲದೆ ಇದನ್ನು ನೀವು ಕಾನೂನಿನ ಪ್ರಕಾರ ಕೈಗೆತ್ತಿಕೊಳ್ಳಬೇಕಾದಂತಹ ಅವಶ್ಯಕತೆ ಖಂಡಿತ ಕೂಡ ಇದೆ. ಇತ್ತೀಚೆಗೆ ಇನ್ನೊಂದು ಬಹಳ ದುರಂತವಾದ ಕೇಸ್‌ನ ನಡೆಯಿತು. ಮಿಸ್ ಆರ್ಯ ಸೋಮರಾಜ್ ಎನ್ನುವವರು ರಾಜೀವ್‌ಗಾಂಧಿ ಡೆಂಟಲ್ ಕಾಲೇಜಿನಲ್ಲಿ ಕಲಿಯುತ್ತಿದ್ದಳು. 31ನೇ ತಾರೀಖು ಡಿಸೆಂಬರ್ 1998ರಂದು 9.00 ಗಂಟೆಗೆ she comes back from her place,at 9.30 AM she attends the classes, she was asked to come out and she will pay the Mess fee, again comes back to the classes.

ಅಮೇಲೆ ಪುನಃ ಅವಳನ್ನು ಕರೆಯುತ್ತಾರೆ. ಕರೆದಮೇಲೆ 10.30 ಗಂಟೆಗೆ ಅವಳನ್ನು ಅವಳ ರೂಂಮೇಟ್ ನೋಡುತ್ತಾಳೆ. she was lying on the bed. At 11 or11.15 smoke was coming out of her hostel room.

ಆಮೇಲೆ ಜನ ಹೋದಾಗ she was burn, she was burn to 99% ಅಲ್ಲಿ ಅಡಿಗೆ ಕೋಣೆ ಏನೂ ಇರುವುದಿಲ್ಲ. ಒಂದು ಬಿಸ್ಲೇರಿ ಬಾಟಲ್‌ನಲ್ಲಿ, ಅರ್ಧ ಬಾಟಲ್ ಸೀಮೆಎಣ್ಣೆ ಇದ್ದು, ಅರ್ಧ ಬಾಟಲ್ ಸುಟ್ಟು ಹೋಗಿದೆ, ಅರ್ಧ್ ಬಾಟಲ್ ಸೀಮೆಎಣ್ಣೆ ಖಾಲಿಯಾಗಿದೆ. ಅರ್ಧ ಬಿಸ್ಲೇರಿ ಬಾಟಲ್ ಸೀಮೆಎಣ್ಣೆಯಿಂದ 99 ಪರ್ಸೆಂಟ್ ಬರ್ನ್ಸ್ ಆಗುವುದಕ್ಕೆ ಸಾಧ್ಯವೇ ಇಲ್ಲ. She was found at 10.30 That means she was drugged. The girl was then set fire.

ಮಾನ್ಯ ಅಧ್ಯಕ್ಷರೇ, ಅಲ್ಲಿ 15 ಅಡಿ ದೂರದಲ್ಲಿ ಕೂಲಿಗಳು ಕೆಲಸ ಮಾಡುತ್ತಿದ್ದಾರೆ. 20 ಅಡಿ ದೂರದಲ್ಲಿ ಕಾಲೇಜು ಕ್ಯಾಂಟೀನ್ ಇದೆ. ಇನ್ನೊಂದು 30 ಅಡಿ ದೂರದಲ್ಲಿ ಡೆಂಟಲ್ ಹಾಸ್ಪಿಟಲ್ ಇದೆ. ಆದರೆ ಯಾವುದೇ ಒಂದು ಸ್ಟ್ರಗಲ್ ಇಲ್ಲ. she was found lying on the floor fully naked.

ಇದು ನಿಜವಾಗಿ ಸುಟ್ಟಿದ್ದರೆ ಸ್ವಲ್ಪ ವಸ್ತ್ರ ಅಲ್ಲಲ್ಲಿ ಅಂಟಿರಬೇಕಲ್ಲಾ. ಆದರೆ ಈ ರೀತಿಯಾಗಿಲ್ಲ. ಯಾವ ರೀತಿ ಇನ್‌ವೆಸ್ಟಿಗೇಷನ್ ಮಾಡಿದ್ದಾರೆ ಎಂದರೆ First they wanted to show that it was an accidental fire becasue of the stove burst. Then the case wan converted into a case of homicide. Then ultimately it was turned to be a case of murder.

ಅದು ಇವತ್ತು ಇನ್‌ವೆಸ್ಟಿಗೇಷನ್‌ಆಗುತ್ತಿದೆ. ನಾನು ಹೇಳುವುದೇನೆಂದರೆ ಇವತ್ತು ಆ ಹುಡುಗಿಗೆ ಇಂತಹ ಹ್ಯಾರಸ್‌ಮೆಂಟ್ ಆಗಿ ಈ ರೀತಿ ಘಟನೆಗಳು ಇವತ್ತು ಕಾಲೇಜಿನಲ್ಲಿ ನಡೆದರೆ ಏನು ಗೌರವ ಬರುತ್ತದೆ ಹಾಗೂ ನಮ್ಮ ಲಾ ಅಂಡ್ ಆರ್ಡರ್ ಸಿಚ್ಯುಯೇಷ್‌ಗೆ ಎನ್ನುವುದನ್ನು ಇವತ್ತು ವಿಶೇಷವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಇವತ್ತು ಇದರ ಫೋಟೊ ಇದೆ. ಆದರೆ ತೋರಿಸುವುದಕ್ಕೆ ಇಷ್ಟಪಡುವುದಿಲ್ಲ. The tongue had come out in the body. It can come out only by a hanging or by an act from some external forces.

ಆದುದರಿಂದ ಇಂತಹ ಒಂದು ಆರ್ಯಸೋಮರಾಜನ ಕೇಸ್ ಏನಿದೆ ಇದನ್ನು ಕೋರ್ಟ್‌ನಲ್ಲಿ ಆ್ಯಂಟಿಸಿಪೇಟರಿ ಬೇಲ್‌ಗೆ ಅಪ್ಲಿಕೇಷನ್ ಹಾಕುವಾಗ the public prosecutor has no say, he says that he has no records, submitted by the police. So, Anticipatory Bail is granted. Of course, the police have subsequently suspended their station House Officer.

ಇದರಲ್ಲಿ ಪ್ರಾಮುಖ್ಯವಾಗಿ ನಾವು ಪರಿಗಣಿಸಬೇಕಾದಂತಹ ವಿಚಾರವೇನೆಂದರೆ ಇಂತಹ ಅನಾಹುತಗಳು ಇವತ್ತು ಕ್ಯಾಪಿಟೇಷನ್ ಫೀಸ್ ಹೆಸರಿನಲ್ಲಿ ಬೇರೆ ಬೇರೆ ಕಡೆಯಲ್ಲಿ ಏನು ಶೀಲ ಅಪಹರಣವಾಗುತ್ತಿದೆ, ಅಥವಾ ಅದರಲ್ಲಿ ಅವರನ್ನು ಕೊಲೆ ಮಾಡತಕ್ಕಂಥ ಪ್ರಕರಣ ಏನು ನಡೆಯುತ್ತಿದೆ, ಆದರಲ್ಲೂ ಕೂಡ ಬಾಲಕರ ಮೇಲೆ ಮತ್ತು ಮಕ್ಕಳ ಹಾಗೂ ಮಹಿಳೆಯ ಮೇಲೆ ಆಗತಕ್ಕಂಥ ಇಂತಹ ಘಟನೆಯನ್ನು ಇವತ್ತು ನಾವು ಬಹುಶಃ ಒಂದು ಐರನ್ ಹ್ಯಾಂಡ್‌ನಲ್ಲಿ ಡೀಲ್ ಮಾಡದೇ ಇದ್ದರೆ ಬಹುಶಃ ಕರ್ನಾಟಕ ರಾಜ್ಯದಲ್ಲಿ ಈ ಲಾ ಅಂಡ್ ಆರ್ಡರನ್ನು ನಿರ್ವಹಿಸತಕ್ಕಂಥ ಒಂದು ಪರಿಸ್ಥಿತಿ ಎಲ್ಲಿಯೂ ಕೂಡ ಬರುವುದಿಲ್ಲ ಎನ್ನುವುದನ್ನು ನಾನು ವಿಶೇಷವಾಗಿ ಹೇಳುತ್ತಾ ಕೊನೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಇಂಜಿನಿಯರುಗಳ ದೊಡ್ಡ ಮೆರವಣಿಗೆ ಇಲ್ಲಿ ಆಗಿದೆ. ಒಂದು ದುರಂತ ಎಂದರೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಏನಾಗುತ್ತದೆ ಎನ್ನುವುದನ್ನು ಬಹಳ ವಿಶೇಷವಾದಂತಹ ಗಂಭೀರತೆಯಿಂದ ನಾವು ಆಲೋಚನೆ ಮಾಡಬೇಕಾಗುತ್ತದೆ. 1978ನೇ ಇಸವಿಯಲ್ಲಿ ಕೊಟ್ಟಂತಹ ಮೀಸಲಾತಿಯನ್ನು ಇವತ್ತು ಬದಲಾವಣೆ ಮಾಡುವಾಗ, ಸುಪ್ರೀಂ ಕೋರ್ಟ್ ಏನು ಒಂದು ವರ್ಡಿಕ್ಟ್ ಕೊಟ್ಟಿತ್ತು, ಏನು ಸವಲತ್ತುಗಳನ್ನು ಪರಿಶಿಷ್ಟ ವರ್ಗದವರಿಗೆ ಕೊಟ್ಟಿದ್ದಾರೆ, ಅದನ್ನು ಬದಲಾವಣೆ ಮಾಡಬೇಕು ಎಂದು ಹೇಳಿ ಒಂದು ವರ್ಗದ ಜನ ಸ್ಟ್ರೈಕ್ ಮಾಡಿದರು. ಅವರು ಸ್ಟ್ರೈಕ್ ಮಾಡಿದರು ಎಂದು ಇವರು ಡಿಸಿಷನ್ ತೆಗೆದುಕೊಳ್ಳುತ್ತಾರೆ. ಎರಡು ಕಡೆಯವರನ್ನು ಕರೆಯಿಸಿ, ಸರಿಯಾದಂತಹ ರೀತಿಯಲ್ಲಿ ಯಾವ್ಯಾವ ಕೋರ್ಟ್‌ಗಳು ಯಾವ ಆಜ್ಞೆ ಮಾಡಿದ್ದಾರೆ ಅದನ್ನು ಸರಿಯಾಗಿ ಪರಿಶೀಲನೆ ಮಾಡಿ ಒಂದು ನಿರ್ಣಯ ತೆಗೆದುಕೊಂಡು ಈ ರೀತಿ ಬೀದಿ ಘರ್ಷಣೆಗೆ ಇಳಿಯತಕ್ಕಂಥ ಒಂದು ಜಾತಿ ಸಂಘರ್ಷಣೆ, ಜಾತಿ ವಾತಾವರಣ ಉಂಟಾಗಿದೆ. ನಿನ್ನೆ ಕೂಡ ಅನೇಕ ಕಾವಿ ಧರಿಸಿದಂತಹ ಸ್ವಾಮಿಗಳು ಬಂದಿದ್ದಾರೆ. ಈವತ್ತು political power can be attained only through the channel of religion and casts. I was told that with some Swamiji ಪ್ರತಿಯೊಂದು ಜಾತಿಗೆ, ಇದು ನೋಡಿ ಈ ಜಾತಿಗೆ ಸೇರತಕ್ಕಂಥ ಮಠದ ಸ್ಥಾಪನೆ ಮಾಡುತ್ತಾರೆ. ಈ ಜಾತಿಯವರ ಸ್ವಾಮಿಗಳು ಎಂದು ಇವತ್ತು ಸ್ವಾಮಿಗಳ ತಯಾರು ಮಾಡತಕ್ಕಂಥ ಕಾರ್ಖಾನೆಗಳು ನಮ್ಮ ಕರ್ನಾಟಕ ರಾಜ್ಯದಲ್ಲಿ ಉದ್ಭವವಾಗುತ್ತವೆ ಎಂದರೆ

ನಾವು ಯಾವ ದಿಕ್ಕಿಗೆ ಹೋಗುತ್ತಿದ್ದೇವೆ. ಇವತ್ತು ರಾಜಕೀಯ ಧರ್ಮದ ಜೊತೆಯಲ್ಲಿ ಇರಬಾರದು ಎಂದು ಬಿಜೆಪಿಯವರು ಹೇಳುತ್ತಾರೆ. ಇವತ್ತು ಎಲ್ಲಾ ರಾಜಕೀಯ ಪಕ್ಷಗಳೂ ಕೂಡ ಆ ದಾರಿ ಹಿಡಿಯತಕ್ಕಂಥ ದುರ್ದೆಸೆ ಈ ರೀತಿಯ ಒಂದು ಪ್ರಯತ್ನವನ್ನು ನಾವು ಕಾಣುತ್ತಿದ್ದೇವೆ. ಈ ಕಾರ್ಸ್ಟ್ವಾರ್ ಕರ್ನಾಟಕ ರಾಜ್ಯದಲ್ಲಿ ಇದು ಯಾವಾಗ ಅಂತ್ಯವಾಗುತ್ತದೆನ್ನುವುದು ಅರ್ಥವಾಗದೇ ಇರುವಂತಹ ಮಾತು. ಯಾವಾಗ ಸರ್ಕಾರದ ಇದರ ಬಗ್ಗೆ ಗಂಭೀರವಾದಂತಹ ಆಲೋಚನೆ ಮಾಡಬೇಕು. ಶಿಕ್ಷಣದಲ್ಲಿ ಜಾತಿಗಳು ಪ್ರವೇಶ ಮಾಡಿದೆ. ಇವತ್ತು ಒಂದ ರೀತಿಯ ಸಮತೋಲನ ಮಾಡಬೇಕು. ನಾನು ಯಾವುದೇ ಜಾತಿಯ ವಿರುದ್ಧ ಮಾತನಾಡುತ್ತಿಲ್ಲ. ಆದರೆ ಒಂದು ಸಮಾಜದಲ್ಲಿ ಒಂದು ಪ್ರದೇಶದಲ್ಲಿ ಸಮತೋಲನ ಕಾಪಾಡಿಕೊಳ್ಳತಕ್ಕಂಥ ಜವಾಬ್ದಾರಿ ಸರ್ಕಾರಕ್ಕೆ ಇದೆ. ಇವತ್ತು 10 ವಿಶ್ವವಿದ್ಯಾಲಯಗಳು ಇವೆ. ಅದರಲ್ಲಿ ಶೇಕಡ 50 ರಷ್ಟು ವೈಸ್ ಚಾನ್ಸಲರ್‌ಗಳನ್ನು ಒಂದೇ ವರ್ಗ ಅಥವಾ ಒಂದೇ ಜಾತಿಗೆ ಸೇರಿದವರನ್ನು ಸೆಲೆಕ್ಟ್ ಮಾಡಿದರೆ ಅಲ್ಲಿ ಕೂಡ ಜಾತಿ ಪ್ರವೇಶ ಮಾಡುತ್ತದೆ. ಜಾತಿ ಪಕ್ಷ ಪಾತ ನಡೆಯುತ್ತದೆ. ನೆಪೂಟಿಸಂ ನಡೆಯುತ್ತದೆ. ಇದಕ್ಕೆ ನಾನು ಮುಖ್ಯಮಂತ್ರಿಗಳು ಭಾಗಿಗಳು ಎಂದು ಹೇಳುವುದಿಲ್ಲ. ಆದರೆ ಒಟ್ಟು ವಾತಾವರಣ ಏನಾಗಿದೆ ಎಂದರೆ ಇದನ್ನು ನಿಲ್ಲಿಸಬೇಕಾದಂತಹ ಅವಶ್ಯಕತೆ ಖಂಡಿತವಾಗಿ ಇದೆ. ಆದುದರಿಂದ ರಿಲಜೆಯಸ್‌ಇನ್ಸಿಟಿಟ್ಯೂಷನ್ ಮೂಲಕ ರಿಲಿಜಿಯಸ್ ಇನ್ಸ್ಟಿಟ್ಯೂಷನ್ ಹೆಬ್ಬಾಗಿಲನ್ನು ಪ್ರವೇಶ ಮಾಡಿ ಇವತ್ತು ರಾಜಕೀಯ ಅಧಿಕಾರವನ್ನು ಪಡೆದುಕೊಳ್ಳುವುದಕ್ಕೆ ಮಾತ್ರ ಸಾಧ್ಯ ಎನ್ನುವ ಒಂದು ಕಲ್ಮಶವಾದಂತಹ ವಾತಾವರಣ ಉಂಟಾಗಿದೆ. ಕರ್ನಾಟಕ ರಾಜ್ಯದಲ್ಲಿ ಇದೆ ಅಧಿಕಾರಿಗಳಲ್ಲಿ ಜಾತೀಯತೆ ಬೆಳೆದಿದೆ. ರಾಜಕಾರಣಿಗಳಲ್ಲಿ ಜಾತಿ ಗುಂಪುಗಳು ಇದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಜಾತಿ ಗುಂಪುಗಳು ಬಂದಿವೆ. ಯಾರಿಗೋ ಪಾಸ್ ಮಾಡಬೇಕು, ಯಾರಿಗೆ ರ್‍ಯಾಂಕ್ ಕೊಡಬೇಕು, ಯಾರನ್ನು ಪೋಸ್ಟ್ ಗ್ರಾಜ್ಯುಯೇಟ್ ಮಾಡಬೇಕು, ಯಾರನ್ನು ಎಲ್ಲಿ ಸೇರಿಸಬೇಕು, ಇದರಲ್ಲಿ ಜಾತಿ ಪ್ರವೇಶ ಮಾಡಿದೆ. In the body politic,in the socitry politic ಇವತ್ತು ಜಾತಿಯ ವಿಷದ ರಕ್ತ ಎಲ್ಲಾ ಕಡೆಗಳಲ್ಲೂ ಪ್ರವೇಶ ಮಾಡಿರುವಂಥಾದ್ದು, ಒಂದು ದುರಂತವೆಂದರೆ it has climaxed ನಾನು ಆ ಜಾತಿ ಈ ಜಾತಿ ಎಂದು ಹೇಳುತ್ತಾ ಇಲ್ಲ. ಇದು ಎಲ್ಲರಲ್ಲೂ ಬಂದಿದೆ, ಎಲ್ಲರಿಗೂ ಉತ್ತೇಜನ ಸಿಗುತ್ತಾ ಇದೆ, ಲಾಭ ಸಿಗುತ್ತದೆ, ಸವಲತ್ತು ಸಿಗುತ್ತಿದೆ. ಈ ವಾತಾವರಣದಿಂದ ಸಮಾಜದಲ್ಲಿ ಐಕ್ಯತೆ ಹಾಳಾಗುತ್ತದೆ. ಇದನ್ನು ಗಂಭೀರವಾಗಿ ಪರಿಶೀಲಿಸಬೇಕಾದಂತಹ ವಿಷಯ ಖಂಡಿತವಾಗಿ ಇದೆ. ಇನ್ನು ನೀವು ಶೆಡ್ಯೂಲ್ ಕಾಸ್ಟ್ ಬಗ್ಗೆ ರಿಸರ್ವೇಷನ್ ಆರ್ಡರ್ ಬದಲಾವಣೆ ಮಾಡಿದ್ದೀರಿ, ಅದನ್ನು ದಯಮಾಡಿ ವಿಚಾರ ಮಾಡಬೇಕು. ಪ್ರತಿ ಸಮಾಜದಲ್ಲಿ ಸಮತೋಲನ ಎಲ್ಲಾ ವರ್ಗದವರಿಗೂ ಸರಿಸಮಾನವಾದಂತಹ ಸಾಮಾಜಿಕ ನೀತಿ, ಹಂಚಿಹೋದಂತಹ ಅಶ್ಲೀಲಕರವಾದಂತಹ ವ್ಯವಸ್ಥೆಯ ಕಡೆಗೆ ನಿಮ್ಮ ಗಮನವನ್ನು ಕೊಡಬೇಕೆಂದು ನಿಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಕೊನೆಯದಾಗಿ ಮಾನ್ಯ ಗೋಪಾಲಕೃಷ್ಣ ಅಡಿಗರ ಕವನದ ಒಂದೆರಡು ಅಂಶಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ನಾನು ನಿನ್ನೆ ಸದನದಲ್ಲಿ ತ್ರಿಶಂಕು ವಿಚಾರವನ್ನು ಕೇಳಿದೆ. ಅದು ಮಾನ್ಯ ಮುಖ್ಯಮಂತ್ರಿಯವರು ತ್ರಿಶಂಕುವೋ ಅಥವಾ ಮಾನ್ಯ ಸಿದ್ಧರಾಮಯ್ಯನವರು ತ್ರಿಶಂಕುವೋ ಅದು ಅವರವರಿಗೆ ಬಿಟ್ಟಿದ್ದು, ಬೇರೆಯವರಿಗೆ ಗೊತ್ತಿಲ್ಲ. ಮಾನ್ಯ ನಾಣಯ್ಯನವರೇ, ಇದರಲ್ಲಿ ವಿಶ್ವಾಮಿತ್ರ ಯಾರೆಂದು ನೀವೇ ಆಲೋಚನೆ ಮಾಡಬೇಕು. ಇನ್ನು ಕವನದಲ್ಲಿ ವಿಶ್ವಾಮಿತ್ರ ಏನು ಹೇಳಿದನೆಂದರೆ ''ತ್ರಿಶಂಕು ನಡೆ ಸ್ವರ್ಗಕ್ಕೆ'' ಅಂದರೆ ತ್ರಿಶಂಕುವಿಗೆ ಸ್ವರ್ಗನೂ ಇಲ್ಲ, ಭೂಮಿಯೂ ಇಲ್ಲ ಅಂತಹ ಮನುಷ್ಯ ಅವನು. ಕೆಸರಲ್ಲಿ ಹುಗಿದ ಕಾಲನ್ನು ಕೀಳುವುದು ಎಷ್ಟು ಕಷ್ಟ, ದೇ ಕಷ್ಟ ''

''ತ್ರಿಶಂಕು ನಡೆ ಸ್ವರ್ಗಕ್ಕೆ
ಕೆಸರಲ್ಲಿ ಹುಗಿದ ಕಾಲನ್ನು ಕೀಳುವುದು
ಎಷ್ಟು ಕಷ್ಟ ಅದೇ ಕಷ್ಟ,
ಆಕಾಶ ಪಂಜರದ ಹೊನ್ನ ಸರಿಗೆಯ
ನಡುವೆ ನಡೆದ ಹಗರಣ ಕೂಡ,
ಕೆಸರು ಮತ್ತು ಮೋಡದ ಮಧ್ಯೆ
ಸೆರೆ ಸಿಕ್ಕ ಅಸಹಾಯಕರು- ಯಾರು ಇರಬಹುದು.

ಇಲ್ಲಿ ವಿಶ್ವಾಮಿತ್ರರ ಮುಖ್ಯಮಂತ್ರಿಯ ಪದವಿಯನ್ನು ತೋರಿಸುತ್ತೇನೆಂದು ಇಲ್ಲಿ ಯಾರು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದು ಮಾನ್ಯ ಸಿದ್ಧರಾಮಯ್ಯನವರು ಇರಬಹುದು. ಆದರೆ ಇದರಲ್ಲಿ ವಿಶ್ವಾಮಿತ್ರರು ಯಾರೆಂಬುದು ಎಲ್ಲರಿಗೂ ಗೊತ್ತಿದೆ. ಇದು ಕಾಮನ್ ಡಿ ನಾಮಿನೇಷನ್ ಅದರಲ್ಲಿ ಕಾನ್ಟ್ರೊವರ್ಸಿ ಇಲ್ಲ. ಆದರೆ ಇದರಲ್ಲಿ ತ್ರಿಶಂಕು ನಡೆ ಸ್ವರ್ಗಕ್ಕೆ ಎಂದು ಹೇಳಿದ್ದಾರೆ. ಅಂದರೆ ಇಲ್ಲಿ ಇಬ್ಬರಲ್ಲಿ ಚರ್ಚೆಯಾಗಿರುವುದು ಯಾರು ಹೋಗಬೇಕೆಂದು, ಕೊನೆಗೆ ಹೋಗುವವರು ಬೇರೆ, ತ್ರಿಶಂಕುಗಳು ತ್ರಿಶಂಕುಗಳಾಗೆ ಉಳಿಯುತ್ತಾರೆ; ಹೋಗುವುದು ಇದ್ದರೆ ಬೇರೆಯವರು ಇರುತ್ತಾರೆ. ಅದು ನಿಮ್ಮ ಚಾನಲ್ ಮೂಲಕ ಹೋಗುವುದು ಬೇರೆಯವರು ಇದ್ದಾರೆ. '' ತಾಯಿ ಇಲ್ಲದ, ತಂದೆ ನಾಪತ್ತೆಯಾದ ಅನಾಥನಿಗೆ ಮೂಲ ಕಚೇರಿ ವಿಳಾಸ ಮರೆತು ಹೋಗಿ ಅನಿರ್ದಿಷ್ಟವಾದಂತಹ ಭವಿಷ್ಯವನ್ನು ತಕರಾರು ಮಾಡದೇ ಎದುರಿಸುವುದು ಒಂದೇ ದಾರಿ. ಇದು ಮಾನ್ಯ ಸಿದ್ಧರಾಮಯ್ಯವರೇ ಮರೆತು ಹೋಗಿದ್ದಾರೋ ಮಾನ್ಯ ಜೆ.ಹೆಚ್. ಪಟೇಲರವರೇ ಮರೆತು ಹೋಗಿದ್ದಾರೋ ನಮಗೆ ಅದು ಗೊತ್ತಿಲ್ಲ. ಆ ದಾರಿ ಸಾಗುತ್ತದೊ, ಇಲ್ಲವೊ ಯಾರಿಗೆ ಗೊತ್ತು. ಪದ್ಯದ ಕೊನೆಯಲ್ಲಿ ಮನುಷ್ಯನ ಧಾರುಣಾ ಮಾರ್ಮಿಕವಾದ ಪ್ರತಿಮೆ ಎಂದು ಹೇಳುತ್ತದೆ. ಅದುದರಿಂದ ನಿಮ್ಮ ಕಥೆ, ನಿಮ್ಮ ಕೊನೆ ಎಂದರೆ ಮಾನ್ಯ ನಾಣಯ್ಯನವರು ಅಲ್ಲ, ಮಾನ್ಯ ಗೋವಿಂದೇ ಗೌಡರು ಅಲ್ಲ, ಎಲ್ಲಾ ವಿಶ್ವಾಮಿತ್ರರನ್ನು ಹೊಂದಿರುತ್ತದೆ. ಎಲ್ಲಾ ವಿಶ್ವಾಮಿತ್ರರನ್ನು ಹೊಂದಿರುತ್ತದೆ. ಯಾರನ್ನು ಸ್ವರ್ಗಕ್ಕೆ ಕಳುಹಿಸುವಂಥಾದ್ದು, ತ್ರಿಶಂಕುವಿಗೆ ಕಳುಹಿಸುವಂಥಾದ್ದು ಅಥವಾ ಕೆಸರಲ್ಲಿ ಹುದುಗಿಸುವಂಥಾದ್ದು ಇದೆಲ್ಲಾ ವಿಶ್ವಾಮಿತ್ರರಿಗೆ ಸೇರುವಂಥಾದ್ದು, ಕೊನೆಯಲ್ಲಿ ಪದ್ಯದಲ್ಲಿ ಹೇಳಿದ್ದಾರೆ.

''ಹೆಳವನ ಮೇಲೆ ಕುರುಡ ಕುಳಿತಿದ್ದಾನೆ,
ದಾರಿ ಸೇರುವುದೆಂತು ನೋಡಬೇಕು.

ಪರಿಸ್ಥಿತಿ ಈ ರೀತಿಯಲ್ಲಿ ಬರುತ್ತದೆ. ಮತ್ತೊಂದು ವಿಚಾರವೆನೆಂದರೆ ....

ಶ್ರೀ ಎಸ್.ರಾಜೇಂದ್ರನ್ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಮಾನ್ಯ ಸದಸ್ಯರು ತ್ರಿಶಂಕುನು ಸ್ವರ್ಗಕ್ಕೆ ಹೋಗುತ್ತಾನೆ ಎಂದು ಹೇಳಿದರು. ಇಲ್ಲಿ ವಿಶ್ವಾಮಿತ್ರ ಇರುವುದು ಸ್ವರ್ಗದಲ್ಲಿ, ಅಲ್ಲಿಂದಲೂ ಅವರನ್ನು ಒದ್ದು ಕಳುಹಿಸಿದ್ದಾರೆ. ಅವರನ್ನು ಯಾರು ಒದ್ದು ಕಳುಹಿಸಿದ್ದಾರೆಂಬುದನ್ನು ಹೇಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ : ಅದನ್ನು ನೀವು ಹೇಳಬೇಕು, ನನ್ನ ದೃಷ್ಟಿಯಲ್ಲಿ ಇವರು ಇಬ್ಬರು ತ್ರಿಶಂಕುವೇ, ಸ್ವರ್ಗಕ್ಕೆ ಹೋಗುವವರೇ ಬೇರೆಯವರು ಇದ್ದಾರೆ. ಅವರು ಹೋಗುವವರು ಇದ್ದಾರೆ,

ಇಲ್ಲಿ ಆ ವಿಶ್ವಾಮಿತ್ರರಿಗೆ ಎಷ್ಟುಶಕ್ತಿ ಅದು ವಿಶ್ವಾಮಿತ್ರರಿಗೆ ಶಕ್ತಿ ಇದ್ದರೆ ಇದೆಯೆಂಬುದನ್ನು ನಾವು ನೋಡಬೇಕಾಗಿದೆ. ನಾನು ಇಲ್ಲಿ ಗೋಪಾಲ ಕೃಷ್ಣ ಅಡಿಗರ ಕವನವನ್ನು ಓದಿ ಹೇಳಿದ್ದೇನೆ. ಅದನ್ನು ತಾವು ಯಾವ ರೀತಿಯಾಗಿ ತೆಗೆದು ಕೊಳ್ಳಬೇಕೋ ಆ ರೀತಿಯಲ್ಲಿ ತೆಗೆದುಕೊಳ್ಳಿ. ವಿಶ್ವಾಮಿತ್ರನು ತಪಸ್ಸು ಮಾಡಿ ರಾಜರ್ಷಿಯಾದನು, ಇವನಿಗೆ ಈ ರಾಜರ್ಷಿಯ ಪಟ್ಟ ಬರುವವರೆಗೂ ಎಲ್ಲಾ ರಾಜರುಗಳ ಮನೆಗೆ ಹೋಗುವುದು, ಮುನಿಗಳ ಮನೆಗಳಿಗೆ ಮಧ್ಯ ರಾತ್ರಿಯಲ್ಲಿ ಹೋಗುವುದು, ಬೆಳಿಗ್ಗೆ ಐದು ಗಂಟೆಗೆ ಹೋಗುವುದು, ತನಗೆ ಬೇಕಾ ದಂತಹ ಕೆಲಸಗಳನ್ನು ಮಾಡಿಸುವುದು. ಇದೆಲ್ಲವನ್ನು ತನಗೆ ಅಧಿಕಾರ ಬರುವವರೆಗೂ ಈ ಕೆಲಸಗಳೆಲ್ಲವನ್ನು ಮಾಡಿಸುತ್ತಿದ್ದನು. ಈ ವಿಶ್ವಾಮಿತ್ರನು ಯಾವಾಗ ರಾಜರ್ಷಿಯಾದ, ಆಗ ಜನರಿಗೆ ಪಿಡುಗನ್ನು ಕೊಡುವುದೇ ಕೆಲಸವಾಯಿತು. ಹಾಗೆ ಆ ವಿಶ್ವಾಮಿತ್ರನ ವಕ್ರದೃಷ್ಟಿ ಆ ಕಡೆಗೂ ಇದೆ, ಈ ಕೆಡೆಗೂ ಇದೆ .

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ವೈಸ್ ಚಾನ್ಸಲರ್ ಬಗ್ಗೆ ಮಾತನಾಡಿದರು. ಅದನ್ನು ಅವರು ಬಿಡಿಸಿ ಹೇಳಬೇಕಾಗಿತ್ತು, ಅದು ನಮಗೆ ಅರ್ಥವಾಗಲಿಲ್ಲ. ಇವರು ಏನಾದರೂ ಅನರ್ಹತೆಯಾಗಿರುವವರು ಇದ್ದಾರಾ, ಪ್ಯಾನಲ್‌ನಲ್ಲಿ ಇಲ್ಲದಿರುವವರಾಗಿದ್ದಾರಾ, ಅದನ್ನು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಕವಿಗಳಾಗಿರುವಾಗ ಆ ರೀತಿಯಲ್ಲಿ ಬಿಡಿಸಿ ಹೇಳುವಂತಹ ಕ್ರಮವಿಲ್ಲ. ಇದನ್ನು ಯಾರು ಅರ್ಥ ಮಾಡಿಕೊಳ್ಳುತ್ತಾರೋ ಅದನ್ನು ಅವರು ಅರ್ಥ ಮಾಡಿಕೊಂಡರೇ ಅಷ್ಟೆ ಸಾಕು.

ಶ್ರೀ ಜೆ.ಸಿ. ಮಾಧುಸ್ವಾಮಿ: ಇದು ನನಗೆ ಅರ್ಥವಾಗಬೇಕಾಗಿತ್ತು.

ಶ್ರೀ ಎಂ. ವೀರಪ್ಪ ಮೊಯಿಲಿ : ನಾವು ಕವಿಗಳು ಅದನ್ನು ಬಿಡಿಸಿ ಹೇಳುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಐದು ಜನರು ಆಗಬಾರದೆಂಬ ಪ್ರಮೇಯವೇನು ಇತ್ತು. ಯಾವ ವಿಷಯದ ಮೇಲೆ ಪ್ರಸ್ತಾವನೆ ಮಾಡಿದ್ದೀರಿ. ತಾವು ಇದ್ದಾಗ ಏನು ಮಾಡಿದ್ದೀರೆಂಬುದನ್ನು ನಾವು ಮಾತನಾಡಬೇಕಾಗುತ್ತದಲ್ಲಾ ತಾವು ದಯಮಾಡಿ ಬಿಡಿಸಿ ಹೇಳಿ.

SRI M. VEERAPPA MOILY : I am ending it. Lord Burtrand Russel, a very great Philosopher and Thinker gives his political theory like this " The central problem of political theory is, how to combine that degree of individual initiative which is necessary for progress with a degree of social colesion which is necessary for survival. "That is totally lacking with this Government. ಬರ್ಟ್ರೆಂಡ್ ರಸೆಲ್ ಆಶ್ರಮ ಇದೆ. ಇನ್ನೊಂದು ವಿಚಾರ ಇದು ಎಲ್ಲರಿಗೂ ಅನ್ವಯವಾಗುತ್ತದೆ. ರಾಜಕೀಯದಲ್ಲಿರುವಂತಹ, ಅಧಿಕಾರದಲ್ಲಿರುವಂತಹ ಎಲ್ಲರಿಗೂ ಅನ್ವಯವಾಗುತ್ತದೆ. ಈ 20ನೇ ಶತಮಾನದ ಮೊದಲೇ ಹೇಳಿದ್ದು, Burtrand Russel further says:

"In 1997, if we still exist, we must expect rival parties of Russian and American mariners to travel at enormous expenses to the surface of Mars and to keep themselves alive than for a few days while they search for each other,when they find each other they will exterminate each other" If they find each other, they will exterminate each other. "Each side will hear of the extermination of the other side and will proclaim a public holiday to celebrate the glorious victory.

ಮಾನ್ಯ ಉಪಾಧ್ಯಕ್ಷರೆ, ತಾವು ಆಲೋಚನೆ ಮಾಡಿ ಇದು ಎಲ್ಲರಿಗೂ ಅನ್ವಯವಾಗುತ್ತದೆ. This is the Vision of 2000 AD. This is the vision you can call it a distorted vision or whatever it may be. This is the vision of 2000 years. ಇವತ್ತು ನಾನು ಹೇಳಿದ ಜಾತಿ, ಮತ್ತೊಂದು ಎಲ್ಲವೂ ಪಕ್ಷದ ಹೊರಗೂ ನಡೆಯುತ್ತದೆ , ಪಕ್ಷದ ಒಳಗೂ ನಡೆಯುತ್ತದೆ. When they will find each other, they will exterminate. ಒಬ್ಬ ಮತ್ತೊಬ್ಬನನ್ನು ಅಳಿಸತಕ್ಕಂಥ ಒಂದು ದುಷ್ಟ ರಾಜಕೀಯ ಸಂಸ್ಕೃತಿ ಪಕ್ಷ ಪಕ್ಷದ ಮಧ್ಯೆ ನಡೆಯುತ್ತದೆ, ಪಕ್ಷದ ಒಳಗೆ ನಡೆಯುತ್ತದೆ. Am I right? ಆದರೆ ಇದು ಎಲ್ಲದರಲ್ಲೂ ನಡೆಯುತ್ತದೆ ,ಎಲ್ಲಾ ಕಡೆಯೂ ನಡೆಯುತ್ತದೆ. It is a matter of degree. Let us not blame the party. ಇಂಥ ದುಷ್ಟ ಸಂಸ್ಕೃತಿ, ಇಂಥ ದುಷ್ಟ ಪ್ರವೃತ್ತಿ ಪಕ್ಷದ ಒಳಗೂ ನಡೆಯುತ್ತದೆ, ಜಾತಿ ಜಾತಿಗಳೊಳಗೆ ನಡೆಯುತ್ತದೆ, ಪಕ್ಷದ ಹೊರಗೂ ನಡೆಯುತ್ತದೆ. ಒಬ್ಬನನ್ನು ಮತ್ತೊಬ್ಬ ನಾಶ ಮಾಡತಕ್ಕಂಥ ಈ ದುಷ್ಟ ಸಂಸ್ಕೃತಿ, ಈ ದುಷ್ಟ ಪ್ರವೃತ್ತಿಯನ್ನು ಇವತ್ತು ನಾವು ನಿಲ್ಲಿಸದೇ ಇದ್ದರೆ, We are exterminating each other. This is the distorted vision of 2000 AD. we should all be seriously concerned about it. It is not one man's job or another man's job. It is everybody's job if you want to see that in 2000 AD real probity in public life prevails. Otherwise, real probity in the public life will never remain. On Ethics, Lord Bertrand Russel says.

> **"Lord Russel was perplexed by the morality of the governments. They are seemed to find little difficulty in raising enromous sums for the purpose of killing people but find it tiresome and somewhat taxing experience to appropriate a few inhid sums for the purpose of killing disease."**

ನಮ್ಮ ಬಜೆಟ್‌ಗಳು, ನಮ್ಮ ಬಜೆಟ್ ಪ್ರಾವಿಷನ್‌ಗಳು, ನಾವು ಸರ್ಕಾರದ ಖಜಾನೆಯಿಂದ ಖರ್ಚು ಮಾಡತಕ್ಕಂಥ ಹಣ ultimately it is predominently used for killing people and

not for killing disease.ಇದರ ಬಗ್ಗೆ ಸರ್ಕಾರಗಳು ಮತ್ತು ಸಾರ್ವಜನಿಕ ಸೇವೆಯಲ್ಲಿರತಕ್ಕಂಥ ನಾವುಗಳು ಸರಿಯಾದಂಥ ವಿವೇಚನೆಯಿಂದ ಸರಿಯಾದಂಥ ಸಾರ್ವಜನಿಕ ನೀತಿಯನ್ನು ಉಪಯೋಗ ಮಾಡದಿದ್ದರೆ ಬಹುಶಃ ಯಾವ ಪ್ರಜಾಪ್ರಭುತ್ವವೂ ಉಳಿಯುವುದಿಲ್ಲ. ಮಾನವತೆ ಕೂಡ ಉಳಿಯಲು ಖಂಡಿತ ಸಾಧ್ಯವಿಲ್ಲ ಎಂದು ಹೇಳಿ, ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂಥ ತಮಗೆ ವಿಶೇಷವಾಗಿ ನಾನುಅಭಿನಂದನೆ ಮತ್ತು ಕೃತಜ್ಞತೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಮಾನ್ಯ ಸದಸ್ಯರು : ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವೀರಪ್ಪ ಮೊಯಿಲಿಯವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಅವರು ಹೇಳಿದುದೆಲ್ಲವೂ ಅವರಿಗೇ ಅನ್ವಯವಾಗುತ್ತವೆ. ವೀರೇಂದ್ರ ಪಾಟೀಲರ ಅನಾರೋಗ್ಯ ಕಾಲದಲ್ಲಿ ಅವರನ್ನು ಕಿತ್ತು ಹಾಕಿದ್ದು ಮತ್ತು ಇವರು ಮುಖ್ಯ ಮಂತ್ರಿಯಾಗಿ ಶಾಸಕಾಂಗ ಸಭೆಯಲ್ಲಿ ಹೊಡೆದಾಡಿದ್ದು, ಇವೆಲ್ಲವೂ ಕೂಡ ಅವರಿಗೇ ಅನ್ವಿಯಿಸುತ್ತದೆ , ಅದನ್ನು ಜನ ಮರೆತಿಲ್ಲ ಎನ್ನುವುದನ್ನೂ ಕೂಡ ತಮ್ಮ ಮುಂದೆ ಹೇಳುತ್ತೇನೆ.

ಉಪಾಧ್ಯಕ್ಷರು : ಈಗ ಪೂಜಾರ್‌ರವರು. ತಾವು 15 ನಿಮಿಷದಲ್ಲಿ ಮುಗಿಸಬೇಕು, ಇನ್ನೂ ಬಹಳ ಮಂದಿ ಮಾತನಾಡುವವರಿದ್ದಾರೆ.

+ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ): ಸನ್ಮಾನ್ಯ ಉಪಾಧ್ಯಕ್ಷರೇ, ಇವತ್ತು ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಲು ಹೊಸದಾಗಿ ಆಯ್ಕೆಯಾದಂಥ ಸದಸ್ಯನಾದ ನನಗೆ ತಾವು ಅವಕಾಶ ಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಧನ್ಯವಾದಗಳನ್ನು ಸಮರ್ಪಿಸುತ್ತಾ, ರಾಜ್ಯಪಾಲರು ಮಾಡಿದಂಥ ಭಾಷಣಕ್ಕೆ ಅನಿವಾರ್ಯವಾಗಿ ನಾನು ವಿರೋಧ ವ್ಯಕ್ತ ಮಾಡಬೇಕಾಗಿದೆ. ಸಮಾಜವಾದೀ ಚಳುವಳಿಯ ನೇತಾರರೆಂದು ಹೇಳಿಕೊಳ್ಳುವಂಥ ನಮ್ಮ ನಾಯಕರಾದ ಜೆ.ಹೆಚ್.ಪಟೇಲರು ಕಳೆದ ತಿಂಗಳು ಉತ್ತರ ಕರ್ನಾಟಕದ ಕೃಷ್ಣಾ ಮೇಲ್ದಂಡೆ ಯೋಜನೆಯ ಭಾಗಗಳಿಗೆ ತಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳಾದಂಥ ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರು ಮತ್ತು ನೀರಾವರಿ ಸಚಿವರಾದಂಥ ನಾಗೇಗೌಡರ ತಂಡದೊಂದಿಗೆ 2-3 ದಿವಸಗಳವರೆಗೆ ಅಲ್ಲಿಗೆ ಬಂದು ಹೋದುದಕ್ಕಾಗಿ ಅವರಿಗೆ ಅಭಿನಂದನೆಯನ್ನು ಆದರೆ ಆಬಿನಂದನೆ ಸಲ್ಲಿಸುತ್ತೇನೆ. ತಡವಾಗಿ ಸಲ್ಲಿಸುವಂಥ ಒಂದು ಪ್ರಮೇಯ ನನಗೆ ಬಂದಿದೆ. Late is better than never. ಎಂದು ಇಂಗ್ಲೀಷಿನಲ್ಲಿ ಹೇಳುವ ಹಾಗೆ, ಕೊನೆಗಾದರೂ ನಮ್ಮ ಸರ್ಕಾರದ ಮುಖ್ಯ ಮಂತ್ರಿಗಳಿಗೆ ಮತ್ತು ಸಚಿವ ಸಂಪುಟದ ಅವರ ಸಹೋದ್ಯೋಗಿಗಳಿಗೆ ಅಲ್ಲಿನ ಜನರ ಕಷ್ಟ ಕಾರ್ಪಣ್ಯಗಳನ್ನು ತಿಳಿದುಕೊಳ್ಳಲು ಮನಸ್ಸು ಬಂತು ಎನ್ನುವ ವಿಚಾರವನ್ನು ಹೇಳುತ್ತೇನೆ. ಎರಡನೆಯದಾಗಿ, ಅವರು ಬಂದು ಹೋದುದು ನಿಷ್ಫಲವಾಗಿದೆ ಎನ್ನುವ ಒಂದೇ ಒಂದು ಕಾರಣಕ್ಕಾಗಿ ಅವರ ಬಗ್ಗೆ ಅನುಕಂಪ ಕೂಡ ಬರುತ್ತಿದೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅನೇಕ ವಿಚಾರಗಳ ಕುರಿತಂತೆ ಹೇಳಿ, ಕೃಷ್ಣಾ ಮೇಲ್ದಂಡೆ ಯೋಜನೆಯ ಸಾಧನೆಯ ಬಗ್ಗೆ ಹೇಳಿದರು. 1999ರ ಜೂನ್ ವೇಳೆಗೆ ಆಲಮಟ್ಟಿ ಜಲಾಶಯದಲ್ಲಿ ನೀರು ನಿಲ್ಲಿಸುವ ಹಂತಕ್ಕೆ ನಾವು ಬಂದಿದ್ದೇವೆ ಎಂದು ಹೇಳಿದರು. ಸರ್ಕಾರದ ಒಂದು ಅಂದಾಜಿನ ಪ್ರಕಾರ, ಅವರು ನೀಡಿದ ಅಂಕಿ ಅಂಶಗಳ ಪ್ರಕಾರ ಇವತ್ತು ಆ ಮೇಲ್ದಂಡೆ ಯೋಜನೆಯಿಂದ ನಾಲ್ಕು ಲಕ್ಷದಷ್ಟು ಜನರು ಮನೆ-ಮಠಗಳನ್ನು ಕಳೆದುಕೊಂಡು ನಿರ್ಗತಿಕರಾಗುತ್ತಿದ್ದಾರೆ.ಒಂದು ಲಕ್ಷದಷ್ಟು ಕುಟುಂಬಗಳು

ಮುಳುಗಡೆಯಲ್ಲಿ ಬರುತ್ತಿರುವಂಥ ಈ ಸಂದರ್ಭಲ್ಲಿ ಇವತ್ತು ನಾವು ಚಿಂತನೆ ಮಾಡಬೇಕಾಗಿದೆ. ಇಂಥ ಒಂದು ಅಣೆಕಟ್ಟು ನಿರ್ಮಾಣವಾಗುವಂಥ ಸಂದರ್ಭದಲ್ಲಿ, ಯಾವುದೇ ಸರ್ಕಾರವಾಗಲೀ ಇಂಥ ಒಂದು ದೊಡ್ಡ ಯೋಜನೆಯನ್ನು ಕೈಗೆತ್ತಿಕೊಂಡಂಥ ಸಂದರ್ಭದಲ್ಲಿ ಮುಖ್ಯವಾಗಿ ಮೂರು ವಿಷಯಗಳ ಕಡೆಗೆ ನಾವು ಗಮನ ಹರಿಸಬೇಕು. ಡ್ಯಾಂ ಕಟ್ಟಿರುವುದು ಸರಿ, ಅದನ್ನು ಕಟ್ಟಲೇ ಬೇಕು. ಆದರೆ ಮೊದಲನೆಯದಾಗಿ ಆ ಅಣೆಕಟ್ಟೆಯಿಂದ ಮುಳುಗಡೆಯಾಗತಕ್ಕಂಥ ಗ್ರಾಮಗಳ ಜನತೆಗೆ ಮತ್ತು ಅವರ ಆಸ್ತಿಗಳಿಗೆ ಯೋಗ್ಯವಾದಂಥ ಪರಿಹಾರ ನೀಡುವುದು. ಎರಡನೇಯದಾಗಿ, ಅವರಿಗೆ ಸರಿಯಾದ ಪುನರ್‌ವಸತಿ ಕಲ್ಪಿಸುವಂಥಾದ್ದು. ಮೂರನೆಯದಾಗಿ ಯಾವ ಜಮೀನುಗಳನ್ನು ನೀರಾವರಿ ಮಾಡಬೇಕು, ಆ ಜಾಗದಲ್ಲಿ ಕೆನಾಲ್‌ಗಳ ಸುವ್ಯವಸ್ಥಿತ ನಿರ್ಮಾಣ ಕಾರ್ಯ ಆಗುತ್ತಿರಬೇಕು. ಆದರೆ ಇಲ್ಲಿ ಮುಳುಗಡೆಯಲ್ಲಿ ಬಂದಂಥ 156 ಹಳ್ಳಿಗಳು, 15 ಸಾವಿರಕ್ಕಿಂತ ಹೆಚ್ಚಿನ ಕುಟುಂಬಗಳಿಗೆ ಹಾಗೂ ಸುಮಾರು 50 ಸಾವಿರಕ್ಕಿಂತ ಹೆಚ್ಚಿನ ಎಕರೆ ಪ್ರದೇಶಕ್ಕೆ ಇನ್ನೂ ಪರಿಹಾರ ನೀಡಿಲ್ಲ. ತಮಗೆ ಉದಾಹರಣೆ ಕೊಡಬೇಕೆಂದರೆ, ಬಾಗಲಕೋಟೆ ತಾಲ್ಲೂಕಿನ 9 ಹಳ್ಳಿಗಳು,ಸಂಗೊಂದಿ, ಮಲ್ಲಾಪುರ, ಕದಾಂಪುರ, ಸೋರಕೊಡ್ಡ,ಮುರ್ನಾಳ, ಯಡಹಳ್ಳಿ, ಛಬ್ಬಿ, ದೇವನಾಳ, ಸೊಕನಾಡಗಿ, ಕಲಾದಗಿ, ಶಾರದಾಳ ಈ ಗ್ರಾಮಗಳಿಗೆ ಇವು 521ರ ಅಡಿಯಲ್ಲಿ ಬರುತ್ತಿದ್ದರೂ ಕೂಡ ಇನ್ನೂ ಅವುಗಳುಗೆ ಪರಿಹಾರ ಧನ ವಿತರಣೆಯಾಗಿಲ್ಲ. ಈ ಗ್ರಾಮಗಳ ಜನತೆಗೆ ಇನ್ನೂ ಪುವರ್‌ವಸತಿ ನಿವೇಶನಗಳನ್ನು ಕೂಡ ನೀಡಿಲ್ಲ. ಇನ್ನುಳಿದ 3-4 ತಿಂಗಳುಗಳ ಅವಧಿಯಲ್ಲಿ ಈ ಕೆಲಸವನ್ನು ಸರ್ಕಾರ ಮಾಡಬಹುದೇ ಎನ್ನುವುದನ್ನು ಯಾರಾದರೂ ಸಹಜವಾಗಿ ತಿಳಿದುಕೊಳ್ಳಬಹುದು. ಇನ್ನೂ ಅನೇಕ ಪುನರ್‌ವಸತಿ ಕೇಂದ್ರಗಳನ್ನು ಸರ್ಕಾರ ಮಾಡಿದ್ದಾಗಿ ಹೇಳಿಕೊಂಡಿದೆ. ನಾನು ಇಲ್ಲಿ ಸೇರಿರುವಂಥ ಸಚಿವ ಸಂಪುಟದ ಎಲ್ಲಾ ಸಹೋದ್ಯೋಗಿಗಳನ್ನು ಮತ್ತು ಶಾಸಕ ಮಿತ್ರರಿಗೆ ದಯವಿಟ್ಟು ಅಲ್ಲಿ ಬಂದು ನೋಡಿ ಎಂದು ಆಹ್ವಾನ ಮಾಡುತ್ತಿದ್ದೇನೆ. ಅಲ್ಲಿ ಮಾಡಿರುವ ಯಾವುದೇ ಒಂದು ಪುನರ್‌ವಸತಿ ಕೇಂದ್ರದಲ್ಲಿ ಸರಿಯಾದ ರಸ್ತೆಯಿಲ್ಲ, ಇನ್ನೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಲ್ಲ, ವಿದ್ಯುತ್‌ದೀಪದ ವ್ಯವಸ್ಥೆ ಇಲ್ಲ, ಸಾರ್ವಜನಿಕ ಶೌಚಾಲಯಗಳಿಲ್ಲ, ದೋಭಿ ಘಾಟ್ ಇಲ್ಲ. ಸಂಪರ್ಕ ಸಾಧನಗಳು ಅಂದರೆ ನಗರಕ್ಕೆಬರಬೇಕಾದರೆ ಸರಿಯಾದ ಬಸ್ಸಿನ ವ್ಯವಸ್ಥೆ ಇಲ್ಲ. ಉದಾಹರಣೆಗೆ ಮುಗಳೂಳ್ಳಿ ಗ್ರಾಮದ ಬಗ್ಗೆ ಹೇಳುತ್ತಿದ್ದೇನೆ. ಈಗಾಗಲೇ ಆ ಗ್ರಾಮಕ್ಕೆ 7-8 ವರ್ಷಗಳ ಹಿಂದೆ ಪರಿಹಾರ ಧನವನ್ನು ವಿತರಣೆ ಮಾಡಲಾಗಿದೆ. ಆ ಗ್ರಾಮದಲ್ಲಿ ಮುಳುಗಡೆಯಲ್ಲಿ ಬಂದಂಥ ಜನರಿಗೆ ಪುನರ್‌ವಸತಿ ನಿವೇಶನಗಳನ್ನು ಕೂಡ ಕೊಡಲಾಗಿದೆ.

12. 30 ಪಿ.ಎಂ.

ಈಗ ಬಹಳಷ್ಟು ಜನ ಈ ಪುನರ್ ವಸತಿ ಕೇಂದ್ರದಲ್ಲಿ ವಾಸಮಾಡಲಿಕ್ಕೆ ಪ್ರಾರಂಭಿಸಿದ್ದಾರೆ. ಈ ಗ್ರಾಮಕ್ಕೆ ಯಾವುದೇ ನಾಗರೀಕ ಸೌಲಭ್ಯವನ್ನು ನೀಡಿಲ್ಲ. ಬಾಗಲಕೋಟೆ ಸಮೀಪ ಕೇವಲ 4-5 ಕಿ.ಮೀ ದೂರದಲ್ಲಿ ಇರುವಂಥ ಗ್ರಾಮದಿಂದ ಮಳೆಗಾಲದ ಸಮಯದಲ್ಲಿ ಅಲ್ಲಿರುವಂಥ ಜನರು ಬಾಗಲ ಕೋಟೆಗೆ ಬರುವುದಕ್ಕೆ ಸಾಧ್ಯವಿಲ್ಲ. ಇವತ್ತಿನವರೆಗೂ ಆ ಗ್ರಾಮಕ್ಕೆ ರಸ್ತೆ ಇಲ್ಲ. ಮಳೆಗಾಲದ ಸಮಯದಲ್ಲಿ ಸುಮಾರು 4-5 ತಿಂಗಳ ಕಾಲ ಆ ಗ್ರಾಮದ ಸುತ್ತ ನೀರು ನಿಲ್ಲುವುದರಿಂದ ಆ ಗ್ರಾಮದ ಜನ ನಡುಗಡ್ಡೆಯಲ್ಲಿ ವಾಸಮಾಡುವಂಥ ದುಸ್ಥಿತಿಯನ್ನು ಈ ಸರ್ಕಾರ ತಂದು ಕೊಟ್ಟಿದೆ. ಅಲ್ಲಿಯ ಬಡಜನರಿಗೆ, ಪರಿಶಿಷ್ಟರಿಗೆ ಮುಂದಿನ ಭವಿಷ್ಯದಲ್ಲಿ ನಿವೇಶನ ಹಂಚಿ ಮನೆಕಟ್ಟಿ ಕೊಡಬೇಕೆಂದು

ಸರ್ಕಾರ ಮುಂದೆ ಬಂದು ತೀರ್ಮಾನ ತೆಗೆದುಕೊಂಡರೂ ಕೂಡ ಅಲ್ಲಿ ಬಯಲು ಜಾಗಕ್ಕೆ ವ್ಯವಸ್ಥೆ ಇಲ್ಲ. ಇನ್ನು ಅಲ್ಲಿ ಬದುಕಲು ನಾಗರೀಕ ಸೌಲಭ್ಯಗಳನ್ನು ಸರ್ಕಾರ ಕೊಟ್ಟಿಲ್ಲ. ಸತ್ತ ನಂತರ ಮೂರು ಮೊಳ ಜಾಗ ಎಂದು ಹಿರಿಯರು ಏನು ಹೇಳುತ್ತಾರೋ, ಆ ಮೂರು ಮೊಳ ಜಾಗ ಸ್ಮಶಾನವನ್ನು ಬಹುತೇಕ ಪುನರ್‌ವಸತಿ ಕೇಂದ್ರಗಳಲ್ಲಿ ಸ್ಮಶಾನಕ್ಕೆ ಜಾಗ ಕೊಟ್ಟಿಲ್ಲ. ಕಳೆದ ತಿಂಗಳು ಮಾನ್ಯ ಮುಖ್ಯಮಂತ್ರಿಯವರು ಮತ್ತು ಅವರ ಸಹೋದ್ಯೋಗಿಗಳು ಬಾಗಲಕೋಟೆಗೆ ಬಂದಿದ್ದಕ್ಕೆ ನಾನು ಅಭಿನಂದನೆಯನ್ನು ಕೂಡ ಸಲ್ಲಿಸಿದ್ದೆ. ಮಾನ್ಯ ನಾಗೇಗೌಡರು, ಮಾನ್ಯ ಎಂ.ಪಿ. ಪ್ರಕಾಶ್ ಅವರುಗಳು ಕೂಡ ಬಾಗಲಕೋಟೆಯ ನವನಗರದ ಕ್ಷೇತ್ರದಲ್ಲಿ ಸುತ್ತಾಡಿ ಬಂದಿದ್ದಾರೆ. ಸದರಿ ಸ್ಥಳದಲ್ಲಿ ಅವರುಗಳು ಸುತ್ತಾಡಿದ ನಂತರ ಅಲ್ಲಿಯ ಗ್ರಾಮೀಣ ಪ್ರದೇಶಕ್ಕೆ ಕೂಡ ಹೋಗಿಬರಬೇಕೆಂದು ನಾನು ವಿನಂತಿ ಮಾಡಿದೆ. ಅದರೆ ಅಲ್ಲಿಗೆ ಮಾನ್ಯ ಮಂತ್ರಿಗಳು ತೆರಳಲಾರದಂತೆ ಅಧಿಕಾರಿಗಳು ವ್ಯವಸ್ಥಿತವಾದಂಥ ಕೆಲಸ ಮಾಡಿದರು. ಅಲ್ಲಿಯ ಗ್ರಾಮೀಣ ಪ್ರದೇಶಕ್ಕೆ ಭೇಟಿ ಕೊಟ್ಟಿದ್ದರೆ ಅಲ್ಲಿಯ ಜನತೆಯ ನೈಜ ಸ್ಥಿತಿ, ಪುನರ್‌ವಸತಿ ಕೇಂದ್ರದ ಬಗ್ಗೆ ಯಾವ ಸ್ಥಿತಿಯಲ್ಲಿದೆ ಎನ್ನುವುದು ಗೊತ್ತಾಗಬಹುದಿತ್ತು ಏನೋ, ಆದರೆ ಅಲ್ಲಿಗೆ ಭೇಟಿ ನೀಡಲು ಮಾನ್ಯ ಮುಖ್ಯ ಮಂತ್ರಿಗಳು ಮನಸ್ಸು ಮಾಡಲಿಲ್ಲ. ಇನ್ನು ಭೂಸ್ವಾಧೀನದ ಬಗ್ಗೆ ಹೇಳುವುದಾದರೆ, ಅವೈಜ್ಞಾನಿಕ ಭೂಸ್ವಾಧೀನ ಕೆಲಸವನ್ನು ಕೂಡ ಸರ್ಕಾರ ಮಾಡುತ್ತಾ ಬಂದಿದೆ. ಅಲಮಟ್ಟಿಯ ಹಿನ್ನೀರು ಪ್ರತೀ ವರ್ಷ ನುಗ್ಗಿ ಭೂಸ್ವಾಧೀನವಾಗಲಾರದೇ ಇದ್ದಂಥ ಅನೇಕ ಜಮೀನುಗಳಲ್ಲಿ ಇದ್ದ ಸೀಕನ್ನು ನಾಶ ಮಾಡಿ, ರೈತರು ಎರಡು ಹೊತ್ತು ಊಟ ಮಾಡುವುದಕ್ಕೆ ಆಗದೇ ಇರುವಂಥ ಚಿತ್ರವನ್ನುಕೂಡ ಪ್ರತಿ ವರ್ಷ ಸರ್ಕಾರ ತಂದುಕೊಡುತ್ತಾ ಬಂದಿದೆ. ಇನ್ನು ನಾರಾಯಣಪುರ ಜಲಾಶಯವನ್ನು ಕಟ್ಟುವಂಥ ಸಂದರ್ಭದಲ್ಲಿ ಕಾಂಗ್ರೆಸ್ಸಿನ ಮಹಾಶಯರು ಮಾಡಿ ಹೋದಂಥ ಅವ್ಯವಸ್ಥೆಯಿಂದಾಗಿ, ಪ್ರತಿ ವರ್ಷ ಕೂಡ ಅಲ್ಲಿ ಭೂ ಸ್ವಾಧೀನವಾಗಲಾರದಂಥ ಕ್ಷೇತ್ರಕ್ಕೆ ಈ ಜಲಾಶಯದ ಹಿನ್ನೀರು ನುಗ್ಗಿ ಸುಮಾರು 6-7 ಹಳ್ಳಿಯ ಜನರಿಗೆ ಇವತ್ತಿಗೂ ಕೂಡ ತೊಂದರೆಯಾಗುತ್ತಲೇ ಇದೆ. ಈ ನೀರು ನುಗ್ಗಿ ಜಮೀನುಗಳಲ್ಲಿ ಬೆಳೆದಂಥ ಬೆಳೆ ನಾಶವಾಗುತ್ತಿರುವು ದರಿಂದ ಸಂಬಂಧಪಟ್ಟ ಗೈತರಿಗೆ ಪರಿಹಾರಧನ ಕೊಡಬೇಕಿತ್ತು. ಅದರೆ ಇವತ್ತಿನವರೆಗೂ ಕೊಡಲಿಲ್ಲ. ಮತ್ತು ಆ ಜಮೀನುಗಳನ್ನು ಕೂಡ ಸರ್ಕಾರ ಸ್ವಾಧೀನ ಮಾಡಿಕೊಳ್ಳುತ್ತಿಲ್ಲ. ಹಂಡೆರಗಲಿ, ಚಿಕ್ಕಮ್ಯಾರಗೇರಿ, ಬೊಮ್ಮಣಗಿ, ಮಂಕಣಿ, ನಾಯಿನೇಗಲಿ ಈ ಗ್ರಾಮಗಳಲ್ಲಿ ಇವತ್ತಿಗೂ ಕೂಡ ನಾರಾಯಣಪುರ ಜಲಾಶಯದ ನೀರು ನುಗ್ಗಿ ಸುಮಾರು 400 ರಿಂದ 500 ಎಕರೆಯಷ್ಟು ಪ್ರದೇಶದ ರೈತರಿಗೆ ತೊಂದರೆ ಆಗುತ್ತಿದೆ . ಈಗಲಾದರೂ ಆ 400 ರಿಂದ 500 ಎಕರೆಯಷ್ಟು ಜಮೀನನ್ನು ಸ್ವಾಧೀನಪಡಿಸಿಕೊಂಡು ಸಂಬಂಧಪಟ್ಟ ರೈತರಿಗೆ ಪರಿಹಾರ ಧನವನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೆಯೇ ಇನ್ನೊಂದು ವಿಶೇಷವಾದಂಥ ಚಿತ್ರವನ್ನು ತಮಗೆ ಕೊಡುತ್ತಿದ್ದೇನೆ. ಪುನರ್‌ವಸತಿ ಕೇಂದ್ರದಲ್ಲಿ ಪಟ್ಟಾ ವಿತರಣೆ ಮಾಡುತ್ತಾ ಬಂದಿದ್ದಾರೆ. ಮುಳುಗಡೆಯಾದ ಪ್ರತಿಯೊಂದು ಮನೆಗೂ ಪರಿಹಾರ ಕೊಡುವುದರ ಜೊತೆಗೆ ಅವರಿಗೆ ಪುನರ್‌ವಸತಿ ಕೇಂದ್ರದಲ್ಲಿ ನಿವೇಶನ ಕೊಡುವಂಥ ಸಂದರ್ಭದಲ್ಲಿ, ಮುಳುಗಡೆಯಾದಗ ಮನೆ ಕಳೆದುಕೊಂಡಂಥ ವ್ಯಕ್ತಿ ಸರ್ಕಾರಿ ನೌಕರನಾಗಿದ್ದರೆ ಅಥವಾ ಬೇರೆ ನೌಕರನಾಗಿದ್ದರೂ ಕೂಡ ಅವನಿಗೆ ನಿವೇಶನ ಕೊಡುತ್ತಿಲ್ಲ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಪ್ರಶ್ನೆ ಮಾಡುವುದೇನೆಂದರೆ - ಸರ್ಕಾರಿ ಸೇವೆ ಎಷ್ಟು ದಿವಸ ಇರುತ್ತದೆ? ನಿವೃತ್ತಿ ಅದ ನಂತರ ತಾನು, ತನ್ನ ಹೆಂಡತಿ ಮಕ್ಕಳು ಆ ಗ್ರಾಮದ ಪುನರ್‌ವಸತಿ ಕೇಂದ್ರದಲ್ಲಿ ಬಂಧು ಮಿತ್ರರ ಜೊತೆ ವಾಸ ಮಾಡಲಿಕ್ಕೆಅವಕಾಶ ಕೊಡಬಾರದೇ? ಈ ದಿಶೆಯಲ್ಲಿ ಸರ್ಕಾರ ಚಿಂತನೆ

ಮಾಡಬೇಕು. ಆದ್ದರಿಂದ ತಕ್ಷಣ ಸರ್ಕಾರಿ ಅಥವಾ ಖಾಸಗಿ ನೌಕರಿಯಲ್ಲಿರುವವರಿಗೆ ಕೂಡ ನಿವೇಶನ ಕೊಡುವಂಥ ವ್ಯವಸ್ಥೆ ಆಗಬೇಕು. ಇವೆಲ್ಲಕ್ಕೂ ಮಿಗಿಲಾಗಿ ಅಧಿಕಾರಿ ಶಾಹಿಗಳ ದರ್ಪದ ಬಗ್ಗೆ ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಲ್ಲಿಯ ಹಳ್ಳಿಯ ಅಮಾಯಕ ಜನರು ಮೇಲಿಂದ ಮೇಲೆ ತಮಗೆ ತಿಳಿದೋ ತಿಳಿಯದೆಯೋ ಅಧಿಕಾರಿಗಳ ಹತ್ತಿರ ಹೋಗುವುದು ರೂಢಿ. ತಮ್ಮ ಜೀವನೋಪಾಯಕ್ಕೆ, ತಮ್ಮ ಬದುಕಿಗೆ ಸಂಬಂಧಪಟ್ಟ ಅನೇಕ ಸಮಸ್ಯೆಗಳನ್ನು ತೆಗೆದುಕೊಂಡು ಅಧಿಕಾರಿಗಳ ಹತ್ತಿರ ಹೋಗುವಂಥ ಸಂದರ್ಭದಲ್ಲಿ ಅಧಿಕಾರಿಗಳು ದರ್ಪದಿಂದ ಅನಾದರೊಂದು ಕುಂಟು ನೆಪ ಹೇಳಿ ವಾಪಸ್ಸು ಕಳುಹಿಸಿ ಅವರಿಗೆ ತೊಂದರೆ ಕೊಡುವಂಥ ಕೆಲಸವನ್ನು ಅಲ್ಲಿಯ ಅಧಿಕಾರಿಗಳು ಮಾಡುತ್ತಾ ಬಂದಿದ್ದಾರೆ. ಅದು ಕೊನೆ ಆಗಬೇಕು. ತಮ್ಮ ನೇತೃತ್ವದಲ್ಲಿ ಸರ್ಕಾರ ನಡೆಯುತ್ತಿದ್ದು, ಅಧಿಕಾರಿಗಳ ದರ್ಪಕ್ಕೆ ಕೊನೆ ಹೇಳುವಂಥ ಸೂಚನೆಯನ್ನು ತಾವು ಕೊಡಬೇಕು. ಇಂಥ ಅಮಾಯಕ ಜನರ ಸ್ಥಿತಿಗತಿಯ ಬಗ್ಗೆ ತಮಗೆ ಮನವರಿಕೆ ಮಾಡಿಕೊಡುತ್ತಾ, ಆ ಭಾಗದಲ್ಲಿ ಯಾರಾದರೂ ಸಮದರ್ಶಿ ಹೋಗಿ ಆ ಸಮಸ್ಯೆಯ ಬಗ್ಗೆ ಗಾಢವಾಗಿ ಚಿಂತನೆ ಮಾಡಿದರೆ- ಸರ್ಕಾರ ಈ ಯೋಜನಾ ಅವಧಿಯ ಸಮೀಪಿಸುತ್ತಾ ಬಂದಂತೆ ಅಲ್ಲಿಯ ಸಂತ್ರಸ್ಥರನ್ನು ಒಕ್ಕಲೆಬ್ಬಿಸಬಹುದೇನೋ ಎನ್ನುವಂಥ ಅನುಮಾನ ಯಾರಿಗಾದರೂ ಅನಿಸಬಹುದು, ಮತ್ತು ಇಂಥ ಭಯ ಅಲ್ಲಿಯ ಎಲ್ಲರ ಮನೆಮಾತಾಗಿದೆ. ಬಾಗಲಕೋಟೆ ಏಷಿಯಾ ಖಂಡದಲ್ಲಿ ಮುಳುಗಡೆಯಾಗುವ ನಗರಗಳಲ್ಲಿ ಅತ್ಯಂತ ಬೃಹತ್ ನಗರವೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸುಮಾರು ಒಂದು ಲಕ್ಷ ಜನಸಂಖ್ಯೆಯ ಈ ಬೃಹತ್ ನಗರ ದರ ಎರಡು ಮೂರರಷ್ಟು ಭಾಗ ಈ 528 ಕೌಂಟರನಲ್ಲಿ ಮುಳುಗಡೆಯಲ್ಲಿ ಬರುವಂಥ ಸಂದರ್ಭದಲ್ಲಿ ಅದರ ಪುನರ್‌ವಸತಿ ಮಾಡಬೇಕು, ಅದಕ್ಕಾಗಿ ಚಂಡೀಘಟ ಮಾದರಿಯಂಥ ಒಂದು ನವ ನಗರವನ್ನು ಸರ್ಕಾರ ನಿರ್ಮಾಣ ಮಾಡುತ್ತದೆ ಎನ್ನುವ ಕನಸನ್ನು ಕಂಡಿದ್ದೆವು. ಅಂತರಾಷ್ಟ್ರೀಯ ಖ್ಯಾತಿಯ ಚಾರ್ಲ್ಸ್ ಕೊರಿಯರಲ್ ಮುಖಾಂತರ ಒಂದು ನೀಲಿನಕ್ಷೆಯನ್ನು ತಯಾರಿಸಿ ನಗರದ ಜನತೆಗೆ ಪುನರ್‌ವಸತಿ ಕಲ್ಪಿಸುವಂಥ ಕಾರ್ಯಕ್ರಮ ಹಾಕಬೇಕು. ಬಾಗಲಕೋಟೆ ನಗರಾಭಿವೃದ್ಧಿ ಪ್ರಾಧಿಕಾರ 1- 1- 1999ರಲ್ಲಿ ಹೊರಡಿಸಿ ಪ್ರಕಟಣೆಯ ವರದಿಯಂತೆ ಇವತ್ತು 3567 ಕಟ್ಟಡಗಳಿಗೆ ಪರಿಹಾರ ಧನ ಕೊಡಬೇಕಾಗಿತ್ತು, ಆ ಪರಿಹಾರ ಕೊಡುವಂಥ ಸಂದರ್ಭಲ್ಲಿ 1725 ಮನೆಗಳಿಗೆ ಪರಿಹಾರಧನ ಕೊಟ್ಟಿಲ್ಲ. ಸುಮಾರು 56,747 ಜನರನ್ನು ಸ್ಥಳಾಂತರ ಮಾಡಬೇಕಾದರೆ ಸುಮಾರು ಒಟ್ಟು 11,367 ಕುಟುಂಬಗಳ ಸ್ಥಳಾಂತರವಾಗಬೇಕು. 10,531 ಕಟ್ಟಡಗಳಿಗೆ ಪರಿಹಾರಧನ ಕೊಡುವಂಥ ಸಂದರ್ಭದಲ್ಲಿ ಸರ್ಕಾರ ವಿಫಲವಾಗಿದೆಯೆಂದು ಹೇಳದೆ ವಿಧಿಯಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಶ್ರೀ ನಾಗೇಗೌಡರು ಕೂಡ ನವನಗರದ ವೀಕ್ಷಣೆ ಮಾಡಿ ಬಂದಿದ್ದಾರೆ. ಅಲ್ಲಿ ನಡೆದಿರುವಂಥ ನಗರ ಕಟ್ಟಡ, ಭೂಸ್ವಾದೀನ ಹಾಗೂ ನಿವೇಶನ ವಿತರಣೆ ಇವು ಸರ್ಕಾರದ ಕಡೆಯಿಂದ ಅವೈಜ್ಞಾನಿಕ ಕಾರ್ಯಕ್ರಮಗಳನ್ನು ರೂಪಿಸಿ ನಗರದ ಜನತೆಗೆ ನೋವು ಕೊಡುತ್ತಾ ಬಂದಿದ್ದಾರೆ. ತಮ್ಮ ಮುಖಾಂತರ ಸರ್ಕಾರಕ್ಕೆ ಪ್ರಶ್ನೆ ಮಾಡುವುದೇನೆಂದರೆ - ಬಾಗಲಕೋಟೆ ನಗರದ ಕಟ್ಟಡಗಳ ಸ್ವಾಧೀನವನ್ನು 521 ಕೌಂಟರ್‌ವರೆಗೆ ಮಾತ್ರ ಸೀಮಿತಗೊಳಿಸುವಂಥ ಇಚ್ಛೆ ಇದೆಯೆ ಹೇಗೆ? ಹಾಗಿದ್ದರೆ, 4510 ಎಕರೆ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವಂಥ ಉದ್ದೇಶವಾದರೂ ಏನು? ಬಾಗಲಕೋಟೆ ನಗರವನ್ನು ಸ್ಥಳಾಂತರ ಮಾಡುವ ಮೂಲಭೂತ ಕಲ್ಪನೆಗೆ ಕೊಡಲಿಪೆಟ್ಟು ಹಾಕುವಂಥ ಚಿತ್ರ ಕಾಣುತ್ತಿದೆ. ಇನ್ನುಳಿದ ಮೂರನೇ ಎರಡರಷ್ಟು ಜನ ಹಳೆಯ ನಗರದಲ್ಲಿಉಳಿದಾಗ,ಸ್ಥಳಾಂತರವೆಂದು ಹೇಗೆ ಪರಿಗಣಿಸಬಹುದು? ಇನ್ನು ಉಳಿದಿರುವಂಥ ಜನರ

ಮನೆಗಳ ಬಾಗಿಲಿಗೆ ನಾರು ಬಂದು ನಿಂತ ಮೇಲೆ ಮಲೇರಿಯಾ ಮುಂತಾದ ಸಾಂಕ್ರಾಮಿಕ ರೋಗಗಳಿಗೆ ಅವರನ್ನು ಈಡು ಮಾಡಿದಂತಾಗುವುದಿಲ್ಲವೇ? ಈ ದಿಶೆಯಲ್ಲಿ ಕೂಡ ಸರ್ಕಾರ ಚಿಂತನೆ ಮಾಡುತ್ತಿಲ್ಲ. ಇದರಿಂದ ಬಾಗಲಕೋಟೆ ಅರ್ಧಂಬರ್ಧ ಮುಳಿಗೆ ಇನ್ನುಳಿದ ಅರ್ಧಂಬರ್ಧ ಜನರ ಸ್ಥಿತಿ ಡೋಲಾಯಮಾನವಾಗಿದೆ. ನಗರದ ಒಂದು ಲಕ್ಷ ಜನತೆಯ ತ್ಯಾಗ, ದೇಶಪ್ರೇಮ ಇವೆಲ್ಲವುಗಳನ್ನು ಸರ್ಕಾರ ಹಗುರವಾಗಿ ಪರಿಗಣಿಸುತ್ತಾ ಬಂದಿದೆಯೆಂದು ಹೇಳದೆ ವಿಧಿ ಇಲ್ಲ. ಇತ್ತ ಸಾಯಲೂ ಬಾರದು ಅತ್ತ ಬದುಕಲೂ ಆಗದಂಥ ತ್ರಿಶಂಕು ಸ್ಥಿತಿಯಲ್ಲಿ ಬಾಗಲಕೋಟೆ ಜನ ಇವತ್ತು ಬದುಕುತ್ತಾ ಇದ್ದಾರೆ. ಜನರ ಜೀವನೋಪಾಯಕ್ಕೆ ಕಲ್ಪಿಸಬಲ್ಲಂಥ ವ್ಯವಸ್ಥೆ ಅಲ್ಲಿ ಇಲ್ಲ. ಕೇವಲ ನಿವೇಶನ , ಪರಿಹಾರಧನ ಕೊಟ್ಟರೆ ಸಾಲದು. ಅಲ್ಲಿ ವ್ಯಾಪಾರ ಉದ್ದಿಮೆಗಳ ಸ್ಥಳಾಂದರ ಆಗಬೇಕು. ಅಲ್ಲಿ ಜನ ನೆಮ್ಮದಿಯಿಂದ ತಮ್ಮ ಉದ್ಯೋಗ ವ್ಯವಸ್ಥೆಯನ್ನು ಮಾಡಿಕೊಂಡು ಬದುಕುವಂಥ ವ್ಯವಸ್ಥೆಯನ್ನು ಕಲ್ಪಿಸಬೇಕು. ಇಂಥ ಸನ್ನಿವೇಶದಲ್ಲಿ ಸರ್ಕಾರ ಒಂದು ದೃಢವಾದಂಥ ನಿಲುವನ್ನು ತಾಳಬೇಕು. ಬಾಗಲಕೋಟೆ ಜನರ ತ್ಯಾಗಕ್ಕೆ ಗೌರವ ನೀಡಬೇಕಾಗಿದ್ದರೆ 528 ಮೀಟರ್‌ನಲ್ಲಿ ಬರುವಂಥ ಎಲ್ಲಾ ಆಸ್ತಿಗಳ ಸ್ವಾಧೀನಕ್ಕೆ ತಕ್ಷಣ ಮುಂದಾಗಬೇಕು. ಹಾಗೂ 528ರಲ್ಲಿ ಬರುವಂಥ ಎಲ್ಲಾ ಜನರಿಗೂ ಪುನರ್‌ವಸತಿ ನಿವೇಶನ ಕೊಡುವ ದಿಶೆಯಲ್ಲಿ ಯೂನಿಟ್ ಎರಡನ್ನ ಕೂಡ ಡೆವಲಪ್ ಮಾಡುವಂಥ ಆದೇಶವನ್ನು ಹೊರಡಿಸಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಕೇವಲ ಪುನರ್‌ವಸತಿ ಪಟ್ಟಾಗಳನ್ನು ವಿತರಣೆ ಮಾಡಿ, ನೀವು ಅಲ್ಲಿಗೆ ಹೋಗಿ ಎಂದು ಹೇಳಿದರೆ ಸಾಕಾಗುವುದಿಲ್ಲ. ಜನರ ಮೂಲಭೂತ ವ್ಯವಸ್ಥೆಯನ್ನೇ ಕಳಚಿಕೊಂಡ ಮೇಲೆ, ಜನರ ಉದ್ಯೋಗವನ್ನೇ ಕಳಚಿಕೊಂಡ ದುರಾದೃಷ್ಟ ಸಂದರ್ಭದಲ್ಲಿ ಅವರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಲು ಅಲ್ಲಿ ಅನೇಕ ಉದ್ಯೋಗಗಳನ್ನು ಸ್ಥಾಪಿಸಬೇಕು. ನಿವೇಶನ ಪರಿಹಾರ ಧನ ವಿತರಣೆ ಹೊರತಾಗಿ ಸರ್ಕಾರ ಇಲ್ಲಿಯವರೆಗೆ ಆರ್ಥಿಕ ಪುನರ್‌ವಸತಿಗೆ ಯಾವುದೇ ಕ್ರಮವನ್ನೂ ಕೈಗೊಂಡಿಲ್ಲ. ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಸರ್ಕಾರದ ಪ್ರಯೋಜನ ಪಡೆದು, ಸ್ವಾವಲಂಬಿಯಾಗಿ ಒಂದೇ ಒಂದು ಕುಟುಂಬವು ಬದುಕುತ್ತಿಲ್ಲ.

ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ): ಇವತ್ತು ಬಾಗಲುಕೋಟೆ ವಿಚಾರದಲ್ಲಿ ಅದೇಷ್ಟು ಸುಪ್ರಸಿದ್ಧವಾಗಿದೆ, ವಾಣಿಜ್ಯ ಕೇಂದ್ರವಾಗಿದೆ, ಮುಳುಗಡೆಯಿಂದ ನಿರ್ವಸಿತರಾದ ಜನರಿಗೆ ನಾವು ಯಾವ ರೀತಿಯ ಉದ್ಯೋಗಗಳನ್ನು ಕೊಡುತ್ತೇವೆಂಬ ಬಗ್ಗೆಯಾಗಲಿ, ಯಾವುದೇ ಯೋಚನೆಗಳ ಬಗ್ಗೆಯಾಗಲೀ ನೀಲಿ ನಕ್ಷೆ ತಯಾರಾಗಿಲ್ಲ. ಇವತ್ತು ಪರಿಹಾರ ಕೊಡಬೇಕೆನ್ನುವುದಾದರೆ ಅಲ್ಲಿರುವ ಜನರನ್ನು ಒಂದೆಡೆಯಿಂದ ಪಕ್ಕದ ಪುನರ್ವಸತಿ ಕೇಂದ್ರಕ್ಕೆ ವರ್ಗಾವಣೆ ಮಾಡುತ್ತೇವೆನ್ನುವುದಾದರೆ , ಅವರ ಜೀವನವನ್ನು, ಭವಿಷ್ಯವನ್ನು ಯಾವ ರೀತಿ ನಿರ್ಮಿಸಿಕೊಳ್ಳಬೇಕೋ, ಅದಕ್ಕೆ ಅಗತ್ಯವಾದ ಉದ್ಯೋಗಗಳನ್ನು ಯಾವ ರೀತಿ ಕೊಡುತ್ತಾರೆಂಬುದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ನೀಡಬೇಕಾಗಿದೆ. ಪುನರ್ವಸತಿ ಕೇಂದ್ರಗಳಿಗೆ ಕೂಡ ನಾನೊಂದು ಸಾರಿ ಭೇಟಿ ನೀಡಿದ್ದೆ. ತಾವೇನಾದರೂ ಅಲ್ಲಿಗೆ ಹೋದರೆ, ನಾವು ಕೊಟ್ಟಿಗೆಗಳನ್ನು ಯಾವ ರೀತಿ ಧನ ಹಸುಗಳನ್ನು ಕಟ್ಟಲು ಉಪಯೋಗಿಸುತ್ತೇವೆಯೋ, ಅಂಥ ಜಾಗಗಳಲ್ಲಿ ಪುನರ್ವಸತಿ ಕೇಂದ್ರವೆಂದು ಹೇಳಿಕೊಂಡಿರುವ ಸ್ಥಳಗಳಲ್ಲಿ, ಅಲ್ಲಿಗೆ ಹೋದ ಜನರು ವಾಸಿಸುತ್ತಿದ್ದಾರೆ . ಆ ಸ್ಥಿತಿ ಹೀನಾಯವಾಗಿದೆ. ಅವರಿಗೆ ಪುನರ್ವಸತಿ ಮಾಡುವ ಸಂದರ್ಭದಲ್ಲಿ ತಾವೇನೇನು ಅನುಕೂಲಗಳನ್ನು

ಮಾಡಿಕೊಡಬೇಕೆಂದಿದ್ದೀರೋ, ಯಾವ್ಯಾವ ರೀತಿಯ ಉದ್ಯೋಗಗಳನ್ನು ಒದಗಿಸಬೇಕೆಂದಿದ್ದೀರೋ, ಅದರ ಪರ್ಯಾಯ ವ್ಯವಸ್ಥೆ ಏನಿದೆ ಎನ್ನುವ ಬಗ್ಗೆ ಸದನದಲ್ಲಿ ಸ್ಪಷ್ಟೀಕರಣ ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಪಿ.ಹೆಚ್.ಪೂಜಾರ್ : ಆ ಜನರ ಆಸ್ತಿಗಳನ್ನು ಸ್ವಾಧೀನ ಮಾಡಿಕೊಳ್ಳಬೇಕು. 528 ಮೀಟರ್‌ವರೆಗೆ ಮಂಗಳ ಹಾಡಬೇಕೆಂಬ ವಿಚಾರವನ್ನು ನಾನು ತಮ್ಮ ಮುಂದೆ ಹೇಳಲು ಇನ್ನೊಂದು ಕಾರಣವೂ ಇದೆ. ಬಾಗಲುಕೋಟೆ ಮುಳುಗಡೆಯಲ್ಲಿ ಬರುವ ಅನೇಕ ಜನರ ಮನೆಗಳಿಗೆ ಪರಿಹಾರ ಧನ ಬಂದಿದೆ. ಅವರ ಅಂಗಡಿ-ಮುಂಗಟ್ಟುಗಳು ಮುಳುಗಡೆಯಾಗಲಾರದ 528 ಮೀಟರ್ ಪ್ರದೇಶದಲ್ಲಿ ಬರುವ ಜಾಗದಲ್ಲಿವೆ. ಕೆಲವರ ಅಂಗಡಿಗಳಿಗೆ ಪರಿಹಾರ ಧನ ಬಂದಿದೆ. ಆದರೆ, ಮನೆಗಳು ಮಾತ್ರ 528 ಮೀಟರ್ ಕೆಳಗಡೆ ಬರುವ ಪ್ರದೇಶದಲ್ಲಿವೆ. ಈ ದಿಸೆಯಲ್ಲಿ ಕೂಡ ಸರ್ಕಾರ ಚಿಂತನೆ ಮಾಡಬೇಕು. 528ರ ಅಡಿಯಲ್ಲಿ ಬರುವ ಎಲ್ಲಾ ಆಸ್ತಿಗಳನ್ನೂ ತಕ್ಷಣ ಸ್ವಾಧೀನ ಮಾಡಿಕೊಳ್ಳಲು ಮುಂದಾಗಬೇಕು. ಇದೇ ವಿಚಾರದಲ್ಲಿ ಸುಪ್ರೀಂಕೋರ್ಟ್‌ನ ತೀರ್ಪಿನ ಬಗ್ಗೆ ಸರ್ಕಾರದ ಮಂತ್ರಿಗಳು ಹೇಳಿದರೂ ಹೇಳಬಹುದು. ಸುಪ್ರೀಂಕೋರ್ಟ್ ತೀರ್ಪು ಏನಾದರೂ ಆಗಬಹುದು. 521 ಕೌಂಟರ್‌ರವರೆಗೆ ಮಾತ್ರ ನಾವ ಸ್ವಾಧೀನ ಮಾಡಿಕೊಳ್ಳುತ್ತೇವೆ, ಅದಕ್ಕಿಂತ ಹೆಚ್ಚಿನದನ್ನು ಸ್ವಾಧೀನಪಡಿಸಿಕೊಳ್ಳುವುದಿಲ್ಲವೆಂಬ ದೃಢ ನಿರ್ಧಾರವನ್ನು ಸರ್ಕಾರ ತಾಳುವುದಾದರೆ ಅದನ್ನು ನಾವು ಸ್ವಾಗತಿಸುತ್ತೇವೆ. ಆದರೆ, ದೌರ್ಭಾಗ್ಯವೆಂದರೆ , ನಮ್ಮ ವಿಚಾರ ಸರ್ಕಾರದ ವಿಚಾರ 528ರ ಕೌಂಟರ್‌ವರೆಗೆ ಸ್ವಾಧೀನಪಡಿಸಿಕೊಳ್ಳಬೇಕು, ಇನ್ನುಳಿದ ಪ್ರದೇಶವನ್ನು ಸ್ಥಳಾಂತರ ಮಾಡಬೇಕು. ಅವರಿಗೂ ಕೂಡ ಪರಿಹಾರ ಧನವನ್ನು ಅನಿವಾರ್ಯವಾಗಿ ಕೊಡಲೇ ಬೇಕಾಗುತ್ತದೆ. ಈ ದಿಸೆಯಲ್ಲಿ ಸರ್ಕಾರ ಮುಂದೆ ತಾಳುವ ವಿಚಾರ ಬಿಟ್ಟು, ತಕ್ಷಣ ಕ್ರಮ ಕೈಗೊಂಡು, ಸುಪ್ರೀಂ ಕೋರ್ಟಿನ ತೀರ್ಪಿಗೆ ಕಾಯದೆ ಕೆಲಸ ಮಾಡಲು ಮುಂದಾಗಬೇಕೆಂಬ ವಿನಂತಿಯನ್ನು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮಾಡಿಕೊಳ್ಳುತ್ತಿದ್ದೇನೆ. ಮುಳುಗಡೆ ಸಂತ್ರಸ್ಥರಲ್ಲಿ ಕಡುಬಡವರಿಗೆ, ನಿರ್ಗತಿಕರಿಗೆ ಪುನರ್ವಸತಿ ಕೇಂದ್ರಗಳಲ್ಲಿ ಜಾಗ ಇಲ್ಲ. ಅವರಿಗೂ ಕೂಡ ಜಾಗವಿಡಲು ನಾನು ಒತ್ತಾಯಿಸುತ್ತಿದ್ದೇನೆ. ಅನೇಕ ಬಾರಿ ಈ ವಿಚಾರದ ಬಗ್ಗೆ ಚರ್ಚೆಯಾಗಿದೆ. ಮುಳುಗಡೆಯಲ್ಲಿ ಬರುವ ನಿರಾಶ್ರಿತರ ಮಕ್ಕಳಿಗೆ ಸರ್ಕಾರಿ ಸೇವೆಯಲ್ಲಿ ರಕ್ಷಣೆ ನೀಡಬೇಕು. ಕಳೆದ ಅಧಿವೇಶನದಲ್ಲಿ ನೀರಾವರಿ ಮಂತ್ರಿಗಳಾದ ಶ್ರೀ ಕೆ.ಎನ್. ನಾಗೇಗೌಡರವರು 10 ಪರ್ಸೆಂಟ್ ರಿಸರ್ವೇಷನ್ ಬಗ್ಗೆ ಚರ್ಚೆಯಾದಾಗ, ಕೇವಲ ಸಿ ಮತ್ತು ಡಿ ಹುದ್ದೆಗಳಿಗೆ ಮಾತ್ರ ರಿಸರ್ವೇಷನ್ ಕೊಡುತ್ತೇವೆಂದು ಭರವಸೆ ಕೊಟ್ಟಿದ್ದರು. ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುವುದೇನೆಂದರೆ, ಅದನ್ನು ಬಿ ವರ್ಗಕ್ಕೂ ಕೂಡ ಕೊಡಬೇಕು. ತಕ್ಷಣ ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಿ, ಆದೇಶವನ್ನು ಹೊರಡಿಸಬೇಕೆಂದು ನಾನು ಸಚಿವರಲ್ಲಿ ವಿನಂತಿಸುತ್ತೇನೆ. ಇನ್ನು, ಪುನರ್‌ವಸತಿ ಕೇಂದ್ರಗಳಲ್ಲಿ ಯಾರಾದರೂ ಹೋಗಿ ನೋಡಬಹುದು. ನಿರೋದ್ಯೋಗ ಅಲ್ಲಿ ತಾಂಡವವಾಡುತ್ತಿದೆ. ಅಲ್ಲಿನ ಸ್ತ್ರೀ- ಪುರುಷರ್‍ಯಾರು ಯಾವ ಕೆಲಸವನ್ನೂ ಮಾಡುತ್ತಿಲ್ಲ. ನಿರಾಶ್ರಿತರು ಟೆಂಟಿನ ಕೆಳಗಡೆ ವಾಸ ಮಾಡುವ ದುಸ್ಥಿತಿ ಇದೆ. ಈ ದಿಸೆಯಲ್ಲಿ ಅವರಿಗೆ ತರಬೇತಿ ಕಾರ್ಯಾಗಾರಗಳನ್ನು ನಡೆಸಬೇಕು. ಬಿಲ್ಡಿಂಗ್ ಕಟ್ಟಲು, ಗಾರೆ, ಕುಂಬಾರಿಕೆ ಮುಂತಾದ ಕಸುಬುಗಳನ್ನು ಮಾಡಲು ಒಂದು ಕಾರ್ಯಾಗಾರವನ್ನು ಮಾಡಿದರೆ, 4-6 ಸಾವಿರ ಜನರು ಬದುಕಲು, ಸ್ವಯಂ ಉದ್ಯೋಗ ಮಾಡಲು ಅನುಕೂಲವಾಗುತ್ತದೆಂಬುವ ವಿಚಾರವನ್ನು ನಾನು ತಮಗೆ

ಹೇಳುತ್ತೇನೆ. ಈ ಎಲ್ಲಾ ಸಮಸ್ಯೆಗಳನ್ನು ತಮ್ಮ ಮುಂದೆ ಹೇಳುತ್ತಾ, ಇವತ್ತು ಸರ್ಕಾರದ ನೀತಿಯ ಬಗ್ಗೆ ನಾನು ಪ್ರಶ್ನೆ ಮಾಡಬೇಕಾಗಿದೆ. 2000ನೇ ಇಸವಿಯೊಳಗೆ ಮುಗಿಸುವ ಇಚ್ಛಾಶಕ್ತಿ ಸರ್ಕಾರಕ್ಕೆ ಇಲ್ಲ. ಕೇವಲ ಕೆಲವೆ ಜನರ ಪಿತೂರಿಯಿಂದ, ಅಲ್ಲಿಯ ಕೆಲವು ಪಟ್ಟಭದ್ರಹಿತಾಸಕ್ತಿಗಳ ವ್ಯವಸ್ಥೆಯಿಂದ, ಕಂಟ್ರಾಕ್ಟರುಗಳಿಂದ, ಅಧಿಕಾರಿಗಳಿಂದ ಕಣ್ಣಾ ಮುಚ್ಚಾಲೆಯಿಂದ ಕೃಷ್ಣಾ ಬೇಸಿನ್ ಯೋಜನೆಗಳೇನಿವೆ ಇದಕ್ಕೆ ತಡೆ ಹಾಕುವ ತೀರ್ಮಾನವನ್ನು ಸರ್ಕಾರ ಮಾಡುವಂತೆ ಕಾಣುತ್ತಿದೆ. ಈ ನಿರ್ಧಾರ ಕೊನೆಯಾಗಬೇಕು. ಸರ್ಕಾರ ಈ ದಿಸೆಯಲ್ಲಿ ಮುಂದಾಗಿ, 2000ನೇ ಇಸವಿಯೊಳಗೆ ಈ ಯೋಜನೆಗಳನ್ನು ಮುಗಿಸುವ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಯುದ್ಧೋಪಾದಿಯಲ್ಲಿ ಅದಕ್ಕೆ ಮುಂದಾಗಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ. ಸರ್ಕಾರ ಈ ಯೋಜನೆಯ ಸಲುವಾಗಿ ಕೆಬಿಜೆಎನ್‌ಎಲ್‌ನ್ನು ರಚಿಸಿದೆ. ಎರಡೂ ನಿಗಮಗಳಿಂದ ನೂರಾರೂ, ಸಾವಿರಾರು ಕೋಟಿ ರೂಪಾಯಿಗಳ ಸಾಲ ಮಾಡಿದೆ. ಪ್ರತಿ ವರ್ಷ 400 ಕೋಟಿ ರೂಪಾಯಿಗಳನ್ನು ತುಂಬಬೇಕಾಗಿದೆ. ಸರ್ಕಾರ ಏನು ಮಾಡುತ್ತಿದೆ? ಏಕೆ ಕಣ್ಣು ಮುಚ್ಚುತ್ತಿದೆ? ತಕ್ಷಣ ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಿ ಪಡೆಯಲು ಏನು ಕೆಲಸ ಮಾಡಬೇಕೋ ಅದನ್ನು ಮಾಡಬೇಕಾಗಿತ್ತು. ಈ ದಿಸೆಯಲ್ಲಿ ಸರ್ಕಾರ ವಿಫಲವಾಗಿದೆ. ಇವತ್ತು ಶ್ರೀ ಪ್ರಕಾಶ್‌ರವರು ರಸ್ತೆಗಳಿಗೆ ಹಣ ಕೊಟ್ಟಿದ್ದು, ಅದಕ್ಕೆ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು. ಯಾವ ರಸ್ತೆಗೆ, ಎಲ್ಲಿ ಕೊಟ್ಟಿದ್ದಾರೆ? ದಯವಿಟ್ಟು ಪ್ರಕಾಶರವರು ಸದನಕ್ಕೆ ತಿಳಿಸಬೇಕೆಂದು ಒತ್ತಾಯಿಸುತ್ತೇನೆ. ಗ್ರಾಮೀಣಾಭಿವೃದ್ಧಿ ದಿಸೆಯಲ್ಲಿ ಆದ ವ್ಯವಸ್ಥೆ ಬಗ್ಗೆ ಹೇಳಬೇಕಾಗುತ್ತದೆ. ಈ ಸರ್ಕಾರ, ನಾವು ಗ್ರಾಮೀಣಾಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟು ಕೆಲಸ ಮಾಡುತ್ತಾ ಬಂದಿದ್ದೇವೆ, ಗ್ರಾಮೀಣಾಭಿವೃದ್ಧಿಯನ್ನು ಚಿಂತನೆಯಲ್ಲಿ ನಮ್ಮನ್ನು ಮೀರಿಸುವವರು ಇಲ್ಲ. ಮುಂದೆ ಕೂಡ ಬರುವುದಿಲ್ಲವೆನ್ನುವ ಭರವಸೆಯನ್ನು ಮಾತ್ರ ಹೇಳುತ್ತಾ ಬಂದಿದ್ದಾರೆ. ಅದು ಸಂಪೂರ್ಣ ಸುಳ್ಳಿನ ಕಂತೆ ಎಂದು ಹೇಳದೆ ಬೇರೆ ವಿಧಿ ಇಲ್ಲ. ಗ್ರಾಮೀಣಾಭಿವೃದ್ಧಿಗಾಗಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಸರ್ಕಾರ ಮಾಡಿರುವ ಖರ್ಚೆಷ್ಟು? ಅಂಕಿ- ಅಂಶಗಳನ್ನು ಸರ್ಕಾರದಿಂದ ಕೇಳಲು ನಾನು ಇಚ್ಛಿಸುತ್ತಿದ್ದೇನೆ. ನಿಮ್ಮ ಸರ್ಕಾರ ಮ್ಯಾಚಿಂಗ್ ಗ್ರಾಂಟ್‌ನ್ನು ಏಕೆ ಖರ್ಚು ಮಾಡಿಲ್ಲ? ಇವತ್ತು ಫೆಬ್ರವರಿ ಎಂಡ್‌ವರೆಗೆ ಇದ್ದ ಅಂಕಿ-ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ರೂರಲ್ ಎಂಪ್ಲಾಯ್‌ಮೆಂಟ್ ಮತ್ತು ಪಾವರ್ಟಿ ಈ ತರಹದ ಅಲಿವಿಯೇ ಸ್ಕೀಮ್‌ಗಳಲ್ಲಿ ಸರ್ಕಾರ 96-97ರಲ್ಲಿ 129.91ದಷ್ಟು ಖರ್ಚು ಮಾಡಲಿಲ್ಲ. 97-98ರಲ್ಲಿ 91 ಕೋಟಿ 65 ಲಕ್ಷ ರೂಪಾಯಿಗಳಷ್ಟು ಗ್ರಾಂಟ್ ಲ್ಯಾಪ್ಸ್ ಯಿತು. 98-99ರಲ್ಲಿ 221.9 ಕೋಟಿ ರೂಪಾಯಿಗಳಷ್ಟು ಲ್ಯಾಪ್ಸಾಯಿತು. ಜೆಆರ್‌ವೈ, ಐಎವೈ ಎಂವೈ ಎಫ್, ಐಆರ್‌ಡಿಪಿ, ಡ್ವಾಕ್ರಾ, ಟ್ರೈಸಂ, ಡಿಪಿಎಪಿ, ಡಿಡಿಪಿ, ಟೂಲ್-ಕಿಟ್ಸ್ ಈ ಎಲ್ಲಾ ಯೋಜನೆಗಳಲ್ಲಿ ಸರ್ಕಾರ ಹಣವನ್ನು ಲ್ಯಾಪ್ಸ್ ಮಾಡಿದೆ. ಇದರ ಜೊತೆಗೆ ಡಿಪಾರ್ಟ್‌ಮೆಂಟ್ ಆಫ್ ರೂಲ್ ಡೆವಲೆಪ್‌ಮೆಂಟ್‌ನಲ್ಲಿ ಕೂಡ ಸರ್ಕಾರ ತನ್ನ ಮ್ಯಾಚಿಂಗ್ ಗ್ರಾಂಟ್‌ನ್ನು ಖರ್ಚು ಮಾಡಿಲ್ಲ. ಇದರಲ್ಲಿ ಆರ್‌ವೈಎಸ್, ಎಆರ್‌ಡಬ್ಲ್ಯೂಎಸ್‌ಪಿ, ಡಬ್ಲ್ಯೂಎನ್‌ಪಿ, ಡಬ್ಲ್ಯೂಎಸ್‌ಪಿ, ಆರ್‌ಎಸ್‌ಪಿ, ಸಿಆರ್‌ಎಸ್‌ಪಿ, ಎಂಎನ್‌ಪಿ, ಎಂಎಸ್‌ಎಪಿ, ಎಂವೈಎಪಿ, ಎನ್‌ಎಸ್‌ಬಿಎಸ್, ಎಸ್‌ಡಬ್ಲ್ಯೂಬಿಎಸ್, ಎಲ್‌ಆರ್‌ಎಲ್‌ಬಿ, ಇದರಲ್ಲಿ ಕೂಡ ಯಾವ ಯಾವ ವರ್ಷದಲ್ಲಿ ಎಷ್ಟು ಹಣ ಖರ್ಚು ಮಾಡಿಲ್ಲ ಎನ್ನತಕ್ಕಂಥ ಒಂದಂಶವನ್ನು ನಾನು ಇಲ್ಲಿ ಹೇಳಬಯಸುತ್ತೇನೆ. 1998-99ನೇ ಸಾಲಿಗೆ ಹೇಳುವುದಾದರೆ, 594 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿಲ್ಲ, 1997-98ನೇ ಸಾಲಿಗೆ ಈ ವಿಭಾಗದಲ್ಲಿ 91 ಕೋಟಿ 61 ಲಕ್ಷ

ರೂಪಾಯಿಗಳನ್ನು ಖರ್ಚು ಮಾಡಿಲ್ಲ. 1996-97ನೇ ಸಾಲಿನಲ್ಲಿ 158 ಕೋಟಿ 26 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿಲ್ಲ. ಈ ಎಲ್ಲಾ ಅಂಕಿಅಂಶಗಳನ್ನು ಗಮನಿಸಿದಾಗ ಈ ಸರ್ಕಾರಕ್ಕೆ ಗ್ರಾಮೀಣಾಭಿವೃದ್ಧಿಯ ಬಗ್ಗೆ ಏನು ಕಳಕಳಿ ಇದೆ ಎನ್ನುತಕ್ಕಂಥದ್ದು ವಿಧಿತವಾಗುತ್ತಿದೆ. ಇನ್ನು ಅಂಗನವಾಡಿ ಕಾರ್ಯಕರ್ತೆಯರ ಬಗ್ಗೆ ಹೇಳುವುದಾದರೆ ನಾವಿಂದು ಎಲ್ಲಾ ಕಡೆ ಅವರ ದುಸ್ಥಿತಿಯನ್ನು ನೋಡುತ್ತಿದ್ದೇವೆ. ಎಲ್ಲಾ ಕಡೆ ಈ ಅಂಗನವಾಡಿ ಕಾರ್ಯಕರ್ತೆಯರನ್ನು ಅಪಾಯಿಂಟ್‌ಮೆಂಟ್ ಮಾಡಿಕೊಂಡು ಚೆನ್ನಾಗಿ ಕೆಲಸ ಮಾಡಿರಿ, ನೀವು ಎಲ್ಲರೂ ಒಳ್ಳೆಯ ರೀತಿಯಲ್ಲಿ ಸೇವೆ ಸಲ್ಲಿಸಿ ನಿಮಗೆ ಎಲ್ಲಾ ರೀತಿಯಿಂದಲೂ ಸಹಕಾರ ಕೊಡುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಕೊಡುತ್ತಿದ್ದೇವೆ. ಆದರೆ ಸರ್ಕಾರ ಕೊಡುವುದು ಕೇವಲ 500 ರೂಪಾಯಿ ಇವತ್ತು ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮಾಂತರ ಮಟ್ಟದಲ್ಲಿ , ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಪ್ರಭಲವಾದಂಥ ಹೋರಾಟವನ್ನು ಪ್ರಾರಂಭಿಸಿದ್ದಾರೆ. ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಮಹಾರಾಷ್ಟ್ರದಲ್ಲಿ ಯಾವ ರೀತಿ ಒಬ್ಬ ಅಂಗನವಾಡಿ ಕಾರ್ಯಕರ್ತೆಯರಿಗೆ ಒಂದು ಸಾವಿರ ರೂಪಾಯಿ ಮಾಸಿಕ ವೇತನ ಕೊಡುತ್ತಿದ್ದಾರೆ, ಅದೇ ರೀತಿಯಲ್ಲಿ ಈ ಸರ್ಕಾರ ಕೂಡ ಕೊಡಬೇಕು ಎಂದು ನಾನು ಒತ್ತಾಯಿಸುತ್ತಿದ್ದೇನೆ. ಇನ್ನು ಹಸಿರುಕಾರ್ಡು ವಿತರಣೆ ಬಗ್ಗೆ ಎರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ನನ್ನ ತಾಲ್ಲೂಕಿನಲ್ಲಿ ಹಾಗೂ ಮುಳಗಡೆ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ಅನೇಕ ಕಡುಬಡವರು ಇದ್ದಾರೆ. ಇಂಥವರಿಗೆ ಹಸಿರು ಕಾರ್ಡುಗಳನ್ನು ವಿತರಣೆ ಮಾಡುವುದು ಸರ್ಕಾರದ ಕರ್ತವ್ಯ ಅಲ್ಲವೆ? ಅನೇಕ ಭರವಸೆಗಳನ್ನು ಕೊಟ್ಟಂಥ ಸರ್ಕಾರ ಇಂದು ಬಡವರಿಗೆ ಅನ್ನದ ವ್ಯವಸ್ಥೆಯನ್ನು ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ . ಸರ್ಕಾರ ಮಾಡುವ ಉಪಕಾರವೇ ಇದು, ಹಸಿದವರಿಗೆ ಊಟ ಕೊಡುವುದು ಉಪಕಾರವಲ್ಲ ಇದು ಸರ್ಕಾರದ ಅಧ್ಯಕರ್ತವ್ಯ.ಇದು ಮಾನವೀಯತೆಯ ಕಾನೂನು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಡುಬಡವರಿಂದ ಸುಮಾರು 6000 ಅರ್ಜಿಗಳು ಬಂದಿದ್ದರೂ ಕೇವಲ 3500 ಹಸಿರು ಕಾರ್ಡುಗಳನ್ನು ವಿತರಣೆ ಮಾಡಿದ್ದಾರೆ. ಇನ್ನು ಹೆಚ್ಚಿನ ರೀತಿಯಲ್ಲಿ ಹಸಿರುಕಾರ್ಡುಗಳನ್ನು ವಿತರಣೆ ಮಾಡುವುದಕ್ಕೆ ಸರ್ಕಾರ ಮುಂದಾಗಬೇಕು ಎನ್ನತಕ್ಕಂಥ ಮಾತನ್ನು ತಮ್ಮ ಮುಖೇನ ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಇನ್ನು ಅನುಸೂಚಿತ ಜಾತಿ ಮತ್ತು ಅನುಸೂಚಿತ ವರ್ಗದ ಜನರ ಕಲ್ಯಾಣಕ್ಕೆಂದೇ ಇರುವ ಗಂಗಾಕಲ್ಯಾಣ ಯೋಜನೆಯ ಬಗ್ಗೆ ಹೇಳುವುದಾದರೆ, ಸರ್ಕಾರದ ಅಂಕಿಅಂಶಗಳು ಪ್ರಕಾರ ಇಲ್ಲಿಯವರೆಗೆ ಸುಮಾರು ನಾಲ್ಕು ಸಾವಿರ ಬಾವಿಗಳನ್ನು ತೋಡಿಸಲಾಗಿದೆ. ಇದಕ್ಕೆ ಸಂಬಂಧಪಟ್ಟ ಮಾನ್ಯ ಮುಖ್ಯಮಂತ್ರಿಗಳಾದ ಕೃಷ್ಣಾರೆಡ್ಡಿಯವರ ಬಳಿ ಹೋದಾಗ ಅವರು, ವಿದ್ಯುತ್ತಿನ ಲೋಪದೋಷದ ಬಗ್ಗೆ ಹೇಳುತ್ತಾ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು. ವಿದ್ಯುತ್ತಿನ ವ್ಯವಸ್ಥೆ ಈ ರೀತಿ, ಗಂಗಾಕಲ್ಯಾಣದ ವ್ಯವಸ್ಥೆ ಈ ರೀತಿ ಹಾಗೂ ಹಸಿರುಕಾರ್ಡುಗಳ ವ್ಯವಸ್ಥೆ ಈ ರೀತಿ ಇದರ ಜೊತೆಗೆ ಉತ್ತರ ಕರ್ನಾಟಕ ಬಹು ದೊಡ್ಡ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ) ಇದು ಮುಗಿಯಬಹುದು ಅಥವಾ ಇಲ್ಲವೋ ಎನ್ನುವ ಸಂಶಯದಲ್ಲಿ ಆ ಭಾಗದ ಜನರು ತೂಗಾಡುವ ಕತ್ತಿಯ ಕೆಳಗೆ ಬದುಕುವಂತಹ ಒಂದು ದುಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ರಾಜ್ಯಪಾಲರು ದಯಮಾಡಿಸಿದ ಈ ಭಾಷಣಕ್ಕೆ ನನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾ, ನನಗೆ ಇಲ್ಲಿ ಮಾತನಾಡಲು ಅವಕಾಶ ಕಲ್ಪಿಸಿ ಕೊಟ್ಟಂಥ ಸನ್ಮಾನ್ಯ ಸಭಾಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರಗಳು....

+ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಉಪಾಧ್ಯಕ್ಷರೆ, ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಸಲ್ಲಿಸಿತಕ್ಕಂಥ ಒಂದು ವಿಧಾನ. ಇದೇನು ಯಾರು ಹೊಸದಾಗಿ ಮಾಡತಕ್ಕಂಥ ವಿಧಾನ ಏನೂ ಅಲ್ಲ. ಈ ವಿಧಾನ ಸರಿಯೇ ಎಂಬುದೇ ನನ್ನ ವಾದ. ಏಕೆಂದರೆ, ಸರ್ಕಾರ, ಸಚಿವಸಂಪುಟ ರಚಿಸಿದಂಥ ಭಾಷಣವನ್ನು ಮಾನ್ಯ ರಾಜ್ಯಪಾಲರು ಒಂದಕ್ಷರವನ್ನೂ ಬದಲಾವಣೆ ಮಾಡದೇ ಕಾಮ, ಫುಲಿಸ್ಟಾಪ್‌ನ್ನು ಬದಲಾಯಿಸದೇ ಹಾಗೆ ಹೇಳತಕ್ಕಂಥದ್ದು ಇದು ರಾಜ್ಯಪಾಲರ ಭಾಷಣ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದೊಂದು ರೀತಿಯ ಪರಕಾಯ ಪ್ರವೇಶ. ಸಚಿವ ಸಂಪುಟ ತಯಾರು ಮಾಡಿದಂಥ ಭಾಷಣವನ್ನು ರಾಜ್ಯಪಾಲರು ಓದತಕ್ಕಂಥದ್ದು ಇದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸರಿಯಿಲ್ಲ ಎಂದು ನನ್ನ ವೈಯಕ್ತಿಕ ಅಭಿಪ್ರಾಯ. ಈ ಬಗ್ಗೆ ದೇಶದಲ್ಲಿ ಚಿಂತನೆ ಮಾಡಲಿ, ಬಹಳ ಚಿಂತನಶೀಲರು, ಪ್ರಬುದ್ಧರು ಇರತಕ್ಕಂಥ ಈ ದೇಶದಲ್ಲಿ ಇದರ ಬಗ್ಗೆ ಚರ್ಚೆ ಮಾಡಲಿ. ಬ್ರಿಟಿಷ್ ಪಾರ್ಲಿಮೆಂಟ್ ಪದ್ಧತಿಯನ್ನು ನಾವು ಇಂದು ಮುಂದು ವರಿಸಿಕೊಂಡು ಬರುತ್ತಿರುವುದು ನಿಜ. ನಾನು ಬಹಳ ಅಪಾರವಾದ ಗೌರವನ್ನು ರಾಜ್ಯಪಾಲರ ಮೇಲೆ ಇಟ್ಟುಕೊಂಡು ಬಂದಿದ್ದೇನೆ. ಇದರಲ್ಲಿ ಎರಡು ಮಾತಿಲ್ಲ. ರಾಜ್ಯಪಾಲರು ಸದನಕ್ಕೆ ಬರುವುದು, ಚುನಾಯಿತ ಪ್ರತಿನಿಧಿಗಳಾದ ನಾವು ಎಲ್ಲರೂ ಎದ್ದುನಿಂತುಕೊಳ್ಳುವುದು ಅವರು ಬಂದ ನಂತರ ಭಾಷಣಕ್ಕೆ ಎದ್ದು ನಿಂತುಕೊಳ್ಳುವುದಕ್ಕಿಂತ ಮುಂಚೆ ನಾವು ಎಲ್ಲರೂ ಕುಳಿತುಕೊಳ್ಳುವುದು, ಪುನಃ ಅವರು ಎದ್ದ ನಂತರ ನಾವು ಎಲ್ಲರೂ ಎದ್ದು ನಿಂತುಕೊಳ್ಳುವುದು, ಇದು ಯಾವ ರೀತಿ ಎಂದರೆ, ದೇವಸ್ಥಾನದಲ್ಲಿ ಮಂಗಳಾರತಿ ಬಂದ ತಕ್ಷಣ ಎದ್ದು ನಿಲ್ಲುವುದು , ತೆಂಗಿನ ಕಾಯಿ ಒಡೆಯುವ ಸಂದರ್ಭದಲ್ಲಿ ಪುನಃ ಎದ್ದು ನಿಲ್ಲುವುದು, ಇದೊಂದು ರೀತಿಯ ವ್ಯವಸ್ಥೆಯನ್ನು ನನ್ನದೇ ಆದ ವಿಚಾರದಲ್ಲಿ ಇದನ್ನು ವಿರೋಧಿಸಬೇಕೆಂದು ನಾನು ಶಾಸನ ಸಭೆಗೆ ಬಂದಾಗಿನಿಂದ ಅನೇಕ ರಾಜ್ಯಪಾಲರ ಭಾಷಣವನ್ನು ವಿರೋಧಿಸಿದ್ದೇನೆ, ಪ್ರತಿಭಟಿಸಿದ್ದೇನೆ. ಇತ್ತೀಚಿನ ದಿನಗಳಲ್ಲಿ ರಾಜ್ಯಪಾಲರ ಭಾಷಣಕ್ಕೆ ಪ್ರತಿ ಭಾಷಣವನ್ನು ಕೂಡ ಮಾಡುತ್ತಿದ್ದೇನೆ. ಕಳೆದ ಸಲ ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ಜಾಗಟೆ ಹೊಡೆದಿದ್ದೇನೆ, ಈ ಸಾರಿ ತಾಳ ಹೊಡೆದಿದ್ದೇನೆ , ಅಂದರೆ ಎರಡು- ರಾಜ್ಯಪಾಲರ ಪರ ವೈಯಕ್ತಿಕ ನಡೆ-ನುಡಿಗಳ ಬಗ್ಗೆ ನನ್ನ ವಿರೋಧವಿಲ್ಲ. ಅಥವಾ ಅವರು ಈ ಸದನಕ್ಕೆ ಬಂದರು ಎಂದು ವಿರೋಧವಲ್ಲ. ಯಾವ ಸರ್ಕಾರ ಭಾಷಣವನ್ನು ಪ್ರತಿ ಹೆಜ್ಜೆ ಹೆಜ್ಜೆಗೂ ಇದು ನನ್ನ ಸರ್ಕಾರ ನನ್ನ ಸರ್ಕಾರ ಎಂದು ಮಾತನಾಡಿ, ಈ ಸರ್ಕಾರ ಮಾಡಿರತಕ್ಕಂಥ ಯಾವುದೇ ಅಕ್ರಮಗಳನ್ನು, ಅನ್ಯಾಯಗಳನ್ನು, ದುರಂತಗಳನ್ನು, ಹೇಳದೇ, ನೇರವಾಗಿ ಭಾಷಣ ಮಾಡತಕ್ಕಂಥ ವಿಧಾನವನ್ನು ವಿರೋಧಿಸತಕ್ಕಂಥದ್ದು ನನ್ನ ಹೊಸ ವಿಧಾನ. ಅಷ್ಟೇ ಹೊರತು, ರಾಜ್ಯಪಾಲರನ್ನು ವಾಟಾಳ್‌ರವರು ವಿರೋಧ ಮಾಡಿಬಿಟ್ಟರು, ಎಂದು ಹೇಳುತ್ತಾರೆ, ಆದರೆ ನನ್ನ ಉದ್ದೇಶ ಅದು ಅಲ್ಲ.

(ಸಭಾಧ್ಯಕ್ಷರ ಪೀಠವನ್ನು (ಶ್ರೀಮತಿ ಡಿ.ಜಿ. ಹೇಮಾವತಿ) ಅವರು ಅಲಂಕರಿಸಿದರು)

ಈ ರಾಜ್ಯಪಾಲರ ಬಗ್ಗೆ ನನಗೆ ಇವತ್ತಿಗೂ ಅಪಾರವಾದ ಗೌರವ ಇದೆ. ಮಾನ್ಯ ರಾಜ್ಯಪಾಲರು ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದ ಹಿನ್ನೆಲೆಯಲ್ಲಿ ಬಂದಿರತಕ್ಕಂಥ ಒಬ್ಬ ಪವಿತ್ರವಾದ ರಾಜ್ಯಪಾಲರು. ಆದ್ದರಿಂದ, ಇವರ ಮೇಲೆ ನನ್ನ ತಕರಾರು ಏನೂ ಇಲ್ಲ. ಮಾನ್ಯ ರಾಜ್ಯ ಪಾಲರು ನನ್ನ ಭಾಷಣಕ್ಕೆ ಅವರು ತಮ್ಮ ಭಾಷಣವನ್ನು ಮೊಟಕು ಮಾಡಿ ಹೋದದ್ದನ್ನು ನಾನು ಒಪ್ಪುವುದಿಲ್ಲ. ನಾವು ಸದಸ್ಯರು ಸದನದಲ್ಲಿ ಪ್ರತಿಭಟನೆ ಮಾಡುತ್ತೇವೆ , ಕಪ್ಪು ಬಾವುಟ ಪ್ರದರ್ಶಿಸುತ್ತೇವೆ, ನಾವು ಇಷ್ಟೆಲ್ಲಾ

ಮಾಡಿದರೂ, ಮಾನ್ಯ ರಾಜ್ಯಪಾಲರು ಇದನ್ನೆಲ್ಲಾ ಕಡೆಗಣಿಸಿ ತಮ್ಮ ಭಾಷಣವನ್ನು ಓದಬೇಕೇ ಹೊರತು, ಮೊದಲನೇ ನಾಲ್ಕು ಸಾಲುಗಳನ್ನು ಹೇಳಿ, ಕೊನೆಯಲ್ಲಿರುವ ಎರಡು ಸಾಲುಗಳನ್ನು ಓದತಕ್ಕಂಥದ್ದು ಜಂಟಿ ಅಧಿವೇಶನಕ್ಕೆ ಅದು ಅಗೌರವ ....

ಶ್ರೀ ಮತಿ ಬಿ.ಟಿ.ಲಲಿತಾ ನಾಯಕ್ : ಮಾನ್ಯ ಛೇರ್ಮನ್‌ರವರೇ ನನ್ನ ಭಾಷಣದಿಂದ ಅವರು ಹೋಗಿಲ್ಲವೆಂದು ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು ಬಹಳ ಅನುಭವಿಗಳು ಹಾಗೂ ಹಿರಿಯರು, ನೀವು ಕಪ್ಪು ಬಾವುಟ ಪ್ರದರ್ಶನ ಮಾಡಿದರೆ, ಬೇರೆ ಇನ್ನೇನೋ ಮಾಡಿದರೆ, ಮಾನ್ಯ ರಾಜ್ಯಪಾಲರಿಗೆ ಹೇಳುವುದಕ್ಕಾಗುತ್ತದೆ. ಆದರೆ ಅಲ್ಲಿಗೆ ಬಂದು ತಾಳ-ತಂಬೂರಿ ತಂದು ಭಾರಿಸಿದರೆ ಅದು ಇತರರಿಗೆ ಕೇಳಿಸುತ್ತಿದೆಯೇ? ಹಿರಿಯರೊಬ್ಬರು ''ತರವಲ್ಲಾ ತಗೀ ನಿನ್ನ ತಂಬೂರಿ ಬರೀದೇ ಬಾರಿಸದಿರು ತಂಬೋರಿ '' ಎಂದು ಷರೀಫ್ ಸಾಹೇಬರು ಹೇಳಿದ್ದಾರೆ. ಯಾವಾಗಲೂ ಏನನ್ನಾದರೂ ಮಾತನಾಡಿದರೆ ಆ ಮಾತಿಗೆ ಅರ್ಥವಿರಬೇಕು. ಕೇವಲ ಒಡಕು ಗಡಿಗೆಯಲ್ಲಿ ಹಾಕಿ ಏನಾದರೂ ಸಪ್ಪಳ ಮಾಡಿದ ರೀತಿಯಲ್ಲಿಅವರ ಭಾಷಣವನ್ನು ಕೇಳಿಸಿದರೆ ಅದು ನ್ಯಾಯನಾ? ಅದಕ್ಕೋಸ್ಕರವಾಗಿಯೇ ಮಾನ್ಯ ರಾಜ್ಯಪಾಲರು ತಮ್ಮ ಭಾಷಣವನ್ನು ನಿಲ್ಲಿಸಿದ್ದಾರೆ. ತಾವೇ ಮಾನ್ಯ ರಾಜ್ಯಪಾಲರ ಭಾಷಣವನ್ನು ಮೊಟಕುಗೊಳಿಸಿದಿರಿ, ಇದಕ್ಕೆ ತಾವೇ ಹೊಣೆ ಎಂದು ನಾನಾದರೂ ಹೇಳಬಯಸುತ್ತೇನೆ.

1.00 ಪಿ.ಎಂ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಸೋರುತಿಹುದು ಮನೆಯ ಮಾಳಿಗೆ ಎಂದುಶ್ರೀ ಷರೀಫ್ ಸಾಹೇಬರು ಹೇಳಿದ್ದಾರೆ. ನಿಮ್ಮ ಹಣೆಬರಹ ಕೂಡ ಅದೇ ರೀತಿಯಾಗಿದೆ. ಅದರ ಬಗ್ಗೆ ತಾವು ಏನೂ ಹೇಳಬೇಕಾಗಿಲ್ಲ. ಅವರು ತರಾತುರಿಯಲ್ಲಿ ಏಕೆ ಓದಬೇಕಾಗಿತ್ತು.

ಕರ್ನಾಟದ ವಿಧಾನಸಭೆಯಲ್ಲಿ ಒಂದೇ ಅಲ್ಲ. ತಮಿಳುನಾಡು ಶಾಸನ ಸಭೆಯಲ್ಲಿ ಏನು ನಡೆಯಿತೆಂಬುದು ತಮಗೆ ಗೊತ್ತಿದೆ, ಒಬ್ಬ ಮಹಿಳೆ ಶಾಸನ ಸಭೆಗೆ ಬಂದಂಥ ಸಂದರ್ಭದಲ್ಲಿ ಅಲ್ಲಿ ನಡೆದಂಥ ಒಂದು ವಿಚಾರವನ್ನು ಹೇಳುತ್ತೇನೆ. ಕುಮಾರಿ ಜಯಲಲಿತಾರವರ ಮೇಲೆ ಆ ಕಾಲದಲ್ಲಿ ನಡೆದಂಥ ಒಂದು ದುರಂತ ಕಥೆಯನ್ನು ನೋಡಿದಾಗ ಇಡೀ ರಾಷ್ಟ್ರದ ಮಹಿಳಾ ಕುಲಕ್ಕೆ ಅಪಮಾನವಾಗುವಂಥ ಘಟನೆ ಆಗಿತ್ತು. ಉತ್ತರ ಪ್ರದೇಶದ ಶಾಸನ ಸಭೆಯಲ್ಲಿ ಕುರ್ಚಿಗಳನ್ನು ಎತ್ತಿ ಹೊಡೆದಾಡಿ ಶಾಸಕರ ಬುರುಡೆ ಒಡೆದು ರಕ್ತ ಬಂದಿತು. ಅದನ್ನು ನಾವೆಲ್ಲರೂ ನೋಡಿದ್ದೇವೆ. ಬಹಳ ಹಿಂದೆ ಪಶ್ಚಿಮ-ಬಂಗಾಳದಲ್ಲಿ ಶ್ರೀ ಧರ್ಮಾವೀರರವರು ರಾಜ್ಯಪಾಲರಾಗಿದ್ದಾಗ ಅವರು ಬರುವುದಕ್ಕೆ ಅಡ್ಡಹಾಕಿದ ಘಟನೆಯನ್ನು ನೋಡಿದ್ದೇವೆ. ನಾವು ಅಲ್ಲಿಯವರೆಗೆ ಹೋಗಿಲ್ಲ. ನಾನು ತಾಳ ಮತ್ತು ಜಾಗಟೆಯಿಂದ ಮಾನ್ಯ ರಾಜ್ಯಪಾಲರಿಗೆ ಅಗೌರವ ತೋರಿಸಬೇಕೆಂದು ಆ ರೀತಿ ಮಾಡಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಆ ರೀತಿ ಮಾಡುವುದು ಸಂಪ್ರದಾಯವೇನೋ ಎನ್ನುವ ಹಾಗಾಗಿ ಬಿಟ್ಟಿದೆ. ಹಿಂದೆ ಕುಳಿತಿರುವವರಿಗೆ ಸ್ವಲ್ಪ ಬೇಸರವಾಗುತ್ತದೆ. ಅದು ತಮ್ಮ ಗಮನದಲ್ಲಿರಲಿ.

ಶ್ರೀ ವಾಟಾಳ್ ನಾಗರಾಜ್: ಆದ್ದರಿಂದ ನಾನು ಮತ್ತೆ ತಮಗೆ ಹೇಳುತ್ತೇನೆ. ಮತ್ತೆ ರಾಜ್ಯಪಾಲರು ನಮ್ಮ ರಾಜ್ಯದಲ್ಲಿ 5 ವರ್ಷಗಳ ಕಾಲ ರಾಜ್ಯಪಾಲರಾಗಿ ಮುಂದುವರೆಯಲಿ. ನನ್ನದು ಏನೂ ಅದರ

ಬಗ್ಗೆ ತಕರಾರು ಇಲ್ಲ. ಈ ಸದನದ ಮೂಲಕ ನಾವು ಎಲ್ಲಾ ಪಕ್ಷದವರು ಸೇರಿ ಪ್ರಧಾನಿಯವರನ್ನು, ರಾಷ್ಟ್ರಪತಿಯವರನ್ನು ಈ ಕುರಿತು ಒತ್ತಾಯಪಡಿಸೋಣ.ಆದರೆ ನನಗೆ ಅವರನ್ನು ವೈಯಕ್ತಿಕವಾಗಿ ಅಗೌರವ ಮಾಡಬೇಕೆಂದು ಇಲ್ಲ. ಅವರ ಮನಸ್ಸಿಗೆ ನೋವು ಮಾಡಬೇಕೆಂದು ಇಲ್ಲ, ಆ ರೀತಿ ಅವರ ಮನಸ್ಸಿಗೆ ನನ್ನಿಂದ ನೋವಾಗಿದ್ದರೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ. ಅವರಿಗ ನೋವು ಮಾಡಬೇಕೆನ್ನುವ ಉದ್ದೇಶ ನನಗೆ ಇಲ್ಲ. ಮುಂದಿನ ರಾಜ್ಯಪಾಲರು ಬಂದರೂ ಕೂಡ ನಾನು ಯಾವುದೇ ರೀತಿಯ ಬದಲಾವಣೆ ಮಾಡುವುದಿಲ್ಲ. ನಾನು ಚಳುವಳಿ ಮಾಡಿಯೇ ಮಾಡುತ್ತೇನೆ. ನಾನು ಪ್ರತಿಭಟನೆ ಮಾಡಿಯೇ ಮಾಡುತ್ತೇನೆ. ಮುಂದಿನ ಶಾಸನ ಸಭೆಗೂ ನಾವು ಬರುತ್ತೇವೆ. ಪ್ರತಿಭಟನೆಯನ್ನು ಮಾಡುವುದು ನನ್ನ ಆಜನ್ಮ ಸಿದ್ಧ ಹಕ್ಕು. ಅದನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ನಾನು ಇದರ ಬಗ್ಗೆ ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಶ್ರೀ ವಾಟಾಳ್‌ರವರು ನಮ್ಮ ಜೊತೆಯಲ್ಲಿ ಪ್ರವಾಸಕ್ಕೆ ಬಂದಿದ್ದು, ಅವರ ಮನೆಯವರು ಹೇಳಿದ್ದನ್ನು ಕೇಳಿಕೊಂಡು ಅವರ ಎಲ್ಲಾ ತತ್ವಗಳನ್ನು ಬದಲಾವಣೆ ಮಾಡಿಕೊಂಡವರು ಇವರು. ನನ್ನನ್ನು ಯಾರು ಬದಲಾವಣೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ .

ಶ್ರೀ ವಾಟಾಳ್ ನಾಗರಾಜ್: ಶ್ರೀ ಖರ್ಗೆಯವರ ವಿಷಯವನ್ನು ನಾನು ಇಲ್ಲಿ ಹೇಳಬೇಕಾಗುತ್ತದೆ. ಅದನ್ನು ಹೇಳುವುದು ಬೇಡ. ಅವರು ಕೂಡ ಪ್ರವಾಸಕ್ಕೆ ಬಂದಿದ್ದರು ಅವರ ಜೊತೆಯಲ್ಲಿ ಅವರ ಪತ್ನಿಯವರೂ ಕೂಡ ಬಂದಿದ್ದರು. ಶ್ರೀಮತಿ ಪ್ರಮೀಳಾರವರೇ, ದಯವಿಟ್ಟು ಇಲ್ಲಿ ಬಾಯಿಬಿಡಬೇಡಿ.

ಶ್ರೀ ಎನ್.ರಾಜಣ್ಣ: ಮಾನ್ಯ ಛೇರಮನ್‌ರೇ ಜಾಗಟೆಯನ್ನು ಎಲ್ಲಿ ಬಾರಿಸಬೇಕೋ ಅಲ್ಲಿ

ಬಾರಿಸಬೇಕು. ವರ್ಷಕ್ಕೆ ಒಂದು ಸಲ ರಾಜ್ಯಪಾಲರು ಭಾಷಣವನ್ನು ಮಾಡುವ ಸಂದರ್ಭದಲ್ಲಿ ಗೌರವವನ್ನು ಸೂಚಿಸುವುದನ್ನು ಬಿಟ್ಟು he is the Head of the state for 5 crore people. 5 ಕೋಟಿ ಜನಸಂಖ್ಯೆಗೆ ಅವಮಾನ ಮಾಡಿದಂತಾಯಿತು. ಜಾಗಟೆ ಹೊಡೆಯುವುದು ಭಿಕ್ಷೆ ಬೇಡುವ ಜಾಗದಲ್ಲಿ ಮತ್ತು ಸ್ಮಶಾನದಲ್ಲಿ ಅಲ್ಲಾ ಸ್ವಾಮಿ. ವರ್ಷಕ್ಕೆ ಒಂದು ಸಲವಾದರೂ ಗೌರವವನ್ನು ಕಾಪಾಡಿ. why we have to call " His Excellency Your Honour Mr. Khurshid Alam Khan" ತಾವು ವರ್ಷವೆಲ್ಲಾ ಹೋರಾಟವನ್ನು ಮಾಡುತ್ತೀರಿ, ಬಹಳ ಸಂತೋಷ. ಕನ್ನಡದ ಬಗ್ಗೆ ಪ್ರೀತಿ ವಿಶ್ವಾಸ ಇರುವುದು ಸರಿ. ನಾನು ಎಲ್ಲರ ಪರವಾಗಿ ತಮ್ಮನ್ನು ಕೇಳಿ ಕೊಳ್ಳುವುದೇನೆಂದರೆ, ರಾಜ್ಯಪಾಲರು ಭಾಷಣ ಮಾಡುವಾಗ 10 ನಿಮಿಷಗಳ ಕಾಲವಾದರೂ ಸುಮ್ಮನಿದ್ದು ಅವರಿಗೆ ಗೌರವವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್‌ನಾಗರಾಜ್: ಇವರೆಲ್ಲರೂ ನಾನು ಆ ರೀತಿ ಮಾಡಿದ್ದು ಅಗೌರವ ಎಂದು ತಿಳಿದುಕೊಂಡಿದ್ದರೆ ನಾನು ಏನು ಹೇಳುವುದಕ್ಕಾಗುವುದಿಲ್ಲ. ಅದು ಅಗೌರವ ಎಂದು ಹೇಗಾಗುತ್ತದೆ? 5 ಕೋಟಿ ಜನರಿಗೆ ಅವಮಾನವಾಗಿದೆ ಎಂದು ಹೇಳುತ್ತೀರಿ ಏನು ಅವಮಾನವಾಗಿದೆ. ಅದನ್ನು 5 ಕೋಟಿ ಜನರ ಪರವಾಗಿಯೇ ಮಾಡಿರುವುದು. ಇದು ರಾಜ್ಯಪಾಲರ ವಿರುದ್ಧವಲ್ಲ, ರಾಜ್ಯ ಸರ್ಕಾರದ ಅನ್ಯಾಯವನ್ನು ಪ್ರತಿಭಟಿಸುವುದಕ್ಕೆ ಜಂಟಿ ಸದನ ಒಂದು ಅವಕಾಶ ಅಷ್ಟೆ. ಅಂತಹ ಅವಕಾಶವನ್ನು ಕಳೆದುಕೊಳ್ಳುವಂಥದ್ದನ್ನು ಅಂತಹ ಅವಕಾಶದಲ್ಲಿ ಮಾಡಿದ್ದೇವೆ ಅದರ ಬಗ್ಗೆ ಯಾರು ಏನೂ ತಕರಾರು

ಮಾಡಬೇಕಾಗಿಲ್ಲ. ಬಹಳ ಜನರು ರಾಜ್ಯಪಾಲರ ಬಗ್ಗೆ ವೈಯಕ್ತಿಕವಾಗಿ ಆ ರೀತಿ ಮಾಡಲಾಗಿದೆ ಎಂದು ತಿಳಿದುಕೊಂಡಿದ್ದರೆ ಅದು ತಪ್ಪು. ನಾನು ರಾಜ್ಯಪಾಲರಿಗೆ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ರಾಜ್ಯಪಾಲರು ಈ ರಾಜ್ಯದಲ್ಲಿ ಅಧಿಕಾರ ವಹಿಸಿಕೊಂಡು 10 ವರ್ಷಗಳಾಗಿವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕಳೆದ ಎರಡು ವರ್ಷಗಳಿಂದ ರಾಜ್ಯಪಾಲರು ತಮ್ಮ ಭಾಷಣವನ್ನು ಸಂಪೂರ್ಣವಾಗಿ ಓದಲಿಕ್ಕೆ ಆಗಿಲ್ಲ. ಇದು ನಮಗೆ ಗೌರವ ತರುವುದಿಲ್ಲ ಎಂಬುದು ನನ್ನ ಭಾವನೆ. ರಾಜ್ಯಪಾಲರು ಮೊದಲನೇ ಪುಟ ಹಾಗೂ ಕೊನೆಯ ಪುಟವನ್ನು ಓದಿ ಮುಗಿಸಿ ಹೋಗುವಂಥ ಸ್ಥಿತಿ ನಿರ್ಮಾಣವಾಗುವುದು ಅಷ್ಟೊಂದು ಒಳ್ಳೆಯದಲ್ಲ. ಇನ್ನೊಂದು ದಿವಸವನ್ನು ನಿಗದಿ ಮಾಡಿಕೊಳ್ಳಿ ನಾವು ನಿಮ್ಮೊಡನೆ ಬರೋಣ.

ಶ್ರೀ ವಾಟಾಳ್ ನಾಗರಾಜ್: ನಾವು ಇನ್ನೊಂದು ದಿವಸ ಕರೆದಾಗ ಬರುವಿರಂತೆ

ಛೇರಮನ್ : ರಾಜ್ಯಪಾಲರ ಬಗ್ಗೆ ಮಾತನಾಡುವುದು ಬೇಡ, ನೀವು ಬೇರೆ ಏನಾದರೂ ಪಾಯಿಂಟ್ಸ್ ಹೇಳುವುದಿದ್ದರೆ ಹೇಳಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ರಾಜ್ಯಪಾಲರು ಕಳೆದ 10 ವರ್ಷಗಳಿಂದ ಈ ರಾಜ್ಯದಲ್ಲಿ ರಾಜ್ಯಪಾಲರಾಗಿದ್ದಾರೆ. ನಾನು ಅವರಿಗೆ ಮನವಿ ಮಾಡುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು): ಪಾಯಿಂಟ್ ಆಫ್ ಆರ್ಡರ್ ರೂಲ್ ನಂ : 327ರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ . ರಾಜ್ಯಪಾಲರ ಬಗ್ಗೆ ರಾಷ್ಟ್ರಾಧ್ಯಕ್ಷರು ಅಥವಾ ರಾಜ್ಯಪಾಲರು ಕುರಿತು ಚರ್ಚೆ ಮಾಡುವುದು ಅಥವಾ ಆರೋಪಿಸುವಂಥದ್ದು ಪರಿಣಾಮಕಾರಿಯಾದಂಥ ಹೆಸರನ್ನು ಬಳಸತಕ್ಕಂಥದ್ದಲ್ಲ. ವಾಟಾಳ್ ನಾಗರಾಜ್‌ರವರೇ ನಾನು ಇದರ ಬಗ್ಗೆ 1995ನೇ ಇಸಿವಿಯಲ್ಲಿ ನಿಮ್ಮ ಮೇಲೆಯೇನೋಟೀಸ್ ಕೊಟ್ಟು ಚರ್ಚೆ ಮಾಡಿದ್ದೆ, ನಾವು ಮತ್ತು ಅವರು ಒಳ್ಳೆಯ ಸ್ನೇಹಿತರು ಅದು ಬೇರೆಯ ವಿಷಯ. ಈಗ ಅವರು, ರಾಜ್ಯಪಾಲರು ಬಂದಾಗ ತಾವು ಮಾಡಿದ್ದು ಜನರ ಪರವಾಗಿ ಎಂದು ಹೇಳಿದರು. ಅದಕ್ಕೆ ರಾಜಣ್ಣವರು ಹೇಳಿದರು. Consitution Article 377 is clear about right of the Address by the Governor. ಚರ್ಚೆ ಮಾಡುವ ಸಂದರ್ಭದಲ್ಲಿ ಯಾವುದೇ ಪ್ರತಿಭಟನೆ ಮಾಡಿ ಅಥವಾ ಆರೋಪ ಮಾಡಿ, ಈಗ ನಿಮ್ಮ ಚಾಯ್ಸ್ . ಆದರೆ ನಾವು ಇಲ್ಲಿಗೆ ಕರೆಸಿದ್ದಾಗ ಅವರು ತಮ್ಮಅಧಿಕಾರವನ್ನು ಅವರು ಉಪಯೋಗಿಸಿಕೊಂಡು ಬಂದು ಇಲ್ಲಿ ಭಾಷಣ ಮಾಡಿದಾಗ ಅ ಗೌರವ ಮಾಡುವುದು ಸರಿಯಲ್ಲ ಅದನ್ನು ಜನರೂ ಕೂಡ ಒಪ್ಪುವುದಿಲ್ಲ. ಹಾಗೆಯೇ ಈಗ ನಾವು ಇಲ್ಲಿ ಚರ್ಚಿಸುವ ಸಂದರ್ಭದಲ್ಲಿ ಅವರ ಬಗ್ಗೆ ಚರ್ಚಿಸುವುದು ಸೂಕ್ತವಲ್ಲ. ತಾವು ಇದರ ಬಗ್ಗೆ ರೂಲಿಂಗ್ ಕೊಡಬೇಕು. ಚರ್ಚೆ ಮಾಡಕೂಡದೆಂದು ತಾವು ಅವರಿಗೆ ಹೇಳಬೇಕು.

ಛೇರಮನ್: ನಾನು ಈ ಬಗ್ಗೆ ರೂಲಿಂಗ್ ಕೊಡುತ್ತೇನೆ.

ಶ್ರೀ ಸಿ.ಎಂ.ಲಿಂಗಪ್ಪ: ನಮಗೆ ಅರ್ಥವಾಗಿರುವ ಪ್ರಕಾರ ಶ್ರೀ ವಾಟಾಳ್‌ರವರಿಗೆ ಸಭೆಯ ಯಾವುದೇ ನಿಯಮಗಳು ಅನ್ವಯವಾಗುವುದಿಲ್ಲ. ಈ ಸಭೆಯ ಯಾವುದೇ ನಿಯಮವನ್ನು ಅವರ ಪಾಲನೆ ಮಾಡುವಂಥ ಬದ್ಧತೆ ಅವರಿಗೆ ಇರುವುದಿಲ್ಲ. ಅವರದೇ ನಿಯಮ ಅವರದೇ ವರ್ತನೆ, ಅವರದೇ ಒಂದು ಕಾನೂನು.

SHRI.N. RAJANNA: Point of order, Rule No.27.

ಶ್ರೀ ವಾಟಾಳ್ ನಾಗರಾಜ್: ಇದನ್ನು ತಾವು ಒಪ್ಪುತ್ತೀರಾ ಅತ್ಯಂತ ಅಪಾಯಕಾರಿಯಾಗಿ ನೀವು ಮಾತನಾಡತಕ್ಕಂಥದ್ದು, ಮಾತನಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ನನ್ನ ಸ್ನೇಹಿತರು ನೀವು. ನಮ್ಮದೇ ಕಾನೂನು ಎಂದು ಹೇಳುತ್ತೀರಲ್ಲಾ.

ಶ್ರೀ ಸಿ.ಎಂ. ಲಿಂಗಪ್ಪ: ವಾಟಾಳ್‌ರವರೇ ವಿಶ್ವಾಸ ಹಾಗೂ ಸ್ನೇಹಿತರು ಅದು ಬೇರೆ. ತಾವು ಈ ಸದನದ ಹಿರಿಯ ಸದಸ್ಯರು ಹಾಗೂ ಜವಾಬ್ದಾರಿಯುತವಾಗಿದ್ದವರು. ಅವಕಾಶವನ್ನು ತಪ್ಪಿಸಿ ಹಾಗೂ ನಮ್ಮಂಥವರ ಮನಸ್ಸನ್ನು ನೋಯಿಸಿ ಇಲ್ಲಿ ವರ್ತನೆ ಮಾಡುವಂಥದ್ದು, ಪ್ರಶ್ನೆ ಮಾಡುವಂಥದ್ದು, ಬಹುಶಃ ನೀವು ಏನೇ ಸಮರ್ಥನೆ ಮಾಡಿಕೊಳ್ಳಿ ಇದು ಅನುಚಿತವಾದುದು. ಈ ಸಭೆಗೆ ಗೌರವ ತರುವಂಥದಲ್ಲ.

ಶ್ರೀ ವಾಟಾಳ್‌ನಾಗರಾಜ್: ಆ ರೀತಿ ನಾನೇನಾದರೂ ಈ ಸಭೆಯ ನಡವಳಿಕೆಗಳನ್ನು ಗಾಳಿಗೆ ತೂರಿ ಏನಾದರೂ ನಾನು ಮಾಡಿದ್ದರೆ ....

ಛೇರಮನ್: ನಾಗೇಗೌಡರು ತಮ್ಮ ಪಾಯಿಂಟ್ ಅಫ್ ಆರ್ಡರ್‌ನಲ್ಲಿ ಸರಿಯಾಗಿ ಹೇಳಿದ್ದಾರೆ. ಆದುದರಿಂದ ದಯವಿಟ್ಟು ಗೌರ್ನರ್ ಬಗ್ಗೆ ಮಾತನಾಡಬೇಡಿ.

SRI N. RAJANNA: Point of order, Madam, Rule No.27. "Observznce of the order during the Governor's Address. When the House of the Legislature are assembled together under Article 175 or 176 of when the memebers of the Assembly alone are assembled under Article 175 of the constitution, no member shall obstruct or interrupt ......

ಶ್ರೀಎಸ್. ಸುರೇಶ್‌ಕುಮಾರ್: ಶ್ರೀ ರಾಜಣ್ಣನವರು ಮಾತನಾಡುತ್ತಿರುವುದು ಹೇಗಿದೆ ಎಂದರೆ, ಸನ್ಮಾನ್ಯ ರಾಜ್ಯಪಾಲರು ಭಾಷಣ ಮಾಡುತ್ತಿರುವಾಗ ವಾಟಾಳ್‌ರವರು ಮಾತನಾಡುತ್ತಿದ್ದರು. ಹಾಗೇ ಇವರು ಮಧ್ಯೆ ಮಾತನಾಡುತ್ತಿದ್ದಾರೆ. ಯಾರು ಏನು ಹೇಳುತ್ತಿದ್ದಾರೆ ಎಂಬುದೇ ಗೊತ್ತಾಗುತ್ತಿಲ್ಲ.

ಶ್ರೀ ಎನ್.ರಾಜಣ್ಣ : ರೂಲ್ಸ್ ಇರುವುದೇ ಇಂಗ್ಲೀಷನಲ್ಲಿ.

ಶ್ರೀ ಅರಗ ಜ್ಞಾನೇಂದ್ರ : ಅವರು ನೀವು ಯಾವ ಭಾಷೆಯಲ್ಲಿ ಓದುತ್ತಿದ್ದೀರಿ ಎಂದು ಹೇಳುತ್ತಿಲ್ಲ. ಒಟ್ಟಿಗೆ ಇಬ್ಬರಿಬ್ಬರು ಮಾತನಾಡುವಾಗ ಏನೂ ಕೇಳಿಸುವುದಿಲ್ಲ ಎಂದು ಹೇಳಿದರಷ್ಟೆ.

ಶ್ರೀ ಎನ್. ರಾಜಣ್ಣ: ಆದುದರಿಂದ ದಯವಿಟ್ಟು ರೂಲ್ ನಂ:27ನ್ನು ನೋಡಬೇಕು. ಅದರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. Obstruct or interr put the address either before or after the address during its duration with any speech... "under this Rule I request the Hon'ble Speaker to take action under Rule 324.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಛೇರ್ಮರ್ನರವರೆ, ನನಗೆ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸಿ ಮಾತನಾಡುವುದೆಂದರೆ,ಇದು ರಾಜ್ಯಪಾಲರ ಭಾಷಣಕ್ಕೆ ವಂದನೆ ಎಂದು ಅರ್ಥ. ಅವರ ಹೆಸರನ್ನೂ ಕೂಡ ಇಲ್ಲಿ ರಾಜ್ಯಪಾಲರೆಂದು ಹೇಳಬಾರದೇ? ಹಾಗಾದರೆ ನಾನು ಏನು ಹೇಳಬೇಕು. ನೀವೇ ಹೇಳಿ.

ಶ್ರೀ ಕೆ.ಎನ್.ನಾಗೇಗೌಡ: ಅಧ್ಯಕ್ಷರೇ Article 175 of the Constitution. Right of the Governor to addresss either Legislative Assembly or both or send a message to the House or the Houses." ಮಾನ್ಯ ಮೊಯಿಲಿಯವರು ಇದರ ಬಗ್ಗೆ ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ, ಅವರಿಗೆ ಗೊತ್ತಿದೆ ಎಂದು ನಾನು ಅಂದುಕೊಂಡಿದ್ದೇನೆ. ದಯಮಾಡಿ ಇದರ ಬಗ್ಗೆ ಕೇಳಿ because it is a constitutional matter, he might have known better.

ಶ್ರೀಮತಿ ಪ್ರಮೀಳಾ ನೇಸರ್ಗಿ : ತಾವು ಇದರ ಬಗ್ಗೆ ಮಿಸ್‌ಲೀಡ್ ಮಾಡಬಾರದು. ನಾವು ರಾಜ್ಯಪಾಲರ ವಂದನೆ ಬಗ್ಗೆ ಇವತ್ತು ಮಾತನಾಡುತ್ತಿರುವುದು. ನೀವು ರಾಜ್ಯಪಾಲರ ಹೆಸರನ್ನು ತೆಗೆಯಬಾರದು ಎಂದರೆ ಹೇಗೆ? ನಾವು ಈ ಪೇಪರ್ ಬಗ್ಗೆ ಮಾತನಾಡುತ್ತಿದ್ದೇವೆಂದು ಹೇಳುವುದಕ್ಕಾಗುತ್ತದೆಯೇ? ನಾವು ರಾಜ್ಯಪಾಲರು ಮಾಡಿದಂಥ ಭಾಷಣದ ಬಗ್ಗೆ ಎಂದು ಹೇಳಲೇಬೇಕಾಗುತ್ತದೆ. ತಾವು ಹೇಳಿದರಲ್ಲಿ ಅರ್ಥವಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಅದರಲ್ಲಿ ಹೆಸರನ್ನು ಪ್ರಸ್ತಾಪ ಮಾಡಬಾರದು ಎಂದು ಏನೂ ಇಲ್ಲ.

ಶ್ರೀ ಕೆ.ಎನ್.ನಾಗೇಗೌಡ : ನಾನು ಮಿಸ್‌ಲೀಡ್ ಮಾಡಲಿಲ್ಲ. ಶ್ರೀಮತಿ ಪ್ರಮೀಳಾರವರು ಒಳ್ಳೆಯ ಲಾಯರ್ ಇದ್ದಾರೆ. ಅವರ ಬಗ್ಗೆ ತಾವು ತಿಳಿದುಕೊಳ್ಳಬೇಕು. ರಾಜ್ಯದಲ್ಲಿ ರಾಜ್ಯಪಾಲರು 10 ವರ್ಷಗಳವರೆಗೆ ಇರಲಿ. ಅವರು ಫ್ರೀಡಂಫೈಟರ್ ಕುಟುಂಬದಿಂದ ಬಂದವರು, ರಾಜ್ಯಪಾಲರು ಮುಂದೆ ಏನು ಮಾಡಬೇಕು ಇದರ ಬಗ್ಗೆ ಖಂಡಿತವಾಗಿ ಸದನದಲ್ಲಿ ನಿಯಮ 327ರ ಪ್ರಕಾರ ಚರ್ಚೆ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ರಾಜ್ಯಪಾಲರ ಭಾಷಣದ ಮೇಲೆ ಸರ್ಕಾರದ ಚಟುವಟಿಕೆಯ ಬಗ್ಗೆ ಚರ್ಚೆಮಾಡುವುದಕ್ಕೆ ಅವಕಾಶವಿರುತ್ತದೆ. A person in the office of the governor, Office of the Governor ನಿಯಮಾವಳಿ ಪ್ರಕಾರ ರಾಜ್ಯಪಾಲರ ಬಗ್ಗೆ ಮಾತನಾಡುವುದಕ್ಕೆ ಅವಕಾಶವಿರುವುದಿಲ್ಲ. You are also a lawyer. ನಾನು ಮಿಸ್‌ಲೀಡ್ ಮಾಡತಕ್ಕಂಥದಲ್ಲ. She should educate Mr.Vatal Nagaraj. ಅವರು ನಮಗೆ ವಿದ್ಯೆ ಹೇಳಬೇಕು.

ಶ್ರೀ ಜೆ.ಸಿ ಮಾಧುಸ್ವಾಮಿ: ರಾಜ್ಯಪಾಲರ ಬಗ್ಗೆ ಅವರು ವೈಯಕ್ತಿಕವಾಗಿ ಟೀಕೆ ಮಾಡಿರುವುದಿಲ್ಲ. He was speaking on the office of the Governor, which is a public office. He never condemned of criticised in person ಗೌರ್ನರ್ ಆಫೀಸ್ ಬಗ್ಗೆ ಮಾತನಾಡಬಾರದೆಂದು ಯಾವ ಕಾನೂನಿನಲ್ಲಿ ಇಲ್ಲ.

ಶ್ರೀ ಕೆ.ಎನ್. ನಾಗೇಗೌಡ: ಮಾನ್ಯ ಕಾಗೋಡುತಿಮ್ಮಪ್ಪನವರೇ, ತಾವು ಕೂಡ 1975ರಿಂದ ಇಲ್ಲಿ ಇದ್ದೀರಿ. ತಾವು ಹೇಳಬೇಕು. ಗೌರ್ನರ್ ಆಫೀಸ್ ಬಗ್ಗೆ ಗೌರ್ನರ್ ಕ್ಯಾರೆಕ್ಟರ್ ಕಾನ್ಸ್‌ಫ್ಟ್ ಬಗ್ಗೆ, Whether

this House has get a right to discuss? If you say yes, I don't object to it, Let him show the Rules. ಎಲ್ಲಿ ನಿಯಾಮಾವಳಿ ಒಳಗಡೆ ಗೌರ್ನರ್ ಬಗ್ಗೆ, ಅವರ ನಡವಳಿಕೆಯ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿದೆಯೆಂದು ಕಾಗೋಡು ತಿಮ್ಮಪ್ಪನವರು ತೋರಿಸಿದರೆ, ಹಾಗೂ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ತೋರಿಸಿದರೆ ಮಾನ್ಯ ವಾಟಾಳ್‌ರವರು ಮಾತನಾಡಲಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ರಾಜ್ಯಪಾಲರು ಇಲ್ಲಿ ಬಂದು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಆ ಕಾರಣದಿಂದ ಅವರನ್ನು ಟೀಕೆ ಟಿಪ್ಪಣಿ ಮಾಡಬಾರದು. ಅವರು ಈ ರಾಜ್ಯದಲ್ಲಿ 10 ವರ್ಷಗಳವರೆಗೆ ಇರಬೇಕೆಂದು ಹೇಳಿದರೆ ಅದು ಟೀಕೆಯಾಗುವುದಿಲ್ಲ.

SRI K.N. NAGE GOWDA: What he has said I will tell you.

ರಾಜ್ಯಪಾಲರು ಸರ್ಕಾರ ಬರೆದುಕೊಟ್ಟಿದ್ದನ್ನು ನೇರವಾಗಿ ಓದಿದ್ದಾರೆಂದು ಹೇಳಿದರು. ನಾನು ಹೇಳಿದೆ ಈ ಸ್ಪೀಚ್‌ನ್ನು ಚೇಂಜ್ ಮಾಡಿಸತಕ್ಕ ಯಾವ ಪ್ಯಾರವನ್ನು ಬೇಕಾದರೂ ಸೇರಿಸತಕ್ಕ ರೈಟ್ಸ್ ರಾಜ್ಯಪಾಲರಿಗೆ ಇದೆ. ಗೌರ್ನರಿಗೆ ಅಡ್ರಸ್ ಮಾಡತಕ್ಕಂತಹ ರೈಟ್ಸ್ ಗೌರ್ನಮೆಂಟ್ ಕೊಟ್ಟಂತಹ ಸ್ಪೀಚ್‌ಗಳನ್ನು ಚೇಂಜ್ ಮಾಡುವುದಕ್ಕೆ ಅಧಿಕಾರವಿದೆ. ಅವರ ಮೇಲೆ Don't make any charge, I said.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳಿದ್ದೆ ಒಂದಾದರೆ, ಮಾನ್ಯ ನಾಗೇಗೌಡರು ಬೇರೆ ದಿಕ್ಕಿಗೆ ಹೋಗುತ್ತಿದ್ದಾರೆ. ನನಗೆ ಅರ್ಥವಾಗುತ್ತಿಲ್ಲ ಏಕೆ? ನಾನು ರಾಜ್ಯಪಾಲರ ಬಗ್ಗೆ ಒಂದು ಅಕ್ಷರವನ್ನು ಕೂಡ ಮಾತನಾಡಲಿಲ್ಲ. ಬೇಕಾದರೆ ತೋರಿಸಿ. ಸದನವನ್ನೇ ಗೊಂದಲದಲ್ಲಿ ಸಿಕ್ಕಿಸಿ, ಆದರೆ ನಾನು ಮಾತ್ರ ಗಂಭೀರವಾಗಿದ್ದೇನೆ. ತಾವು ತಪ್ಪು ದಾರಿಗೆ ಎಳೆಯುತ್ತಿದ್ದೀರಿ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ವಾಟಾಳ್‌ರವರು ರಾಜ್ಯಪಾಲರ ಬಗ್ಗೆ ವೈಯಕ್ತಿಕವಾಗಿ ಮಾತನಾಡಿಲ್ಲ. ಅವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದ್ದಾರೆ .

ಶ್ರೀ ವಾಟಾಳ್ ನಾಗರಾಜ್: ನೋಡಿ ಸ್ವಾಮಿ , ರಾಜ್ಯಪಾಲರಿಗೆ ವಂದನೆ ಎಂದು ಇರುವಾಗ ರಾಜ್ಯಪಾಲರ ಹೆಸರು ಎತ್ತಬೇಡಿ ಎಂದರೆ ಹೇಗೆ?

(ಗೊಂದಲ)

(ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ರೆಡ್ಡಿ ದೇಶಮುಖ್ ಮದನ)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಹೆಚ್. ಡಿ. ಬಸವರಾಜ್: ಶ್ರೀ ಶಿವಪ್ಪನವರೇ, ಗೌರ್ನ್‌ರ್ ಹೆಸರನ್ನು ಹೇಳಿದರು ಶ್ರೀ ರಾಜಣ್ಣನವರು. ಮಾನ್ಯ ವಾಟಾಳ್‌ನಾಗರಾಜ್‌ರವರು ಗೌರ್ನರ್, ಗೌರ್ನರ್ ಎಂದು ಮಾತ್ರ ಹೇಳುತ್ತಿದ್ದಾರೆ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ವಾಟಾಳ್‌ರವರೆ , ತಾವು ಬೇಜಾರು ಮಾಡಿಕೊಳ್ಳಬೇಡಿ. ದಯಮಾಡಿ ಕೇಳಿ. ರಾಷ್ಟ್ರಾಧ್ಯಕ್ಷರ ಅಥವಾ ರಾಜ್ಯಪಾಲರ ಅಥವಾ ನ್ಯಾಯಾಲಯದ ನಡವಳಿಕೆಗಳನ್ನು ಕುರಿತು ಚರ್ಚೆಯಲ್ಲಿ ಪರಿಣಾಮಕಾರಿಯಾಗಿ ಮಾಡುವ ಉದ್ದೇಶಕ್ಕಾಗಿ ರಾಜ್ಯಪಾಲರ ಅಥವಾ

ರಾಷ್ಟ್ರಾಧ್ಯಕ್ಷರ ಹೆಸರನ್ನು ಬಳಸತಕ್ಕದ್ದಲ್ಲ. ಇದರಲ್ಲಿ ಕ್ಲಿಯರ್ ಆಗಿ ಇದೆ. ಮಾನ್ಯ ಕರ್ಕಿಯವರೇ, ನೀವು ಏನೂ ಅರ್ಥ ಮಾಡಿಕೊಂಡಿದ್ದಿರಲ್ಲಾ.

Dr. M.P. KARKI : " For the purupose of influencing the Debate."

ಅವರು ಇನ್‌ಫ್ಲೂಯೆನ್ಸ್ ಮಾಡಿ ಉಪಯೋಗ ಮಾಡಿಲ್ಲ. ರಾಜ್ಯಪಾಲರ ಬಗ್ಗೆ ಅವರು ಹೊಗಳಿದ್ದಾರೆ. ರಾಜ್ಯಪಾಲರು ಇರಬೇಕೆಂದು ಹೇಳಿದ್ದಾರೆ. ಅವರ ಬಗ್ಗೆ ಹೊಗಳಿಕೆಯ ಮಾತನ್ನು ಹೇಳಿದ್ದಾರೆ. "utter, reasonabl, saditous or defarmatory words" ರಾಜ್ಯಪಾಲರ ಹೆಸರನ್ನು ತೆಗೆದುಕೊಳ್ಳಬಾರದೆಂದು ಹೇಳತಕ್ಕಂಥದ್ದು ಸರಿಯಲ್ಲ. ರಾಜ್ಯಪಾಲರು ಒಳ್ಳೆಯ ಮಾಡಿದ್ದಾರೆಂದು ಹೇಳುವುದು ತಪ್ಪೇನೂ ಅಲ್ಲ. ಅವರ ಹೆಸರನ್ನು ಹೇಳಿ; ಡಿಬೇಟಿನ ದಿಕ್ಕನ್ನು ತಪ್ಪಿಸುವ ಪ್ರಯತ್ನ ಅವರು ಅಂಥದ್ದೇನೂ ಮಾಡಲಿಲ್ಲ.

ಶ್ರೀ ಮತಿ ಪ್ರಮೀಳಾ ನೇಸರ್ಗಿ : ಡಿಬೇಟ್ ಆನ್ ವಾಟ್?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ನಾಗೇಗೌಡರು ಹೇಳುವುದು ಏನಾಗುತ್ತದೆ ಎಂದರೆ ರಸ್ತೆಯಲ್ಲಿ ಇಬ್ಬರು ನಿಂತಿದ್ದರು. ಅಲ್ಲಿಗೆ ಒಬ್ಬ ಬಂದ, ಕಾಲನ್ನು ತುಳಿದ, ಕಾಲನ್ನು ತುಳಿದವನೇ ಕೂಗಿಕೊಂಡ, ತುಳಿಸಿ ಕೊಂಡವನು ಸುಮ್ಮನೆ ಇದ್ದ. ತುಳಿದವನೇ ಕೂಗಿಕೊಳ್ಳುತ್ತಾನೆ ಇದು ಹೇಗೆ ? ಇದು ಏನಾಯಿತು ಎಂದರೆ ತುಳಿಸಿಕೊಂಡವನು ಕೂಗಿಕೊಳ್ಳಬೇಕಾಗಿತ್ತು. ಆದರೆ ಇವರೇ ತುಳಿದುಬಿಟ್ಟು, ಇವರೇ ಕೂಗಿಕೊಳ್ಳುವುದು, ನಾನು ರಾಜ್ಯಪಾಲರ ಬಗ್ಗೆ ಏನು ಮಾತನಾಡಿಯೇ ಇಲ್ಲ. ತಾವೇ ಮಾಡುತ್ತಿದ್ದೀರಿ. ಆದರೆ ನನಗೇಕೆ ಹೇಳುತ್ತಿದ್ದೀರಿ. ನಾನು ಯಾರೇ ನಮ್ಮ ರಾಜ್ಯಕ್ಕೆ ರಾಜ್ಯಪಾಲರಾಗಿ ಬಂದರೂ ಅವರು ಈ ರಾಜ್ಯಭಾಷೆ, ಭಾಷೆಯಾದ ಕನ್ನಡವನ್ನು ಕಲಿಯಬೇಕೆನ್ನುವುದು ನನ್ನ ಪ್ರಾಮಾಣಿಕವಾದ ಒತ್ತಾಯವಾಗಿದೆ. ಅವರು 10 ವರ್ಷಗಳ ಕಾಲ ಈ ರಾಜ್ಯದ ರಾಜ್ಯಪಾಲರಾಗಿದ್ದಾರೆ. ಇವರು ಪ್ರಾಮಾಣಿಕವಾಗಿ ಕನ್ನಡವನ್ನು ಕಲಿತು, ಇಂತಹ ಜಂಟಿ ಅಧಿವೇಶದಲ್ಲಾದರೂ, ಕನ್ನಡದಲ್ಲಿ ಭಾಷಣ ಮಾಡುವ ಒಂದು ಪ್ರಾಮಾಣಿಕ ಚಿಂತನೆಯಾದರೆ ನಮಗೂ ಸಂತೋಷ , ಈ ರಾಜ್ಯಕ್ಕೂ ಸಂತೋಷ ,5 ಕೋಟಿ ಕನ್ನಡಿಗರಿಗೂ ಸಂತೋಷವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಕಳಕಳಿಯಿಂದ ಹೇಳಿ ಮಾತನಾಡುತ್ತಿದ್ದೇನೆ. ಕನಾಟಕದಲ್ಲಿ ಅನೇಕ ಶಾಸನಸಭೆಗಳಲ್ಲಿ ಶಾಸಕರು ಮಾತನಾಡುವಾಗ ಈ ಸದನದಲ್ಲಿ ಭರವಸೆಗಳನ್ನು ಕೊಡುತ್ತಾರೆ.ಈಗಾಗಲೇ ಅವರು ಸುಮಾರು ಭರವಸೆಗಳನ್ನು ಕೊಟ್ಟಿದ್ದಾರೆ. ಯಾವುದೇ ಸಂದರ್ಭ ಬಂದಾಗಲೂ ಆ ಭರವಸೆಗಳು ನೂರಕ್ಕೆ ತೊಂಭತ್ತೊಂಭತ್ತು ಭಾಗ ಭರವಸೆಗಳು ಈಡೇರಿಲ್ಲ. ಭರವಸೆ ಸಮಿತಿ ಎಂದು ಇದೆ. ಆ ಭರವಸೆಯ ಸಮಿತಿಯಲ್ಲಿ ; ಮಂತ್ರಿಗಳು ಕೊಟ್ಟಂತಹ ಭರವಸೆಗಳ ಎಲ್ಲಾ ಪುಸ್ತಕಗಳು ಧೂಳು ಹಿಡಿದು ಒಳಗಡೆ ಕುಳಿತುಕೊಂಡಿದೆ. ಇವರು ಕೊಟ್ಟಂತಹ ಭರವಸೆಗಳಲ್ಲಿ ಶೇಕಡ ಒಂದು ಕೂಡ ಈಡೇರಿಲ್ಲ. ಮಂತ್ರಿಗಳು ಕೊಟ್ಟಂತಹ ಭರವಸೆಗಳು ಈಡೇರಿದೆ ಎಂಬ ಬಗ್ಗೆ ಈ ಶಾಸಕಾಂಗ ಇಲಾಖೆಯವರು ನಮಗೆ ಉತ್ತರದ ರೂಪದಲ್ಲಿ ಎಲ್ಲರಿಗೂ ಒದಗಿಸಬೇಕು. ಎಷ್ಟು ಭರವಸೆಗಳು ಈಡೇರಿಸಿದ್ದಾರೆ ಎಂಬುದನ್ನು ಈ ಸದನದಲ್ಲಿ ತಿಳಿಸಿದರೆ ಅವರೆಲ್ಲರಿಗೂ ಹಕ್ಕುಚ್ಯುತಿಯಾಗುತ್ತದೆ. ಸಮಯಕ್ಕೆ ತಕ್ಕಂತೆ, ಕಾಲಕ್ಕೆ ತಕ್ಕಂತೆ, ಭರವಸೆಗಳನ್ನು ನೀಡಿ ಯಾವುದೇ ಪಕ್ಷದ ಶಾಸಕರಾಗಿರಲಿ, ಅವರಿಗೆ ಭರವಸೆಗಳನ್ನು ನೀಡಿ ಈ ಸದನವನ್ನು ತಪ್ಪುದಾರಿಗೆ ಎಳೆದು, ಹಕ್ಕುಚ್ಯುತಿಯನ್ನು ಮಾಡಿದ್ದಾರೆಂದು ನಾನು ಈ ಮೂಲಕ ಹೇಳಲಿಕ್ಕೆ ಬಯಸುತ್ತೇನೆ

ಶ್ರೀ ಜೆ.ಸಿ. ಮಾಧುಸ್ವಾಮಿ : ಭರವಸೆಗಳನ್ನು ಕೊಟ್ಟ ಮೇಲೆ ಅದು 60 ದಿನಗಳ ಒಳಗಡೆ ಆ ಭರವಸೆಯನ್ನು ಈಡೇರಿಸಬೇಕು. ಒಂದು ವೇಳೆ ಅದು ಆಗದಿದ್ದರೆ ಅದಕ್ಕೆ ಕಾರಣವನ್ನು ಕೊಡಬೇಕೆಂದು ಕಾನೂನು ಮಾಡಿ, ಒಂದೇ ಒಂದು ಪ್ರಕರಣ ಕೂಡ ಅಷ್ಟು ದಿವಸಗಳಲ್ಲಿ ಅನುಷ್ಠಾನವಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಐದು ವರ್ಷ ಅವಧಿ ಮುಗಿಯುತ್ತಾ ಬಂದಿದೆ. ಇನ್ನು ಎಂಟು ತಿಂಗಳಲ್ಲಿ ಚುನಾವಣೆ ಬರುತ್ತದೆ. ಶ್ರೀಮಾನ್ ಹೆಚ್.ಡಿ. ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗಿನಿಂದ ಅವರ ಮಂತ್ರಿಮಂಡಲದ ಸದಸ್ಯರು ಅಲ್ಲಿದ ಇಲ್ಲಿಯವರೆಗೆ ನಂತರ ಪಟೇಲರ ಮಂತ್ರಿಮಂಡಲದ ಸದಸ್ಯರು ಕೊಟ್ಟಿರತಕ್ಕ ಯಾವುದಾದರೂ ಭರವಸೆಗಳನ್ನು ಈಡೇರಿಸಲಾಗಿದೆಯೇ? ನಾನು ತಮ್ಮಲ್ಲಿ ವಿಜ್ಞಾಪನೆ ಮಾಡುತ್ತೇನೆ, ತಾವು ಪ್ರಾಮಾಣಿಕವಾಗಿ ಎಷ್ಟು ಭರವಸೆಗಳನ್ನು ಈಡೇರಿಸಿದ್ದರೆ ಹೇಳಿದರೆ. ಸದನದ ಎಲ್ಲಾ ಸದಸ್ಯರಿಗೆ ಇದು ನಿಜವಾಗಲೂ ಅತ್ಯಂತ ಒಪ್ಪಿಗೆಯಾಗುತ್ತದೆ.

ಇನ್ನು ಕರ್ನಾಟಕಕ್ಕೆ ಬರುವ ವಲಸೆ ಬಗ್ಗೆ ನಾನು ಹಿಂದೆ ಈ ಬಗ್ಗೆ ಪ್ರಶ್ನೆ ಕೇಳಿದಾಗ ಮಾನ್ಯಮುಖ್ಯಮಂತ್ರಿಗಳು ಒಂದು ರೀತಿಯಲ್ಲಿ ಸುತ್ತಿ ಬಳಸಿ ಕರ್ನಾಟಕಕ್ಕೆ ಹೊರಗಡೆಯಿಂದ ಬರುವವರನ್ನು ನಾವು ಅಡ್ಡಿಪಡಿಸುವುದಕ್ಕಾಗುವುದಿಲ್ಲ, ಇದು ಬಹಳ ಗಂಭೀರವಾದ ಪ್ರಶ್ನೆ ಇದರ ಬಗ್ಗೆ ನಾವು ಚಿಂತನೆ ಮಾಡಬೇಕೆಂದು ಹೇಳಿ ಹೊರಟರು. ನನಗೇನಿಸುತ್ತದೆ. ಇದು ಭಾಷಾವಾರು ಪ್ರಾಂತ್ಯಕ್ಕೆ ಭಾಷಾವಾರು ಪ್ರಾಂತ್ಯದ ತತ್ವಕ್ಕೆ ವಿರೋಧ. ಕರ್ನಾಟಕ ಏಕೀಕರಣವಾಗಿರಬಹುದು, ಆಂಧ್ರದ ಏಕೀಕರಣವಾಗಿರಬಹುದು, ತಮಿಳುನಾಡು ಏಕೀಕರಣವಾಗಿರಬಹುದು ಯಾವುದೇ ರಾಜ್ಯವಿರಲಿ 1956ರಲ್ಲಿಭಾಷಾವಾರು ಪ್ರಾಂತ್ಯವಾಗಿ ಆಯಾಯ ಭಾಷೆಯನ್ನು ಮಾತನಾಡತಕ್ಕ ಅವರದೇ ರಾಜ್ಯವಾಗಿದೆ. ಹೀಗಾಗಿ ಕರ್ನಾಟಕ ರಾಜ್ಯಕ್ಕೆ ಕನಿಷ್ಟ 1 ಕೋಟಿ 25 ಲಕ್ಷ ಜನ ಹೊರಗೆಡೆಯಿಂದ ಬಂದಿದ್ದಾರೆ. ಬೆಂಗಳೂರುನಗರ ಒಂದರಲ್ಲಿ 35 ಲಕ್ಷ ಜನ ಹೊರಗಡೆಯವರು ಇದ್ದಾರೆ. ಮಾರ್ವಾಡಿಗಳು ಇದ್ದಾರೆ ಗುಜರಾತಿಗಳು ಇದ್ದಾರೆ, ಸಿಂಧಿಗಳು ಇದ್ದಾರೆ, ತಮಿಳರು ಇದ್ದಾರೆ. ನಮ್ಮ ರಾಜ್ಯವನ್ನು ಮಾರ್ವಾಡಿ ರಾಜ್ಯ ಮಾಡಿದ್ದಾರೆ. ತಮಿಳರ ರಾಜ್ಯ ಮಾಡಿದ್ದಾರೆ. ಸಿಂಧಿಗಳ ರಾಜ್ಯಮಾಡಿದ್ದಾರೆ ,ಗುಜರಾತಿ ರಾಜ್ಯ ಮಾಡಿದ್ದಾರೆ. ಅವರ ದೇವಾಲಯಗಳು ಈ ರಾಜ್ಯದ ಉದ್ದಗಲಕ್ಕೂ ನಡೆದಿದೆ. ಇಷ್ಟು ದಾಂಧಲೆ ಕನ್ನಡಿಗರದು ಎಲ್ಲೂ ನಡೆದಿಲ್ಲ. ಇವರು ಎಲ್ಲೂ ಹೋಗಿಲ್ಲ. ಮಹಾರಾಷ್ಟ್ರಕ್ಕೆ ನುಗ್ಗಿಲ್ಲ. ತಮಿಳುನಾಡಿಗೆ ನುಗ್ಗಿಲ್ಲ, ಆಂಧ್ರಪ್ರದೇಶಕ್ಕೆ ನುಗ್ಗಿಲ್ಲ, ಗುಜರಾತಿಗೆ ನುಗ್ಗಿಲ್ಲ. ರಾಯಚೂರಿನ ಮೇಲೆ ಪರಭಾಷೆಯವರ ಧಾಳಿ, ಬೆಳಗಾಂ ಮೇಲೆ ಪರಭಾಷೆಯವರ ಧಾಳಿ, ದಕ್ಷಿಣ ಕನ್ನಡದ ಮೇಲೆ ಪರಭಾಷೆಯವರ ಧಾಳಿ, ಕೊಡಗಿನ ಮೇಲೆ ಪರಭಾಷೆಯವರ ಧಾಳಿ, ಬೆಂಗಳೂರಿನ ಮೇಲಂತೂ ನಿರಂತರ ಪರಭಾಷೆಯವರ ಧಾಳಿ .ಇದೇ ರೀತಿ ದಾಳಿಯಾಗುವುದಾದರೆ, ನಮ್ಮ ಪರಿಸ್ಥಿತಿ ಕಷ್ಟ. ಇಲ್ಲಿ ಬಂದವರಂತೂ ನಮ್ಮ ಭಾಷೆಯನ್ನು ಕಲಿಯುವ ಹಾಗೆ ಇಲ್ಲ. ಇಲ್ಲಿಗೆ ಬಂದವರು ನಮ್ಮ ಸಂಸ್ಕೃತಿಗೆ ಹೊಂದಿಕೊಳ್ಳುವಹಾಗೆ ಇಲ್ಲ. ಈ ಪರಿಸ್ಥಿತಿ ನಿರ್ಮಾಣವಾದರೆ ಮುಂದೆ ಗತಿಯೇನು? ನಿಜ, ಸಂವಿಧಾನ ಅದರ ರಕ್ಷಣೆ ತೆಗೆದುಕೊಂಡು ಯಾರು ಎಲ್ಲಿಬೇಕಾದರೂ ಬರಬಹುದು. ಆದರೆ ಈ ರಾಜ್ಯದ ಗತಿ ಏನು? ಇದು ನಮ್ಮ ಪರಿಸ್ಥಿತಿ. ಹೊರಗಡೆಯಿಂದ ಬಂದವರು ಮೇಯರ್ ಆಗುತ್ತಿದ್ದಾರೆ. ಹೊರಗಡೆಯಿಂದ ಬಂದವರು ನಗರಸಭೆಗಳ ಅಧ್ಯಕ್ಷರಾಗುತ್ತಿದ್ದಾರೆ. ಅಧ್ಯಕ್ಷರಾಗುವುದು ತಪ್ಪೆಂದು ನಾನು ಹೇಳುತ್ತಿಲ್ಲ. ಅವರು ಬರುವುದಕ್ಕೆ ಅವಕಾಶವಿದೆ, ಮತದಾರರು ಮತ ಹಾಕಿದ್ದಾರೆ. ಅವರು

ಆಯ್ಕೆಯಾಗಿದ್ದಾರೆ. ಅದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ನಮ್ಮ ರಾಜ್ಯದ ಭವಿಷ್ಯದ ಬಗ್ಗೆ ನಮ್ಮ ರಾಜ್ಯದ ಪರಿಸ್ಥಿತಿ ಏನು? ಈ ರಾಜ್ಯದ ಆಡಳಿತ ಭಾಷೆ ಕನ್ನಡವೆಂದು ಹೇಳುತ್ತೀರಿ, ಎಷ್ಟು ಜನರು ಕನ್ನಡದಲ್ಲಿ ಆಡಳಿತ ನಡೆಸುತ್ತಾರೆ? ಕನ್ನಡ ಆಡಳಿತ ಭಾಷೆ ಏನೇನು ಎಲ್ಲಿ ಆಗಿದೆ? ನಾನು ಸದನದಲ್ಲಿ ಆವೊಂದು ವಿಚಾರವನ್ನು ತೋರಿಸಿದರೆ ನನ್ನನ್ನು ಬಹಳ ಜನ ಓಹೋ ಏನು ವಾಟಾಳ್‌ನಾಗರಾಜ್‌ರವರು ಪ್ರತಿ ದಿನ ಇದನ್ನೆ ಮಾತನಾಡುತ್ತಾರೆಂದು ಹೇಳುತ್ತಾರೆ. ಇವೆಲ್ಲಾ ಸರ್ಕಾರ ಮುದ್ರಿಸಿದಂತಹ ಪುಸ್ತಕಗಳು. ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಮಾನ್ಯ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗಿನಿಂದ ನಾನು ನಿರಂತರವಾಗಿ ಹೇಳುತ್ತಿದ್ದೇನೆ. ಒಂದನ್ನಾದರೂ ಕನ್ನಡದಲ್ಲಿರತಕ್ಕ ಪುಸ್ತಕವನ್ನು ಮುದ್ರಿಸಲಾಗಿದೆಯೇ? ವರದಿ ಜಿಲ್ಲಾ ಪಂಚಾಯಿತಿಯದು ಇರಬಹುದು ಯಾವುದೇ ಇರಬಹುದು. ಸರ್ಕಾರಕ್ಕೆ ಸಂಬಂಧಪಟ್ಟ ಯಾವುದೇ ಇಲಾಖೆ ತೆಗೆದುಕೊಳ್ಳಿ ವಿದ್ಯುಚ್ಛಕ್ತಿ ಇಲಾಖೆ ತೆಗೆದುಕೊಳ್ಳಿ ಎಲ್ಲಾ ಇಂಗ್ಲೀಷ್‌ನಲ್ಲಿ ಮುದ್ರಿಸಿ ಕಳುಹಿಸಿರತಕ್ಕ ಪುಸ್ತಕಗಳನ್ನು ನಾವೇನು ಮಾಡಬೇಕು? ನಾವು ಇವುಗಳನ್ನು ಎಲ್ಲಿಗೆ ತೋರಿಸಬೇಕು, ಏಕೆ ಕನ್ನಡ ಆಡಳಿತ ಭಾಷೆಯಿರಬೇಕು? ಯಾರಿಗೋಸ್ಕರ ಏತಕ್ಕೋಸ್ಕರ ಆಡಳಿತ ಭಾಷೆ , ಯಾರ ಪ್ರೀತಿಗೋಸ್ಕತ ಆಡಳಿತ ಭಾಷೆ? ನಾನು ಹೇಳುತ್ತಿದ್ದೇನೆ, ಕನ್ನಡ ಸಂಸ್ಕೃತಿ ಇಲಾಖೆಯ ಸಚಿವರನ್ನು ಒಬ್ಬ ರಾಜ್ಯಸಚಿವರನ್ನಾಗಿ ಮಾಡಬೇಡಿ ಅದು ಸಂಪುಟದರ್ಜೆಯ ಸಚಿವರನ್ನು ಮಾಡಬೇಕೆಂದು ಹಿಂದಿನಿಂದ ಹೋರಾಟ ಮಾಡಿ ಶ್ರೀ ಮತಿ ಲೀಲಾದೇವಿ ಆರ್ ಪ್ರಸಾದ್‌ರವರಿಗೆ ಈಗ ಸಂಪುಟದ ಸಚಿವರನ್ನಾಗಿ ಮಾಡಿದ್ದಾರೆ. ಅವರಿಗೆ ಅರ್ಹತೆ ಇದೆ. ಅವರ ವಂಶಸ್ಥರಾದ ಬಿ. ಶಿವಮೂರ್ತಿಶಾಸ್ತ್ರಿಗಳು ಈ ನಾಡಿಗೋಸ್ಕರ, ಕನ್ನಡಿಗರಿಗೋಸ್ಕರ ದುಡಿದಂತಹ ಧೀಮಂತ ವ್ಯಕ್ತಿ ಅಂತಹವರ ಸೊಸೆ ಇವರು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಕನ್ನಡದ ಸ್ಥಾನಮಾನ ಆ ಮಟ್ಟಕ್ಕೆ ಬರಬೇಕು. ಇವತ್ತು ಆಡಳಿತ ಭಾಷೆ ಕನ್ನಡ ಎಲ್ಲೆಲ್ಲೂ ಇಲ್ಲ. ಅಂದಮೇಲೆ ಕನ್ನಡ ಆಡಳಿತ ಭಾಷೆ ಏಕೆ ಬೇಕು ಸ್ವಾಮಿ? ಯಾವುದಕ್ಕೆ ಬೇಕುಹೇಳಿ? ಈ ರಾಜ್ಯದ ಆಡಳಿತ ಭಾಷೆ ಕನ್ನಡವೆಂದು ಹೇಳುವುದಾದರೆ ಈ ರೀತಿಯ ಇಬ್ಬಂದಿತನ ಏಕೆ? ಪ್ರತಿಯೊಂದನ್ನು ಇಂಗ್ಲಿಷ್‌ನಲ್ಲಿ ಮುದ್ರಿಸುವುದಾದರೆ, ಯಾರಿಗೋಸ್ಕರ ರಾಜ್ಯಬೇಕು? ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಹೇಳುತ್ತೇನೆ, ಈ ವಲಸೆ ಬಗ್ಗೆ ನಾವೆಲ್ಲರೂ ಎಲ್ಲಾ ಪಕ್ಷದವರು ಪಕ್ಷಾತೀತವಾಗಿ ಕುಳಿತು ನಮ್ಮ ರಾಜ್ಯದ ಪರಿಸ್ಥಿತಿ ಏನು ಆರ್ಥಿಕವಾಗಿ ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಈ ರಾಜ್ಯದ ನೆಲ, ಜಲದ ರಕ್ಷಣೆಯ ದೃಷ್ಟಿಯಿಂದ ನಾವು ನೋಡಿದರೆ ನಾವು ಎಲ್ಲಿಗೆ ತಲುಪುತ್ತಿದ್ದೇವೆನ್ನುವ ಬಗ್ಗೆ ನಾವು ಪ್ರಾಮಾಣಿಕವಾದ ಚಿಂತನೆಯನ್ನು ಮಾಡಲಿಲ್ಲ. ನಾವು ಅತ್ಯಂತ ಅಪಾಯಕ್ಕೆ ಹೋಗುತ್ತೇವೆ ಎನ್ನತಕ್ಕ ಮಾತನ್ನು ನಾನು ತಮಗೆ ಹೇಳುತ್ತಿದ್ದೇನೆ. ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಇನ್ನು ತಮ್ಮಲ್ಲಿ ಒಂದು ವಿಚಾರವನ್ನು ಹೇಳುವುದಾದರೆ, ಒಂದು ವ್ಯವಸ್ಥೆಯಲ್ಲಿ ವಿಧಾನಪರಿಷತ್, ರಾಜ್ಯಸಭೆ ಮತ್ತು ಶಾಸನಸಭೆ ಮತ್ತು ಲೋಕಸಭೆ ಇವೆರಡರ ಬಗ್ಗೆ ಚಿಂತನೆ ಮಾಡೋಣ. ಕೆಲವು ರಾಜ್ಯಗಳಲ್ಲಿ ವಿಧಾನಪರಿಷತ್ತನ್ನು ಸಂಪೂರ್ಣವಾಗಿ ರದ್ದು ಮಾಡಿದ್ದಾರೆ. ಈ ವಿಧಾನಪರಿಷತ್ ಬೇಕೇ ಈವೊಂದು ವಿಚಾರವನ್ನು ಬಹಳ ಗಂಭೀರವಾಗಿ ನಾವೆಲ್ಲರೂ ಚರ್ಚೆ ಮಾಡಬಹುದು. ತಮಿಳುನಾಡಿನಲ್ಲಿ, ಪಶ್ಚಿಮಬಂಗಾಳದಲ್ಲಿ, ಆಂಧ್ರಪ್ರದೇಶದಲ್ಲಿ ವಿಧಾನಪರಿಷತ್ ಇಲ್ಲ. ಈ ವಿಧಾನಪರಿಷತ್ ಇದೊಂದು ದೊಡ್ಡ ಬಿಳಿ ಆನೆ. ವಿಧಾನ ಪರಿಷತ್‌ಗೆ ಚುನಾಯಿಸುವವರು

ಶಾಸನಸಭೆಯ ಚುನಾಯಿತ ಸದಸ್ಯರು. ಪದವೀಧರ ಕ್ಷೇತ್ರ ಇರಬಹುದು, ಶಿಕ್ಷಕರ ಕ್ಷೇತ್ರವಿರಬಹುದು. ನಮ್ಮ ಶಾಸನಸಭೆಯ ಬರೀ 19 ಜನ ಸದಸ್ಯರು ಮತ ಚಲಾಯಿಸಿದರೆ ಅಲ್ಲಿಗೊಬ್ಬರು ಸದಸ್ಯರು. ನಾನು ಯಾವುದೇ ವಿಧಾನಪರಿಷತ್ ಕುರಿತು ಮಾತನಾಡುತ್ತಿಲ್ಲ. ವಿಧಾನ ಪರಿಷತ್ತಿನ ಅವಶ್ಯಕತೆ ಇವತ್ತು ಇದೆಯೆ? ಯಾವುದೇ ಸರ್ಕಾರ ಕೆಳಗೆ ಬಿದ್ದರೆ ಯಾವ ಶಾಸನಕಾಂಗವಿರುತ್ತದೆ ಯಾವ ಲೋಕಸಭೆವಿರುತ್ತದೆ ಇದಕ್ಕೆ ಐದು ವರ್ಷ ಕಡ್ಡಾಯವಾಗಿರಬೇಕು. ಪ್ರಧಾನಮಂತ್ರಿಗಳಾಗತಕ್ಕ ಸರ್ಕಾರ ಕೆಳಗೆ ಬಿದ್ದರೆ ಬೀಳಬಹುದು ಮುಖ್ಯಮಂತ್ರಿಗಳಾಗತಕ್ಕ ಸರ್ಕಾರ ಕೆಳಗೆ ಬೀಳಬಹುದು ಆಗ ಸದಸ್ಯತ್ವದ ಅವಧಿ ಐದು ವರ್ಷ ಶಾಸನಸಭೆಗಾಗಲೀ ಲೋಕಸಭೆಗಾಗಲೀ ಇರತಕ್ಕ ಸಂವಿಧಾನ ತಿದ್ದುಪಡಿಯನ್ನು ಚುನಾವಣಾ ಕಾಯಿದೆಯನ್ನು ತಿದ್ದುಪಡಿ ಮಾಡತಕ್ಕ ಕೆಲಸ ನೇರವಾಗಿ ಆಗಲೇಬೇಕು. ಆಗ ಈ ದೇಶದಲ್ಲಿ ಪ್ರಜಾತಂತ್ರದ ವ್ಯವಸ್ಥೆ ಉಳಿಯುತ್ತದೆ. ಇಲ್ಲ ಮೂರು ತಿಂಗಳು ಅಥವ ಆರು ತಿಂಗಳಿಗೆ ಚುನಾವಣೆ ಮಾಡುವುದಾದರೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾವಣೆ ಬೇಕೇ ಎನ್ನುವ ಅಪನಂಬಿಕೆ ಜನಗಳಲ್ಲಿ ಬರುತ್ತದೆ. ಚುನಾವಣೆಯಲ್ಲಿ ಮತ ಹಾಕುವುದಕ್ಕೆ ಬಾರದಿರತಕ್ಕ ಕಾಲ ಬರುತ್ತದೆಂದು ಎಚ್ಚರಿಕೆಯನ್ನು ನಾನು ಇವತ್ತು ಕೊಡುತ್ತಿದ್ದೇನೆ. ಚುನಾವಣೆ ದಳ ಇರಬಹುದು. ಕಾಂಗ್ರೆಸ್ ಇರಬಹುದು. ಕಮ್ಯುನಿಸ್ಟ್ ಇರಬಹುದು ಯಾವುದೇ ಪಕ್ಷ ಇರಲಿ ಸದಸ್ಯತ್ವದ ಅವಧಿ ಮಾತ್ರ ಐದು ವರ್ಷ ಇರಬೇಕು. ಸರ್ಕಾರದಲ್ಲಿ ಯಾರೇ ಇರಲಿ ಅದು ಲೋಕಸಭೆಗೂ ಇರಬೇಕು. ಇಲ್ಲಿಗೂ ಇರಬೇಕು. ಇದರ ಜೊತೆಯಲ್ಲಿ ರಾಜ್ಯಸಭೆ ಮತ್ತು ವಿಧಾನಪರಿಷತ್ ಇರುವದು ಒಳ್ಳೆಯ ಸೂಚನೆಯಲ್ಲ. ಇದು ಬೇಕಾಗಿಲ್ಲ ಇದನ್ನು ರದ್ದುಮಾಡುವುದಕ್ಕೆ ಸಂಪೂರ್ಣವಾದ ನಿರ್ಧಾರ ಮಾಡಬೇಕು. ಈ ಚಿಂತನೆಯಾಗಬೇಕೆಂದು ನನ್ನ ಒತ್ತಾಯ. ಇದರ ಜೊತೆಗೆ ನಾಮಕರಣಗಳು, ವಿಧಾನಪರಿಷತ್ ಮತ್ತು ರಾಜ್ಯಸಭೆಗೆ ಇತ್ತೀಚೆಗೆ ನಾಮಕರಣವಾಗುವುದನ್ನು ನಾನು ನೋಡಿದ್ದೇನೆ. ಹಿಂದೆ ನಾಮಕರಣ ಮಾಡುತ್ತಿದ್ದುದನ್ನು ನೋಡಿದ್ದೇನೆ. ಕೆಂಗಲ್ ಹನುಮಂತಯ್ಯನವರ ಕಾಲದಲ್ಲಿ ಟಿ. ಚೌಡಯ್ಯ ಜಿ. ಹೆಚ್. ವೀರಣ್ಣ ಮತ್ತು ಎಂ.ಸಿ. ಮಹದೇವಸ್ವಾಮಿ ಎಂಥೆಂಥವರು ಅವರು ಈ ರಾಜ್ಯಕ್ಕೆ ಕನ್ನಡಕ್ಕೆ ರಂಗಭೂಮಿಯಲ್ಲಿ ತ್ಯಾಗ ಮಾಡಿದವರು. ಇದ್ದರು ಇತ್ತೀಚಿನ ನಾಮಕರಣಗಳು ಚುನಾವಣೆಯಲ್ಲಿ ಸೋತವರಿಗೆ ಇದು ಸಲ್ಲ. ಇದು ಅತ್ಯಂತ ಅಪರಾಧ. ಮೂರು ಸ್ಥಾನಗಳಾಗಲೀ, ಆರು ಸ್ಥಾನಗಳಾಗಲೀ ಅದು ರಾಜ್ಯಸಭೆಗಾಗಲೀ ವಿಧಾನಪರಿಷತ್‌ಗಾಗಲೀ ಚುನಾವಣೆಯಲ್ಲಿ ಸೋತವರಿಗೆ ಅಲ್ಲಿಂದ ಬಂದವರಿಗೆ ನಾಮಕರಣ ಮಾಡುವುದು ಏನೂ ಅಧಿಕಾರ ಸಿಗಲಿಲ್ಲವೆಂದರೆ ಒಂದು ಮರ್ಜಿಗೆ ತಮಗೆ ಬೇಕಾದವರಿಗೆ ನಾಮಕರಣ ಮಾಡುವುದು ಇದು ಖಂಡಿತ ಸಲ್ಲದು. ನಾಮಕರಣದ ದುರುಪಯೋಗ ಸಂಪೂರ್ಣವಾಗಿ ನಿಲ್ಲಬೇಕು. ಇಲ್ಲವೆಂದರೆ ನಾಮಕರಣದ ವ್ಯವಸ್ಥೆಯನ್ನು ತೆಗೆಯಬೇಕು. ಒಟ್ಟಾರೆ ವಿಧಾನಪರಿಷತ್ತಿನ ಸಂಸ್ಕೃತಿಯ ವ್ಯವಸ್ಥೆಯನ್ನು ತೆಗೆಯಬೇಕೆಂದು ನನ್ನ ಪ್ರಾಮಾಣಿಕವಾದ ಅನಿಸಿಕೆ ಈ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾನು ಯಾರನ್ನೂ ಕುರಿತು ಯಾರ ಬಗ್ಗೆಯೂ ಮಾತನಾಡುತ್ತಿಲ್ಲ. ಕೌನ್ಸಿಲ್ ಏಕಿರಬೇಕು? ಸುಮ್ಮನೆ ದುಡ್ಡುವ್ಯಯ. ಈ ಸದನದಲ್ಲಿ 1 ಲಕ್ಷ 2 ಲಕ್ಷ 50 ಸಾವಿರ ಮತದಾರರಿಂದ ಚುನಾಯಿತರಾಗಿ ಗೆದ್ದುಬಂದ ನಮ್ಮ ಪರಿಸ್ಥಿತಿ ಏನು? ಆಕಾಶದಿಂದ ಇಳಿದು, ಭೂಮಿಗೆ ಬಿದ್ದು, ಕೆರೆಯ ನೀರಿಗೆ ಇಳಿದು, ಚರಂಡಿಗೆ ಬಿದ್ದು ಗೆದ್ದು ಬರುತ್ತೇವೆ. ವಿಧಾನಪರಿಷತ್ ಸದಸ್ಯರಿಗೆ ಏನೂ ಇಲ್ಲ. ಗಂಭೀರವಾಗಿ ಪದವೀಧರ ಮತದಾರರು, ಶಿಕ್ಷಕರು ಮತದಾರರು, ನಾವು 19 ಜನರ ಮತ ಇಷ್ಟಾದರೆ ಸಾಕು. ಇಷ್ಟು ಹಾಕಿಬಿಟ್ಟರೆ ರಸ್ತೆಯ ಚಿಂತೆ ಇಲ್ಲ, ಮನೆಯ ಚಿಂತೆ ಇಲ್ಲ, ಮಠದ ಚಿಂತೆ ಇಲ್ಲ. ಇನ್ನು ಐದಾರು

ತಿಂಗಳಲ್ಲಿ ನಾವು ಹೋಗಬೇಕು. ನಾವು ಕೇಳಿದರೆ ಅವರು ಹೇಳುತ್ತಾರೆ ಮತ್ತೆ ಬರ್ತೀರಲ್ಲಾ, ನಡೆಯಿರಿ ಸ್ವಾಮಿ. ಜಾತ್ರೆ ಬಂತಲ್ಲಾ, ಊರಿಗೆ ನಡೆಯಿರಿ. ಎಂದು ಇವರನ್ನು ಯಾರಾದರೂ ಅನ್ನುತ್ತಾರಾ? ಅನ್ನುವವರು ಇಲ್ಲ. ಅದರ ಜೊತೆಗೆ ಈ ವ್ಯವಸ್ಥೆ.....

1.30 ಪಿ.ಎಂ.

ಶ್ರೀ ಜೆ.ಸಿ. ಮಾಧುಸ್ವಾಮಿ : ಶಿಕ್ಷಕರು ವಿಧಾನಸಭೆಗೂ ಓಟು ಹಾಕುತ್ತಾರೆ. ವಿಧಾನ ಪರಿಷತ್ತಿಗೂ ಓಟು ಹಾಕುತ್ತಾರೆ. ರೈತರಾಗಿಬಿಟ್ಟರೆ ಅದು ಅಪರಾಧ. ನಾವು ಇಲ್ಲಿಗೆ ಮಾತ್ರ ಓಟು ಹಾಕಬೇಕು. ಡಾಕ್ಟರ್ಆದರೆ ಎರಡೂ ಕಡೆ ಓಟು ಹಾಕಬಹುದು, ಮೇಷ್ಟ್ರು ಆದೆರ ಎರಡೂ ಕಡೆ ಓಟು ಹಾಕಬಹುದು.

ಶ್ರೀ ವಾಟಾಳ್ ನಾಗರಾಜ್: ವಿಧಾನ ಪರಿಷತ್ತು ಬಗ್ಗೆ ಹೇಳುವುದಾದರೆ ರೈತರ ಪರವಾಗಿಯೂ ಒಬ್ಬರು ಅಲ್ಲಿ ಇರಬೇಕು. ಅನೇಕ ವಿಚಾರಗಳು ಬರುತ್ತವೆ. ಆದ್ದರಿಂದ ಇದು ನಮ್ಮ ವಿಧಾನ ಪರಿಷತ್ತು ಎಂದು ಅಲ್ಲ. ಇಡೀ ದೇಶದಲ್ಲಿ ಈ ವ್ಯವಸ್ಥೆ ಬದಲಾವಣೆ ಆಗಬೇಕಾಗಿರತಕ್ಕಂಥಾದ್ದು ಒಳ್ಳೆಯದು. ಮತ್ತೆ ಈ ಲೋಕಸೇವಾ ಆಯೋಗ. ನನಗನ್ನಿಸುತ್ತದೆ ಇದು ನಮ್ಮ ದೃಷ್ಟಿಯಲ್ಲಿ ಒಂದು ರೀತಿಯಲ್ಲಿ ಕಿರೀಟ. ಇದು ಚಿನ್ನದ ಕಿರೀಟ ಇದ್ದಹಾಗೆ. ಅಲ್ಲಿ ಆಯ್ಕೆ ಯಾಗತ್ಕಂಥವರು ಯಾವುದೇ ಜಾತಿ ಆಧಾರದ ಮೇಲೆ ಆಯ್ಕೆಯಾಗ ಬಾರದು. ಒಂದು ಪ್ರಾಮಾಣಿಕವಾದ ಚಿಂತನೆ ಅಲ್ಲಿ ಇರಬೇಕು. ಯಾವುದೇ ಜಾತಿ ಆಧಾರದ ಮೇಲೆ ಆಯ್ಕೆಯಾದರೆ ಅವರು ಆಯ್ಕೆ ಮಾಡತಕ್ಕಂಥವರೆಲ್ಲರೂ ಆ ಜಾತಿ ಆಧಾರದ ಮೇಲೆಯೇ ಆಯ್ಕೆಯಾಗುತ್ತಾರೆ. ಅಲ್ಲಿ ಯಾವ್ಯಾವ ಅಭ್ಯರ್ಥಿಗಳು ಆಯ್ಕೆಯಾಗುತ್ತಾರೆ ಅವರು ಎಲ್ಲಾ ಜಾತಿಯ ಕೊಳವೆ ಬಾವಿಗಳಂತೆ ಒಂದೇ ದಿಕ್ಕಿನಲ್ಲಿ ಹೋಗುತ್ತಾರೆ. ಎಂತಹವರನ್ನು ನೀವು ಆಯ್ಕೆ ಮಾಡುವುದು? ನಿವೃತ್ತರಾದವನ್ನು , ಆ ಸ್ಥಾನಕ್ಕೆ ಗೌರವ ತಾರದೇ ಇರತಕ್ಕಂಥವರನ್ನು ಆಯ್ಕೆ ಮಾಡುತ್ತೀರಿ. ಲೋಕಸೇವಾ ಆಯೋಗ ಎಂದರೆ ಹೇಗೆ ಇರಬೇಕು? ಅದು ನಿವೃತ್ತರ ಒಂದು ಆಶ್ರಮ ಆಗಬಾರದು. ಅಥವಾ ವಯೋವೃದ್ಧರ ಒಂದು ಆಶ್ರಮ ಆಗಬಾರದು. ಯಾರಿಗೋ ಅನುಕೂಲ ಮಾಡುವುದಕ್ಕೆ.. ನಮ್ಮ ಸರ್ಕಾರದಲ್ಲಿ 35 ವರ್ಷ ದುಡಿದು ಸಾಕಾಗಿದೆ. ತಿರುಗ ನಿವೃತ್ತರಾದ ಮೇಲೆ ಅವರನ್ನು ತೆಗೆದುಕೊಂಡು ಹೋಗಿ ಅಲ್ಲಿ ಕೂಡಿಸತಕ್ಕಂಥ ವ್ಯವಸ್ಥೆ ಸರಿಯಲ್ಲ. ಆ ವ್ಯವಸ್ಥೆಯಲ್ಲೂ ಜಾತಿ. ಆ ಜಾತಿಯ ಒಬ್ಬರ ಸ್ಥಾನ ಖಾಲಿಯಾಗಿದೆ ಎಂದರೆ ಅಲ್ಲಿ ಅದೇ ಜಾತಿಯವರನ್ನು ಹಾಕಬೇಕು. ಈ ಪರಿಸ್ಥಿತಿ ನ್ಯಾಯಾಧೀಶರ ಆಯ್ಕೆ, ಲೋಕಸೇವಾ ಆಯೋಗದ ಆಯ್ಕೆ, ಮತ್ತು ಇಂತಹ ದೊಡ್ಡ ದೊಡ್ಡ ಆಯ್ಕೆಗಳೆಲ್ಲ ಜಾತಿ ಆಧಾರದ ಮೇಲೆ ಆಗುವುದಾದರೆ ಇದು ಅತ್ಯಂತ ಅಪಾಯಕಾರಿಯಾದ ಬೆಳವಣಿಗೆ. ನಾವು ಯಾರೂ ಉಳಿಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಲೋಕಸೇವಾ ಆಯೋಗದಲ್ಲಿ ನಾನು ಪ್ರತಿಸಾರಿ ಸುಮ್ಮನೆ ನೋಡುತ್ತಿದ್ದೇನೆ. ಯಾರು ನಿವೃತ್ತಿಯಾಗಿರುತ್ತಾರೆ. ಯಾರು ಬಲಾಢ್ಯರಾಗಿದ್ದಾರೆ , ಯಾರಿಗೆ ದೊಡ್ಡ ಶಿಫಾರಸ್ಸು ಇರುತ್ತದೆ ಅಂತಹವರನ್ನು ನಾಮಕರಣ ಮಾಡುವುದಾದರೆ ಅದು ಸರಿಯಲ್ಲ. ಒಂದು ವೇಳೆ ಹಾಗೆ ಮಾಡುವುದಿದ್ದರೂ ಅದೇ ಜಾತಿಯಲ್ಲಿ ಬಹಳ ಮೇರುವಾಗಿ ದುಡಿದು, ತ್ಯಾಗ ಮಾಡಿ ಕೆಲಸ ಮಾಡಿರತಕ್ಕಂಥ ಪಂಡಿತರು, ಪಾಂಡಿತ್ಯ ಇರತಕ್ಕಂಥವರನ್ನು ನೀವು ಆ ಸ್ಥಾನಕ್ಕೆ ಆಯ್ಕೆ ಮಾಡಬೇಕೇ ಹೊರತು ಅದನ್ನು ಬಿಟ್ಟು ಯಾರೋ ನಿಮಗೋ ಬೇಕಾದವರು, ನಿಮ್ಮ ಹಿಂಬಾಲಕರಾದಂಥವರನ್ನು ಹಾಕುವುದು ಒಳ್ಳೆಯದಲ್ಲ ಎಂದು ಹೇಳಿ ತಮಗೆ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತೇನೆ. ಈ ಒಂದು ಪಿಡುಗು ಹೋಗಲಿಲ್ಲ

ಎಂದರೆ ಅದು ಒಳ್ಳೆಯದಲ್ಲ. ಮತ್ತೆ ನಮ್ಮ ಲೋಕಾಯುಕ್ತ ಅಂದರೆ ಎಲ್ಲರಿಗೂ ಪರಮ ಪವಿತ್ರವಾದಂಥ ಸ್ಥಳ ಅದು. ಅಲ್ಲಿ ಯಾರೂ ಮುಟ್ಟುವ ಹಾಗಿಲ್ಲ. ಅದು ಒಂದು ದೇವಸ್ಥಾನ ಇದ್ದ ಹಾಗೆ. ನಮ್ಮ ದೃಷ್ಟಿಯಲ್ಲಿ ದೇವರನ್ನು ನಾವು ಹೇಗೆ ಕಾಣುತ್ತೇವೆ, ದೇವರ ಬಗ್ಗೆ ಏನೂ ಮಾತನಾಡಬಾರದು ಎಂದು ಇದೆ. ಅಂದರೆ ಪರಮಪವಿತ್ರವಾದ ಆ ಸ್ಥಾನ ಎನ್ನತಕ್ಕಂದ್ದನ್ನು ನಾವು ಬೆಳೆಸಿ ಬಿಟ್ಟಿದ್ದೇವೆ. ಆದರೆ ಅವರನ್ನು ಹಿಡಿಯುವುದು ಯಾರನ್ನು ಹಿಡಿಯುವ ಪದ್ಧತಿಯಾದರೂ ಯಾವುದು? ಒಬ್ಬ ಐ.ಎ.ಎಸ್. ಅಧಿಕಾರಿಯನ್ನೂ ಹಿಡಿದು ಜೈಲಿಗೆ ಕಳುಹಿಸಿಲ್ಲ, ಒಬ್ಬ ಐ.ಪಿ.ಎಸ್. ಅಧಿಕಾರಿಯನ್ನು ಹಿಡಿದು ಜೈಲಿಗೆ ಕಳುಹಿಸಿಲ್ಲ. ಕೋಟಿ ಕೋಟಿ ರೂಪಾಯಿಗಳನ್ನು ಲೂಟಿ ಮಾಡಿರತಕ್ಕಂಥ ಒಬ್ಬ ಅಧಿಕಾರಿಯನ್ನೂ ಜೈಲಿಗೆ ಕಳುಹಿಸಿಲ್ಲ. ಯಾರೋ ಒಬ್ಬ ಜವಾನನ್ನು, ಒಬ್ಬ ತಹಸೀಲ್ದಾರ ಅಥವಾ ಒಬ್ಬ ಜೂನಿಯರ್ ಇಂಜಿನಿಯರ್‌ನ್ನು ಹಿಡಿಯುತ್ತಾರೆ. ಅದೂ ಹೇಗೆ ಎಂದರೆ ನಾವು ಮೊದಲೇ ರೆಡಿಯಾಗಿರುತ್ತೇವೆ. ಅವರಿಂದ ಒಂದಿಷ್ಟು ನೋಟುಗಳನ್ನು ತಂದಿಟ್ಟುಕೊಂಡಿರುತ್ತೇವೆ. ಒಬ್ಬ ಜೂನಿಯರ್ ಇಂಜಿನಿಯರ್ ಕಂಟ್ರಾಕ್ಟ್ ಕೊಟ್ಟಿಲ್ಲ ಎನ್ನುವ ಕಾರಣಕ್ಕೆ ತಕ್ಷಣ ಅವನ ಮೇಲೆ ಕೋಪ. ಒಬ್ಬ ತಹಿಸೀಲ್ದಾರ ನಮ್ಮ ಕೆಲಸ ಮಾಡಿಲ್ಲ ಎಂದರೆ ಅದಕ್ಕೆ ಕೋಪ. ಆಗ ಏನು ಮಾಡುತ್ತಾರೆ. ಇನ್ನು ಒಂದು ವಾರದಲ್ಲಿ ಏನಾದರೂ ಮಾಡಿ ಅವರನ್ನು ಹಿಡಿಸಲೇಬೇಕು ಎಂದು ಇದೊಂದು ರೀತಿಯಲ್ಲಿಪಿತೂರಿ ಇದ್ದಹಾಗೆ. ಅವರಾಗಿ ನೇರವಾಗಿ ಹಿಡಿಯುವುದಕ್ಕೆ ಹೋಗುವುದಿಲ್ಲ. ಲೋಕಾಯುಕ್ತದವರು ತಮ್ಮ ಸಿಬ್ಬಂದಿ ಮೂಲಕ, ತಮ್ಮ ಪರಿಣಿತರನ್ನು ಬಿಟ್ಟು, ತಮ್ಮ ಗುಪ್ತದಳದ ಮೂಲಕ ಹಿಡಿಯುವುದಿಲ್ಲ. ಅವರ ವ್ಯವಸ್ಥೆ ಏನು ಎಂದರೆ ಒಬ್ಬನ ಕೈಯಲ್ಲಿ ನೋಟು ಕೊಡುತ್ತಾರೆ. ಇನ್ನೊಬ್ಬ ಮೆರೆಯಲ್ಲಿ ರೆಡಿಯಾಗಿ ಇರುತ್ತಾರೆ. ಇವರು ಅಲ್ಲಿ ಕಾದಿರುತ್ತಾರೆ. ಎಲ್ಲವೂ ನಾಟಕದಂತೆ, ರಂಗಭೂಮಿ ಸಿದ್ಧತೆ ಅಲ್ಲಿರುತ್ತದೆ. ಅವರು ಅಲ್ಲಿ ಬಾಗಿಲಲ್ಲಿ ಕಾದಿರುತ್ತಾರೆ. ಬಾಗಿಲು ತೆಗೆದ ತಕ್ಷಣನೋಟು ಕೊಡುವುದು ಮತ್ತು ಥಟ್ಟನೆ ತೆಗೆದುಕೊಂಡವನನ್ನು ಹಿಡಿಯುವುದು. ಕೊಟ್ಟಿರುವ ಆ ನೋಟುಗಳಿಗೆ ಬಣ್ಣ ಹಚ್ಚಿರುತ್ತಾರೆ. ಹೀಗೆ ಹಿಡಿದ ಮೇಲೆ ಅವನ ಕತೆ ಮುಗಿಯಿತು. ಈ ತರಹ ಲೋಕಾಯುಕ್ತದವರು ತಮ್ಮ ಗುಪ್ತದಳದ ಮೂಲಕ ಪ್ರಾಮಾಣಿಕವಾಗಿ ಕೆಲಸ ಮಾಡಬೇಕೇ ಹೊರತು ಇಲ್ಲದಿದ್ದರೆ ನಮಗೆ ಲೋಕಾಯುಕ್ತ ಏತಕ್ಕೆ ಬೇಕು? ಒಂದು ಕಡೆ ಲೋಕಾಯುಕ್ತ, ಇನ್ನೊಂದು ಕಡೆ, ಸಿ.ಓ.ಡಿ ಮತ್ತೊಂದು ಕಡೆ ಪೋಲೀಸ್ - ಎಷ್ಟು ಇಲಾಖೆಗಳು. ಇವುಗಳು ಯಾರಿಗೋಸ್ಕರ ಬೇಕಾಗಿವೆ? ಇವರು ಎಷ್ಟು ಮಂದಿಯನ್ನು ಹಿಡಿದಿದ್ದಾರೆ. ಏನೇನು ಮಾಡಿದ್ದಾರೆ ಎಂದು ಹೇಳಬೇಕು. ಅದಕ್ಕೋಸ್ಕರ ಇದು ಬಿಳಿಯಾನೆ, ಇದು ಐರಾವತ, ಇಂತಹ ಐರಾವತ ನಮಗೆ ಬೇಡ. ನಮಗೆ ಪೋಲೀಸ್ ಸ್ಟೇಷನ್ ಸಾಕು. ನಮ್ಮ ದಫೇದಾರನೇ ಸಾಕು. ನಮ್ಮ ಸಬ್‌ಇನ್‌ಸ್ಪೆಕ್ಟರ್ ಸಾಕು. ಇದು ಏಕೆ ಬೇಕು? ಇದು ಯಾರಿಗೋಸ್ಕರ ಬೇಕು? ಇದಕ್ಕೆ ಒಬ್ಬರು ಡಿ.ಜಿ. ಅದಕ್ಕೆ ಒಬ್ಬರು ಡಿ.ಜಿ. ಅದಕ್ಕೆ ಹನ್ನೆರಡು ಜನ ಡಿ.ಜಿ.ಗಳು . ಅವರ ಆ ಖರ್ಚು, ಈ ವ್ಯವಸ್ಥೆ ಏಕೆ ಸ್ವಾಮಿ? ಯಾರಿಗೋಸ್ಕರ ? ಯಾರ ಉದ್ದಾರಕ್ಕೆ ಇದು ಬೇಕಾಗಿದೆ? ಇದು ಒಳ್ಳೆಯದಲ್ಲ.

ಮಾನ್ಯ ಸದಸ್ಯರು: ನೀವು ಡಿ.ಜಿ. ಎಂದು ಇಂಗ್ಲೀಷ್ ಪದ ಉಪಯೋಗಿಸಿದಿರಲ್ಲಾ?

ಶ್ರೀ ವಾಟಾಳ್ ನಾಗರಾಜ್: ಒದೊಂದು ಪದ ಇಂಗ್ಲೀಷಿನಲ್ಲಿ ಉಪಯೋಗಿಸಿದ ತಕ್ಷಣ ಅದು ಅಪರಾಧ ಏನೂ ಇಲ್ಲ. ಈಗ ಒಬ್ಬಟ್ಟು ಎನ್ನುವುದಕ್ಕೆ ಇಂಗ್ಲೀಷಿನಲ್ಲಿ ಏನು ಹೇಳಿ.

ಮಾನ್ಯ ಸದಸ್ಯರು : ಸ್ವೀಟ್‌ಕೇಕ್.

ಶ್ರೀ ವಾಟಾಳ್ ನಾಗರಾಜ್: ಸ್ವೀಟ್‌ಕೇಕ್ ಎಂದರೆ ಮಜಾ ಇರುವುದಿಲ್ಲ. ಒಬ್ಬಟ್ಟು ಎಂದರೇ ಸರಿ. ಒಬ್ಬಟ್ಟು ಎನ್ನುವುದಕ್ಕೆ ಇಂಗ್ಲೀಷಿನಲ್ಲಿ ಏನು ಹೇಳಬೇಕು ಎಂದು ಕೇಳಿದರೆ ಯಾರೂ ಹೇಳುವುದಕ್ಕೆ ತಯಾರಿಲ್ಲ. ನಾವು ಏನು ಮಾಡುವುದಕ್ಕೆ ಆಗುತ್ತದೆ?

ಶ್ರೀ ಎನ್. ರಾಜಣ್ಣ: ಸ್ವೀಟ್ ಚಪಾತಿ

ಶ್ರೀ ವಾಟಾಳ್ ನಾಗರಾಜ್: ಕೆಲವು ಪದಗಳನ್ನು ....

ಶ್ರೀ ಎನ್.ರಾಜಣ್ಣ : ಸ್ವೀಟ್ ಬನ್ ....

ಶ್ರೀ ವಾಟಾಳ್ ನಾಗರಾಜ್: ಮೊಯಿಲಿಯವರೇ, ಬಹುತೇಕ ಪದಗಳು ಕನ್ನಡಕ್ಕೆ ತರ್ಜುಮೆಯಾಗಿರುವುದು ತಮಗೆ ಗೊತ್ತಿದೆ. ಈಗ 'ವಾದೇಶಕ ' ಎಂದರೆ ಏನು? ಇದು ನನಗೇ ಅರ್ಥವಾಗುವುದಿಲ್ಲ. ವಾದೇಶಕ ಎಂದರೆ ಇದೇನೋ ವಿದೂಷಕ ಇರಬೇಕು ಎಂದು ಅನ್ನಿಸುತ್ತದೆ. 'ವಾದೇಶಕ ' ಎಂದರೆ ನನಗಂತೂ ಅರ್ಥವಾಗುವುದಿಲ್ಲ, ಅದೇ ರೀತಿ 'ಆರಕ್ಷಕ ' ಎನ್ನುವ ಪದ ಏಕೆ ಬೇಕು? 'ಪೋಲೀಸ್ ಎಂದರೆ ಗತ್ತು, ಗಮ್ಮತ್ತು ಇದೆ. ಪೋಲೀಸ್ ಎಂದರೆ ಅದು ಕನ್ನಡ ಪದ ಎಂದು ಏಕೆ ತಿಳಿದುಕೊಳ್ಳಬಾರದು? ಬೇರೆ ಭಾಷೆಯ ಪದಗಳನ್ನು ನಮ್ಮ ಭಾಷೆಗೆ ತೆಗೆದುಕೊಂಡು ಕನ್ನಡವನ್ನು ಶ್ರೀಮಂತ ಮಾಡಿದರೆ ಅದು ತಪ್ಪೇನೂ ಆಗುವುದಿಲ್ಲ. ಆದ್ದರಿಂದ 'ಆರಕ್ಷಕ' ಎಂದರೆ ಕಳ್ಳರೂ ಓಡಿಹೋಗುವುದಿಲ್ಲ. ಪೋಲೀಸಿನವರು ಬರುತ್ತಾರೆ ಎಂದರೆ ಯಾದ್ವಾತದ್ವಾ ಓಡಿಹೋಗುತ್ತಾರೆ. ಆರಕ್ಷಕ ಎಂದರೆ ಕನ್ನಡದಲ್ಲಿ ಇದು ರಕ್ಷಣೆ ಮಾಡದಿರುವವನು ಎಂದು ಆಗುತ್ತದೆ.

ಶ್ರೀ ಸಿ.ಆರ್. ಸಗೀರ್ ಆಹಮದ್ : ರಾಜಣ್ಣನವರು ಬ್ರಿಟಿಷರ ಜತೆಗೆ ಇಂಗ್ಲೀಷ್‌ಕಲಿತವರು. ಆದ್ದರಿಂದ ಆ ಪದಕ್ಕೆ ಇಂಗ್ಲೀಷಿನಲ್ಲಿ ಏನು ಹೇಳುತ್ತಾರೆ ಎಂದು ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಆ ಮೇಲೆ ಸರ್ಕಾರದ ಕೈಗಾರಿಕಾ ನೀತಿ. ಇದು ನಮ್ಮಲ್ಲಿರುವ ಕಾರ್ಖಾನೆಗಳನ್ನು ಮಾರತಕ್ಕಂಥಾದ್ದೇ? ಶತಶತಮಾನಗಳಿಂದ ತ್ಯಾಗ ಮಾಡಿದಂಥ ಜನ ಸರ್. ಎಂ. ವಿಶ್ವೇಶ್ವರಯ್ಯನವರ ಕಾಲದಿಂದ, ಕೆ.ಸಿ. ರೆಡ್ಡಿಯವರ ಕಾಲದಿಂದ ನಮ್ಮ ಕರ್ನಾಟಕ ರಾಜ್ಯಕ್ಕೆ ಬಂದಂಥ ಕಾರ್ಖಾನೆಗಳನ್ನು ನಾವು ಇವತ್ತು ಅವರ ಅನುಯಾಯಿಗಳು, ಅವರ ನೆರಳಿನಲ್ಲಿ ಇರತಕ್ಕಂಥವರು ಅದನ್ನು ಮಾರಾಟ ಮಾಡುವುದಕ್ಕೆ ಹೊರಟ್ಟಿದ್ದೇವೆ. ಮೈಸೂರ್‌ಲ್ಯಾಂಪ್ಸ್ ಕಾರ್ಖಾನೆಗೆ 70 ವರ್ಷಗಳ ಇತಿಹಾಸ ಇದೆ. ಸರ್.ಎಂ. ವಿಶ್ವೇಶ್ವರಯ್ಯ ಅವರ ಕೃಪೆಯಿಂದ ಆದಂಥ ಕಾರ್ಖಾನೆ ಮೈಸೂರು ಲ್ಯಾಂಪ್ಸ್ ಪ್ರಪಂಚದಲ್ಲೇ ಉತ್ತಮವಾದಂಥ ಒಂದು ದೊಡ್ಡ ಲ್ಯಾಂಪ್ಸ್ ತಯಾರು ಮಾಡತ್ಕಂಥ ಕಾರ್ಖಾನೆಯನ್ನು ವ್ಯವಸ್ಥಿತ ರೀತಿಯಲ್ಲಿ ಉತ್ತಮವಾದ ಅಧಿಕಾರಿಯನ್ನು ಹಾಕದೆ ಆರಾರು ತಿಂಗಳಿಗೆ, ಮೂರು ಮೂರು ತಿಂಗಳಿಗೆ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ಹಾಕುತ್ತಾರೆ. ಈ ಕಾರ್ಖಾನೆ ಎಷ್ಟು ಸತ್ತು ಸೊರಗುತ್ತಿದ್ದರೂ ಕೂಡ ಐ.ಎ.ಎಸ್. ಅಧಿಕಾರಿಗಳ ಕಾರು ತಪ್ಪುವಹಾಗಿಲ್ಲ. ಅವರ ಬಂಗಲೆ ತಪ್ಪುವಹಾಗಿಲ್ಲ. ಸಂಬಳ ತಪ್ಪುವಹಾಗಿಲ್ಲ, ಅವರ ಮನೆಯವರ ಕಾರು ತಪ್ಪುವಹಾಗಿಲ್ಲ. ಅವರು ಪೂಜೆಗೆ ಹೋಗುವುದಕ್ಕೆ ಕಾರು ತಪ್ಪುವಹಾಗಿಲ್ಲ. ಆದರೆ ಈ ಕಾರ್ಖಾನೆ ಮಾತ್ರ ಸಾಯುತ್ತಿರುವುದು ಒಳ್ಳೆಯದಲ್ಲ. ನಾನು ಹೇಳುತ್ತೇನೆ ಧಕ್ಷ ಅಧಿಕಾರಿಗಳ ಕೊರತೆ ನಮ್ಮಲ್ಲಿಏನೂ ಇಲ್ಲ. ಪ್ರಾಮಾಣಿಕ ಧಕ್ಷ ಅಧಿಕಾರಿಗಳ

ಕೊರತೆ ನಮ್ಮಲ್ಲಿ ಇಲ್ಲ. ಐ.ಎ.ಎಸ್, ಐ.ಪಿ.ಎಸ್ ಧಕ್ಷ ಅಧಿಕಾರಿಗಳು ನಮ್ಮಲ್ಲಿಇದ್ದಾರೆ. ಅವರಲ್ಲಿ ಸಮರ್ಥರಾದವರು ಇದ್ದಾರೆ. ಅವರನ್ನು ನೀವು ಮೈಸೂರ್ ಲ್ಯಾಂಪ್ಸ್ ಕಾರ್ಖಾನೆಗೆ ಹಾಕಿ. ಈ ಕಾರ್ಖಾನೆಯ ಬಲ್ಬ್‌ಗಳಿಗೆ ಬೇಡಿಕೆ ಇಡೀ ದೇಶದ ಉದ್ದಗಲಕ್ಕೆ ಇವತ್ತು ಇದೆ. ಈ ಬೇಡಿಕೆಯನ್ನು ಪೂರೈಸುವುದಕ್ಕೆ ಆಧುನಿಕವಾದಂಥ ಯಂತ್ರೋಪಕರಣಗಳನ್ನು ಕೊಟ್ಟು ಪ್ರಾಮಾಣಿಕವಾಗಿ ಮಾಡಿದರೆ ಮೈಸೂರು ಲ್ಯಾಂಪ್ಸ್ ಕಾರ್ಖಾನೆ ಬಹಳ ಪ್ರಾಮಾಣಿಕವಾಗಿ, ಚೆನ್ನಾಗಿ ನಡೆಯುತ್ತದೆ ಎಂಬ ಮಾತನ್ನು ನಾನು ತಮಗೆ ಹೇಳುತ್ತೇನೆ. ಮತ್ತೆ ನೂತನ ವಿದ್ಯುತ್ ಕಾರ್ಖಾನೆ. ಇದು ಅಚ್ಚ ಹದಿನಾರಾಣೆ ಕನ್ನಡ ಕಾರ್ಖಾನೆ. ಈ ನೂತನ ವಿದ್ಯುತ್ ಕಾರ್ಖಾನೆ ಪ್ರಾರಂಭವಾದಾಗ ಅದು ಕರ್ನಾಟಕಕ್ಕೆ ಒಂದು ಕಿರೀಟಪ್ರಾಯವಾಗಿ ಇತ್ತು. ಇವತ್ತು ಅದರ ಪರಿಸ್ಥಿತಿ ಎಷ್ಟು ಅತ್ಯಂತ ನೋವಿನಿಂದ ಕೂಡಿದೆ ಎಂದು ಹೇಳಿದರೆ ನನಗನ್ನಿಸುತ್ತದೆ ಆ ಕಾರ್ಖಾನೆಯನ್ನು ಉಳಿಸುವುದಕ್ಕೆ ನಾವೆಲ್ಲರೂ ಪ್ರಯತ್ನ ಪಡಬೇಕು, ಸರ್ಕಾರ ಪ್ರಯತ್ನ ಪಡಬೇಕು. ಕರ್ನಾಟಕ ಕನ್ನಡಿಗರ ಒಂದು ಕಾರ್ಖಾನೆ ಹೋಗುತ್ತದೆ ಎಂದು ಹೇಳಿದರೆ ಅದು ಅತ್ಯಂತ ಕಣ್ಣೀರಿನ ಕತೆ. ಅನೇಕ ಜನ ಸಾಹಿತಿಗಳು ಅಲ್ಲಿ ಇದ್ದು ಕೆಲಸ ಮಾಡಿದ್ದಾರೆ. ತಮಗೆ ನಾನು ಹೇಳುತ್ತೇನೆ. ಈಗ ಅಲ್ಲಿ ಘೋರಿ ಎನ್ನುವವರು ವ್ಯವಸ್ಥಾಪಕ ನಿರ್ದೇಶಕರು.

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ : ಮಾನ್ಯ ವಾಟಾಳ್‌ರವರು ಅಷ್ಟು ಶುದ್ದವಾಗಿ ಕನ್ನಡ ಮಾತನಾಡುವವರು. ಆದರೆ, ಅವರು ಘೋರಿ ಅಲ್ಲ, ಘೋರೆ.

ಶ್ರೀ ವಾಟಾಳ್‌ನಾಗರಾಜ್ : ನಾನು ಉದ್ದೇಶಪೂರ್ವಕವಾಗಿ ಅವರನ್ನು ಘೋರಿ ಎಂದು ಹೇಳಿದೆ. ನನಗೆ ಕನ್ನಡ ಗೊತ್ತಿಲ್ಲವೆಂದಲ್ಲ. ಆ ಘೋರೆ ಅಲ್ಲಘೋರಿ ಮಾಡಿದ್ದಾರೆ. ಈ ಘೋರೆ ಹೋಗಿ, ಆ ನೂತನ ವಿದ್ಯುತ್ ಕಾರ್ಖಾನೆಯನ್ನು ಘೋರಿ ಮಾಡಿದ್ದಾರೆ. ಆದ್ದರಿಂದ ನಾನು ಆ ಘೋರೆ ವ್ಯವಸ್ಥಾಪರಿಗೆ ಘೋರಿ ಎಂದು ಕರೆಯುವುದು ನನ್ನದು. ಮಾನ್ಯ ವಿಜಯ ಘೋರಿಯವರು ಇಲ್ಲಿಯುವರೆಗೆ ಕರ್ನಾಟಕ ಆಗ್ರೋ ಇಂಡಸ್ಟ್ರೀಯಲ್ಲಿದ್ದರು. ಗೌರಿಬಿದನೂರು ಸಕ್ಕರೆ ಕಾರ್ಖಾನೆಯಲ್ಲಿದ್ದರು, ಗಂಗಾವತಿ ಸಕ್ಕರೆ ಕಾರ್ಖಾನೆಯಲ್ಲಿದ್ದರು. ಕರ್ನಾಟಕ ಸಿಲ್ಕ್ ಇಂಡಸ್ಟ್ರೀಯಲ್ಲಿದ್ದರು. ಆಮೇಲೆ ಎಲೆಕ್ಟ್ರಿಕಲ್ ಇಂಡಸ್ಟ್ರೀಯಲ್ಲಿದ್ದರು. ಮೈಸೂರು ಪೇಪರ್ ಮಿಲ್ಸ್‌ನಲ್ಲಿದ್ದರು. ವಿದ್ಯುತ್ ಮಂಡಲಿಯಲ್ಲಿ ಇದ್ದರು. ಮತ್ತು ಇನ್ನೂ ಅನೇಕ ಕಾರ್ಖಾನೆಗಳಲ್ಲಿದ್ದು, ಅವೆಲ್ಲವನ್ನೂ ಗುಡಿಸಿ ಗುಂಡಾಂತರ ಮಾಡಿ, ಆ ಕಾರ್ಖಾನೆಗಳೆಲ್ಲವನ್ನೂ ಮುಚ್ಚಿ, ಆ ಕಾರ್ಖಾನೆಗಳನ್ನು ತೆಗೆದು, ಎಲ್ಲವನ್ನೂ ಶವ ಪೆಟ್ಟಿಗೆಗೆ ತುಂಬಿ, ಪ್ರತಿಯೊಂದು ಶವಪೆಟ್ಟಿಗೆಯ ಮೇಲೆ ಮೊಳೆಯನ್ನು ಹೊಡೆದು ಘೋರಿಯನ್ನು ಮಾಡಿದ್ದಾರೆ ಶ್ರೀಮಾನ್ ಘೋರೆರವರು.

ಉಪಾಧ್ಯಕ್ಷರು: ಅವರ ಹೆಸರನ್ನು ಹೇಳುವುದು ಬೇಡ, ಅವರ ಡಿಸಿಗ್ನೇಷನ್ ಹೇಳಿದರೆ ಸಾಕು.

ಶ್ರೀ ವಾಟಾಳ್ ನಾಗರಾಜ್ : ಅವರು ಈಗ ನೂತನ ವಿದ್ಯುತ್ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಾಗಿದ್ದಾರೆ. ಇವರೇನೂ ಕಡಿಮೆ ಮಾಡಿಲ್ಲ. ನಾವು ರಾಜಕಾರಣಿಗಳ ಆಸ್ತಿ ತನಿಖೆಯಾಗಬೇಕೆಂದು ಹೇಳುತ್ತೇವೆ. ಶಾಸಕ ಆದತಕ್ಷಣ, ಆಸ್ತಿ ತನಿಖೆಯಾಗಬೇಕು. ಮತ್ತು ಲೋಕಾಯುಕ್ತಕ್ಕೆ ಲೆಕ್ಕ ಕೊಟ್ಟಿಲ್ಲ, ಆದ್ದರಿಂದ, ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಬೇಕು. ಇವರನ್ನು ನಾವು ಪತ್ರಿಕೆಗಳಲ್ಲಿ ಹಾಕಬೇಕು. ರಾಜಕಾರಣಿ ಎಂದ ತಕ್ಷಣ ಒಂದು ರೀತಿ ಮುಖವನ್ನು ಮುರಿದು, ಇವೆರೆಲ್ಲರಿಗಿಂತಲೂ ರಾಜಕಾರಣಿಗಳೆನ್ನುವವರು ಅತ್ಯಂತ ಕನಿಷ್ಟ ಶಾಸಕರು ಕನಿಷ್ಟ, ಕನಿಷ್ಟ, ಇವರು

ಕೆಲಸಕ್ಕೆ ಬಾರದ ಜನ ಎನ್ನುವ ಗೂಬೆಯನ್ನು ರಾಜ್ಯಾದ್ಯಂತ ರಾಷ್ಟ್ರಾದ್ಯಂತ ಕೂಡಿಸಿದ್ದಾರೆ. ಐ.ಎ.ಎಸ್, ಐ.ಪಿ.ಎಸ್ ಅಧಿಕಾರಿಗಳು ಕೆಲವರು ಎಷ್ಟೆಷ್ಟು ಬೋರ್ಡ್‌ಗಳಲ್ಲಿ ಸದಸ್ಯರಾಗಿದ್ದಾರೆ. ಎಷ್ಟೆಷ್ಟು ವಿದೇಶಗಳಿಗೆ ಪ್ರವಾಸ ಮಾಡಿದ್ದಾರೆ. ಅವರು ತೆಗೆದುಕೊಂಡಿರತಕ್ಕ ಭತ್ಯೆ ಎಷ್ಟು? ಅವರು ಮಾಡಿರತಕ್ಕ ವ್ಯವಸ್ಥೆ ಎಷ್ಟು? ಜೊತೆಗೆ ಅವರು ಗಳಿಸಿರತಕ್ಕ ಆಸ್ತಿ, ಇವತ್ತಿನವರೆಗೂ ಯಾರದೂ ಪ್ರಕಟಣೆಯಾಗಿಲ್ಲ. ನಮ್ಮ ರಾಜ್ಯದಲ್ಲಿ, ಬೇರೆ ರಾಜ್ಯದಲ್ಲಿ ಅವರು ಕೈ ಗೊಂಡಿರತಕ್ಕ ಆಸ್ತಿ, ಎಲ್ಲೆಲ್ಲಿ ಮನೆಗಳು, ಎಲ್ಲೆಲ್ಲಿ ವ್ಯವಸ್ಥೆಗಳು, ಈ ದೇಶದಲ್ಲಿ ಯಾವುದಾದರೊಂದು ಇದರ ಬಗ್ಗೆ ಸಮಗ್ರ ತನಿಖೆಯಾಗಬೇಕಲ್ಲಾ ಪ್ರಜಾತತಂತ್ರ ವ್ಯವಸ್ಥೆಯಲ್ಲಿ ನಾವು ಶಾಸಕರು ಸಿಕ್ಕಿದ್ದೇವೆ. ರಾಜಕಾರಣಿಗಳು ಸಿಕ್ಕಿದ್ದೇವೆ. ಲೋಕಾಯುಕ್ತಕ್ಕೆ ಕೊಡಲಿಲ್ಲವೆಂದು ಅರ್ಜಿ ಸಲ್ಲಿಸಿ ಮತ್ತು ಮಂತ್ರಿಯಾದವರು ಮನೆಯಲ್ಲಿ ಯಾವುದೋ ಒಂದು ಕುರ್ಚಿ, ಯಾವುದೋ ಕಾಲದಲ್ಲಿ ......

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರದಲ್ಲಿ ನಾನು ತಕರಾರು ತೆಗೆಯತಕ್ಕ ಪ್ರಶ್ನೆಯಿಂದಾಗಿ ನಾನು ಇಲ್ಲಿ ನಿಂತುಕೊಂಡಿಲ್ಲ. ಆದರೆ, ಸಾರಾಸಗಟಾಗಿ ಐಎಎಸ್ ಅಫೀಸರುಗಳು ಐಪಿಎಸ್ ಅಫೀಸರುಗಳು, ಅವರಿಗೆ ಅಕೌಂಟಬಿಲಿಟಿ ಇಲ್ಲವೆನ್ನುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ, ಯಾವುದೇ ಒಬ್ಬ ಅಧಿಕಾರಿಗೂ ಸಹಿತ, ಯಾವುದೇ ಒಂದು ಸೈಟ್ ತೆಗೆದುಕೊಳ್ಳಬೇಕಾದರೆ, ಯಾವುದೇ ಒಂದು ಮನೆ ತೆಗೆದುಕೊಳ್ಳಬೇಕಾದರೆ , ಒಂದು ಕಾರು ತೆಗೆದುಕೊಳ್ಳಬೇಕಾದರೆ, ಅಥವಾ ಒಂದು ಸಾಲ ತೆಗೆದುಕೊಳ್ಳಬೇಕಾಗದರೂ ಸಹಿತ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಂದ ಪರವಾನೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವರದೆಲ್ಲಾ ಅಕೌಂಟಬಿಲಿಟಿ ಇರುತ್ತದೆ. ತಾವು ಏನು ಹೇಳುತ್ತಿದ್ದೀರಿ ಎಂದರೆ, ಯಾರೋ ಒಬ್ಬ ಅಧಿಕಾರಿ ಹೆಸರನ್ನು ತೆಗೆದುಕೊಂಡು ಮಾತನಾಡುತ್ತಿದ್ದೀರಿ. ಈಗ ಅವರು ಇಲ್ಲಿಬಂದು, ಹೌಸನಲ್ಲಿಡಿಪೆಂಡ್ ಮಾಡಿಕೊಳ್ಳುವುದಾಕ್ಕಾಗುವುದಿಲ್ಲ. ಆದರಿಂದಾಗಿ ನೇರವಾಗಿ ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಹೀಗೀಗೆ ಮಾಡಿದ್ದಾರೆ, ಇಂತಹವರ ಆಸ್ತಿ ಏನೇನಿದೆ ಅದಕ್ಕೆ ಸಂಬಂಧಪಟ್ಟದ್ದಕ್ಕಿಂತ ಹೊರತಾಗಿ ಏನೇನಿದೆ ಎಂದು ನೀವು ಕೇಳಿದರೆ ಅದನ್ನು ಸರ್ಕಾರದ ಪರವಾಗಿ ಕೊಡಲಿಕ್ಕೂ ಸಹಿತ ಅನುಕೂಲವಾಗುತ್ತದೆ. ಇಲ್ಲದೇಹೋದರೆ, ನೀವು ಯಾರದೋ ಒಂದು ಹೆಸರನ್ನು ಹೇಳಿ, ಅದಕ್ಕೆ ಸಂಬಂಧಪಟ್ಟಾಗೆ, ಅದರ ನೆರಳಲ್ಲಿ ಬೇರೆ ವಿಚಾರಗಳನ್ನೆಲ್ಲಾ ಹೇಳಿದಾಗ ಅವರಿಗೆ ತೊಂದರೆಯಾಗುತ್ತದೆಂಬ ದೃಷ್ಟಿಯಿಂದಾಗಿ ಹೇಳುತ್ತಿದ್ದೇನೆ. ತೊಂದರೆ ಎಂದರೆ ಗೌರವದ ಪ್ರಶ್ನೆಯಿಂದ ತೊಂದರೆಯಾಗುತ್ತದೆಂದು ಹೇಳುತ್ತೇನೆ. ತಾವು ಹೇಳುರುವುದರಲ್ಲಿ ಸತ್ಯಾಂಶ ಇಲ್ಲವೆಂದು ನಾನು ಅಲ್ಲಗಳೆಯುತ್ತಾ ಇಲ್ಲ. ತಾವು ಹೇಳಿರತಕ್ಕ ವಿಚಾರದಲ್ಲಿ ಇದೆ. ಎಲ್ಲಾದಕ್ಕೂ ಸಹಿತ ರಾಜಕಾರಣಿಗಳೇ ಭ್ರಷ್ಟರು, ಮಂತ್ರಿಗಳು ಎಂದರೆ ಹೀಗೆ ಶಾಸಕರು ಎಂದರೆ ಹೀಗೆ, ರಾಜಕೀಯ ಮುಖಂಡರು ಎಂದರೆ ಹೀಗೆ ಎನ್ನತಕ್ಕ ಭಾವನೆ ಇದೆ ಆದರೆ, ಆ ಭಾವನೆ ದೈವವಶಾತ್, ನಮ್ಮ ಪ್ರಜಾತಂತ್ರದಲ್ಲಿ ಬಲಿಷ್ಟವಾಗುತ್ತಾ ಇದೆ. ನಾವು ಎಷ್ಟೇ ಇಲ್ಲಿ ಏನೇ ಮಾಡಿಕೊಂಡರೂ ಸಹಿತ, ನನ್ನ ಒಂದು ಸ್ವಂತ ಅನುಭವದಲ್ಲಿ ಬಲಿಷ್ಟ ಆಗುತ್ತಾ ಇದೆ. ಜನಗಳ ತಿಳಿವಳಿಕೆ ಹೆಚ್ಚಾಗುತ್ತಾ ಇದೆ. ಕೇವಲ ರಾಜಕಾರಣಿಗಳು, ಮುಖಂಡರು, ಮಂತ್ರಿಗಳಷ್ಟೇ ಅಲ್ಲ, ನಮ್ಮ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಸಹಿತ, ಎಲ್ಲಾ ಸ್ತರಗಳಲ್ಲೂ ಇರತಕ್ಕಂಥ ಪ್ರಮುಖರ ಬಗ್ಗೆ ಜನಗಳು ಅಕೌಂಬಿಲಿಟಿಯನ್ನು ಅಪೇಕ್ಷೆ ಮಾಡುತ್ತಿದ್ದಾರೆ.

ಶ್ರೀ ವಾಟಾಳ್‌ನಾಗರಾಜ್: ನಾನು ಮಾನ್ಯ ಸಿಂಧ್ಯರವರಿಗೆ ಹೇಳುತ್ತೇನೆ. ತಾವು ಈಗ ಪೋಲೀಸ್ ಮಂತ್ರಿಯಾಗಿದ್ದೀರಿ.

ಶ್ರೀ ಪಿ.ಜಿ. ಆರ್. ಸಿಂಧ್ಯ : ನಾನು ಪೋಲೀಸ್ ಮಂತ್ರಿಅಲ್ಲ. ಗೃಹ ಮಂತ್ರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಿಂಧ್ಯಸಾಹೇಬರು ಕೊಟ್ಟಂಥ ಸಲಹೆ ಹೇಗಿದೆ ಎಂದರೆ, ಹಾವೂ ಸಾಯಬಾರದು, ಕೋಲೂ ಮುರಿಯಬಾರದು. ನಮ್ಮ ಕಡೆ ಹೇಳುತ್ತಾರೆ. ಶಹಪೂರ್ ನ್ಯಾಯ ಅಥವಾ ಬಾಂಬೆ ಕರ್ನಾಟಕ ಹಾವೇರಿ ನ್ಯಾಯ ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ಆ ಕಡೆ ಇದ್ದಾಗ, ಅವರು ನನಗಿಂತ ಜಾಸ್ತಿ ಇದನ್ನು ಹೇಳಿದ್ದಾರೆ. ನಾನು ಹೇಳದೇ ಹೋಗಿದ್ದರೆ, ಅಧಿಕಾರಿಗಳಿಗೆ, there is nobody in the Government to defend you people ಎಂದು ಹೇಳಿಬಿಡುತ್ತಿದ್ದರು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಿಂಧ್ಯರವರೂ ಕೂಡ ಈ ಕಡೆ ಅಂದರೆ ನಮ್ಮ ಕಡೆ ಇದ್ದರು. ಅವರ ಭಾಷಣ ತೆಗೆದು ನೋಡಿದರೆ ಗೊತ್ತಾಗುತ್ತದೆ. ಈಗ ಅವರ ಪಾತ್ರ ಬೇರೆ ಆದ್ದರಿಂದ, ಆ ಪಾತ್ರಕ್ಕೆ ತಕ್ಕಂತೆ ಮಾಡಬೇಕಲ್ಲಾ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಪಾತ್ರಗಳನ್ನು ಮಾಡುತ್ತೇನೆ, ಅದರಲ್ಲೇನೂ ಸಂಶಯ ಇಲ್ಲ. ನಾನು ಚಿಕ್ಕ ವಯಸ್ಸಿನಿದಲೂ ಸಹಿತ ನಾಟಕಗಳಲ್ಲಿ ಭಾಗವಹಿಸುತ್ತೇನೆ. ಇವತ್ತಿಗೂ ಮಂತ್ರಿಯಾಗಿ ಇಂದ್ರನ ಪಾತ್ರ, ದುರ್ಯೋಧನ ಪಾತ್ರ, ದೃತರಾಷ್ಟ್ರನ ಪಾತ್ರ ಇವೆಲ್ಲಾ ಮಾಡುತ್ತೇನೆ. ಆದರೆ, ಇಲ್ಲಿ ನಾಟಕ ಮಾಡುತ್ತಾ ಇಲ್ಲ. ಅಲ್ಲಿ ಕುಳಿತುಕೊಂಡು ಏನು ಮಾತನಾಡಿದ್ದೇನೆ. ಸಲ್ಪ ಹೆಚ್ಚು ಕಡಿಮೆ ಅದನ್ನೇ ಇಲ್ಲಿಯೂ ಮಾತನಾಡಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ವಾಟಾಳ್ ನಾಗರಾಜರು, ಸಿಂಧ್ಯರವರು, ಬೈರೇಗೌಡರು ಈ ಕಡೆ ಕುಳಿತಾಗ ಬಹಳಷ್ಟು ಹೇಳುತ್ತಿದ್ದರು. ಈಗ ಆ ಕಡೆ ಹೋದಮೇಲೆ ಹೇಳುತ್ತಾ ಇಲ್ಲ. ಅವರೇನೋ ಸ್ವಲ್ಪ ಸ್ವಲ್ಪ ಹೇಳುತಾ ಇದ್ದಾರೆ. ಏಕೆಂದರೆ, ಈಗ ಕಾಂಪ್ರಮೈಸಿಂಗ್ ಫಾರ್ಮುಲಾ ನೋಡಿ. ಏಕೆಂದರೆ, ಅವರಿಗೆ ಬೇಕಾದವರೆಲ್ಲರೂ ಆ ಕಡೆ ಹೋಗಿದ್ದಾರೆ. ಇವರು ಅಲ್ಲಿಯೇ ಇದ್ದಾರೆ. ಹೀಗಾಗಿ, ಡಿಪೆಂಡ್ ಮಾಡಿಕೊಳ್ಳುವುದಕ್ಕೆ ಅವರಿಗೂ ಕಷ್ಟವಾಗುತ್ತಿದೆ. ಅದರೆ ನಮಗೇನಾಗಿದೆ, ನಾಟಕ ಬರೆಯತಕ್ಕಂಥ ಲೇಖಕರೂ ಅಲ್ಲಿಯೇ ಇದ್ದಾರೆ. ನಾಟಕದಲ್ಲಿ ಪಾತ್ರವಹಿಸುವವರೂ ಅಲ್ಲಿಯೇ ಇದ್ದಾರೆ. ಅಂದಾಗ, ನಾಟಕ ಕಂಪನಿಯ ಮಾಲೀಕರು ಸ್ವಲ್ಪ ರೆಸ್ಟ್ ತೆಗೆದುಕೊಳ್ಳುತ್ತಿದ್ದಾರೆ. ಹೀಗಾಗಿ ನಿಮ್ಮ ನಾಟಕ ಚೆನ್ನಾಗಿದೆ, ನಡೆಯಲಿ.

ಶ್ರೀ ಎಂ. ಪಿ. ಪ್ರಕಾಶ್ : ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇಂದಿರಾಗಾಂಧಿ ಕೃಪಾಘೋಷಿತ ನಾಟಕ ಮಂಡಳಿ ಎಂದು ಮೊದಲು ಪ್ರಸ್ತಾಪ ಮಾಡಿದವರು ಯಾರು ಎಂಬುದು ತಮಗೆ ಗೊತ್ತಿದೆ ಹಿಂದಿನ ಮುಖ್ಯಮಂತ್ರಿಗಳು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮ್ಮದು ಕೃಪಾಘೋಷಿತ ನಾಟಕ ಮಂಡಳಿಯೂ ಅಲ್ಲ ಏನೂ ಅಲ್ಲ. ನೀವು ಅಸೂಯೆಯಿಂದ ಅಥವಾ ಸಿಟ್ಟಿನಿಂದ, ರಿಪ್ರಜುಡೀಸ್‌ನಿಂದ ಹೇಳಿರಬೇಕೇ ಹೊರತಾಗಿ ನಾವು ಯಾರೂ ಕೂಡ ಹೇಳಿಲ್ಲ. ನೀವೇ ಹೇಳಿಕೊಂಡಿದ್ದೀರಿ. ಅವರು ಹೇಳುತ್ತಾರೆ ನಾನೇ ಡೈರೆಕ್ಟರು ಎಂದು ಎಂದು ಯಾರು ಹೇಳುತ್ತಾರೆ, ಕಂಪನಿ ಮಾಲೀಕರು ಶ್ರೀಮಾಲ್ ಜೆ ಹೆಜ್ ಪಟೇಲರು. ಇವರಿಗೆ ನಾಟಕ ಬರೆಯತಕ್ಕಂಥ ಹವ್ಯಾಸ ಇದೆ, ಅನೇಕ ನಾಟಕಗಳನ್ನು ಬರೆದುಕೊಡುತ್ತಾರೆ. ಇವರು

ಬರೆದಂಥ ನಾಟಕದ ಪ್ರಕಾರ ಆಕ್ಟ್ ಮಾಡತಕ್ಕಂತಾದ್ದು ಸಿಂಧ್ಯರವರದಾಗಲೀ ಬೇರೆ ಅನೇಕ ಮಂತ್ರಿ ಮಂಡಲದಲ್ಲಿ ಇದು ನಡೆದಿದೆ. ಇದು ತಮಗೂ ಗೊತ್ತಿದೆ.

ಶ್ರೀ ಸಿ. ಆರ್. ಸಗೀರ್ ಅಹಮದ್: ಇವರ ನಾಟಕ ಮಂಡಳಿಯಲ್ಲಿ ಯಾರ್‍ಯಾರು ಯಾವ್ಯಾವ ಪಾತ್ರ ಹಾಕಬೇಕೆನ್ನುವುದರ ಬಗ್ಗೆ ಅಭಿಪ್ರಾಯಗಳಿರುವಂತಾದ್ದು ಸಾರ್ವಜನಿಕರಿಗೆ ಗೊತ್ತಿದೆ

ಶ್ರೀ ಎಂ.ಪಿ.ಪ್ರಕಾಶ್ : ನಿಜ ಜೀವನದಲ್ಲಿ ಅವರದ್ದು ನಾಟಕ, ಅದಕ್ಕಾಗಿ ಕೃಪಾಘೋಷಿತ ನಾಟಕ ಮಂಡಳಿ ಎಂದು ಅವರು ಅಧಿಕೃತವಾಗಿ ಘೋಷಣೆ ಮಾಡಿಕೊಂಡಿದ್ದರು. ನಮ್ಮದು ಬರೀ ಬಣ್ಣ ಹಚ್ಚಿಕೊಂಡು ಮಾತನಾಡತಕ್ಕಂಥ ಮೂರು ಕಾಸಿನ ನಾಟಕ. ಅದರೂ ಅನೇಕ ಸಂದರ್ಭದಲ್ಲಿ ಅಸಂಗತ ನಾಟಕಗಳೂ ಕೂಡ ಆಗಿರತಕ್ಕಂತಾದ್ದು. ಅದರೆ, ನಮ್ಮಲ್ಲಿರತಕ್ಕ ಪ್ರತಿಯೊಬ್ಬ ನಟರೂ ಕೂಡ ಬಹಳ ಪ್ರತಿಭಾನ್ವಿತರಾಗಿದ್ದಾರೆ. ಮತ್ತು ಅವರು ಸಾಹಿತ್ಯದ ಪ್ರಕಾರ ಮಾಡುವುದಿಲ್ಲ ನಮ್ಮ ಕುಂಬ್ಳೆ ಸುಂದರರಾಯರು ಇದ್ದಹಾಗೆ. ತತ್‌ಕ್ಷಣದಲ್ಲಿಯೇ ಅವರು ಡೈಲಾಗ್ ಮಾಡಬಹುದು. ವೀರಪ್ಪ ಮೊಯಿಲಿ ಯವರೂ ಯಕ್ಷಗಾನದಲ್ಲಿ ಪಾತ್ರ ಮಾಡಿದವರು. ಅಲ್ಲಿ ಹಾಡುಗಳು ಇರುತ್ತವೆ. ಕಥಾಹಂದರ ಇರುತ್ತದೆ. ಆದರೆ, ಮಾತುಗಾರಿಕೆ ಅವರೇ ಸೃಷ್ಟಿ ಮಾಡಿಕೊಳ್ಳುತ್ತಾರೆ. ಹಾಗೆ ನಮ್ಮಲ್ಲಿರತಕ್ಕವರೆಲ್ಲರೂ ಸತತವಾಗಿರತಕ್ಕ ಪ್ರತಿಭಾವಂತ ನಟರು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ಪ್ರತಿಭಾನ್ವಿತ ನಟರಿರುವುದರಿಂದಲೇ ಎಲ್ಲರಿಗೂ ದುರ್ಯೋಧನ ಪಾತ್ರ ಬೇಕೇಂದೇ ಫೈಟಿಂಗ್ ನಡೆಯುತ್ತಾ ಇದೆ.

ಶ್ರೀ ಮತಿ ಲೀಲಾದೇವಿ ಆರ್ ಪ್ರಸಾದ್ : ಈ ಬಾರಿ ಶಾಸಕರ ದಿನಾಚರಣೆಯಲ್ಲಿ ಯಾರು ಯಾರಿಗೆ, ಯಾವ ಯಾವ ಪಾತ್ರ ಬೇಕೋ ಕೊಟ್ಟು ಪೂರೈಸೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ನಿಮ್ಮ ನಾಟಕ ಕಂಪನಿಯೇ ದಿವಾಳಿ ಏಳುತ್ತಾ ಇದೆ. ಯಾರಿಗೆ ಕೊಡುತ್ತೀರಿ.

ಶ್ರೀ ವಾಟಾಳ್ ನಾಗರಾಜ್ : ನಾನು ಇಲ್ಲಿ ಯಾರ ಹೆಸರನ್ನು ಕುರಿತು ಹೇಳುವುದಕ್ಕಿಂತ ಹೆಚ್ಚಾಗಿ, ತಮಗೆ ಗೊತ್ತಿದೆ ಇತ್ತೀಚೆಗೆ ರಾಜಕಾರಣಿಗಳು ಅಂದರೆ ಬಹಳ ಕೆಟ್ಟ ಭಾವನೆ ಇದೆ. ರಾಜಕಾರಣಿ ಅಂದರೆ ಸಾರಾಸಗಟಾಗಿ, ರಸ್ತೆಯಲ್ಲಿ ಮಾತನಾಡುತ್ತಾರೆ. ಎನಿಲ್ಲ ನಿಮ್ಮ ರೋಮಿಗೆ ಒಂದು ಬ್ರಿಫ್ ಕೇಸ್‌ನಲ್ಲಿ ಲೆಟರ್ಸ್ ಇಟ್ಟುಕೊಂಡು ತೆಗೆದುಕೊಂಡು ಬಂದರೆ ಲೆಕ್ಕ ಹಾಕಿರುತ್ತಾರೆ ಒಂದು 42 ಸಾವಿರ ಇರಬೇಕಲ್ಲಾ, ಅದು ವಿಧಾನ ಸೌಧಕ್ಕೆ ಬಂದರೆ 70 ಸಾವಿರ ಆಗಿರುತ್ತದೆ. ಕೆಂಪೇಗೌಡ ರಸ್ತೆಗೆ ಹೋಗುವಷ್ಟರಲ್ಲಿ ಒಂದು ಲಕ್ಷ ಹೇಳಿಬಿಟ್ಟಿರುತ್ತಾರೆ. ಒಳಗೆ ತೆಗೆದುಕೊಂಡು ಹೋದ ಕೊಟ್ಟ ಈ ತರಹ ಗಾಸಿಫ್‌ಗಳು ಈ ತರಹ ವ್ಯವಸ್ಥೆ ಇದು ರಾಜಕಾರಣಿಗಳ ಮೇಲೆ ಅತ್ಯಂತ ಅಪಾಯಕಾರಿಯಾದ ಬೆಳವಣಿಗೆ ಬೆಳೆಯುತ್ತಿದೆ. ಒಬ್ಬ ರಾಜಕಾರಣಿ ವಿದೇಶಕ್ಕೆ ಹೋದರೆ ಸ್ವಾಮಿ ಯಾದ್ವಾತದ್ವಾ ಪತ್ರಿಕೆಗಳಲ್ಲಿ ಬರುತ್ತದೆ. ವಿದೇಶಕ್ಕೆ ಹೋದ ಎಲ್ಲಿಂದ ಬಂತು ದುಡ್ಡು? ಹೇಗೆ ಬಂತು ಅವನ ಹಣೆಬರಹ ಏನು? ಅವನ ಜಾತಕ ಎನು? ಅವನ ಜಾತಕ ಜಾಲಾಡಿ ಬೀದಿಗೆ ಬರುತ್ತದೆ. ಕನಿಷ್ಟ 12 ಬಾರಿ ವಿದೇಶಕ್ಕೆ ಹೋಗಿ ಬರತಕ್ಕಂಥ ಅಧಿಕಾರಿಗಳು ಇದ್ದಾರೆ. ಆ ಅಧಿಕಾರಿಗಳ ಬಗ್ಗೆ ನೀವು ಎಲ್ಲಿಗೆ ಹೋಗಿದ್ದಿರಿ? ಯಾವ ದೇಶಕ್ಕೆ ಹೋದಿರಿ? ಅಲ್ಲಿ ಏನು ಮಾಡಿದಿರಿ? ನೀವು ಏನು ಗಂಟು ತಂದಿರಿ? ನಮ್ಮ ರಾಜ್ಯಕ್ಕೆ

ಏನು ಅನುಕೂಲವಾಯಿತು? ಇವು ಒಂದೂ ಪ್ರಸ್ತಾಪಕ್ಕೆ ಬರಲಿಲ್ಲ. ಎಲ್ಲಾ ಅಪವಾದಕ್ಕೂ ನಮ್ಮನ್ನೇ ಹೊಣೆ ಮಾಡುತ್ತಾರೆ. ಇದಕ್ಕೆ ಸಮಗ್ರವಾಗಿ ಒಂದು ಆಯೋಗವಾಗಲಿ. ಈ ಐಎಎಸ್ ಐಪಿಎಸ್ ಅಧಿಕಾರಿಗಳು ಕೆಲವರು ಬಹಳ ಒಳ್ಳೆಯವರು, ಪ್ರಾಮಾಣಿಕರು ಇದ್ದಾರೆ. ಅದನ್ನು ನಾನು ಅಲ್ಲಗೆಳೆಯವುದಕ್ಕೆ ಹೋಗುವುದಿಲ್ಲ. ದಕ್ಷರು ಇದ್ದಾರೆ. ಅದನ್ನು ಅಲ್ಲಗೆಳೆಯುವುದಕ್ಕೆ ಹೋಗುವುದಿಲ್ಲ ಯಾರ‍್ಯಾರು ಪ್ರಾಮಾಣಿಕವಾಗಿ ಆಸ್ತಿ ಮಾಡಿದ್ದಾರೆ. ಯಾರ‍್ಯಾರು ಅಪ್ರಮಾಣಿಕವಾಗಿ ಆಸ್ತಿಯನ್ನು ಮಾಡಿದ್ದಾರೆ ಅದನ್ನು ನೋಡುವುದಕ್ಕೆ ಒಂದು ಸಮಗ್ರ ತನಿಖೆ ಮಾಡುವ ವ್ಯವಸ್ಥೆಯಾಗಲಿ. ಶಾಸಕರನ್ನು ಮಾತ್ರ ನಾವು ಲೋಕಾಯುಕ್ತಕ್ಕೆ ತಂದಿದ್ದೇವೆ. ಎಲ್ಲಾ ಕೊಡಬೇಕೆಂದು. ನಾವು ಒಂದು ಗುಂಡುಪಿನ್ನಿನ ಲೆಕ್ಕ ಸಹ ಕೊಡಬೇಕು. ನಿನ್ನ ಕೋಟಿಗೆ ಹಾಕಿರುವ ಗುಂಡುಪಿನ್ ಎಷ್ಟು ಎಂಬುದನ್ನು ಬರೆಯಬೇಕು. ನಿನ್ನಲ್ಲಿ ಲೋಟ ಎಷ್ಟು ಇದೆ ಅದನ್ನು ಬರಿಯಬೇಕು ಆ ಲೋಟದಲ್ಲಿ ನೀರು ಎಷ್ಟು ಇದೆ ಅದನ್ನು ಬರೆಯಬೇಕು ಅಲ್ಲಿ. ಅವರು ಕಳುಹಿಸಿರತಕ್ಕಂಥ ಫಾರಂನಲ್ಲಿ. ನಾವು ಅದನ್ನೆಲ್ಲಾ ಬರೆದಿದ್ದೇವೆ. ಅದರೆ ಈ ಪರಿಸ್ಥಿತಿ ಅಧಿಕಾರಿಗಳಿಗೆ ಇಲ್ಲ. ನಮ್ಮದು ಗಾಳಿ ಇದ್ದಂತೆ ಬರಬಹುದು ಹೋಗಬಹುದು. ಆದರೆ 35 ವರ್ಷಗಳ ಕಾಲ ಅಧಿಕಾರದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಅವರು ಅಧಿಕಾರದಲ್ಲಿ ಇದ್ದೇ ಇರುತ್ತಾರೆ. ಅವರ ಬಗ್ಗೆ ನಾವು ಮಾತನಾಡುವಂತಿಲ್ಲ. ವತ್ತು ಎನಾಗಿದೆ ನಮ್ಮ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಧಿಕಾರಿಗಳು ಪಾಳೇಗಾರರಾಗಿದ್ದಾರೆ. ಗೆದ್ದಿರತಕ್ಕಂಥ ಶಾಸಕರು ಕೆಲವರು ದೇವರುಗಳಂತೆ ಇದ್ದಾರೆ. ಕೆಲವರು ಅತ್ಯಂತ ಪ್ರಾಮಾಣಿಕರಾಗಿದ್ದಾರೆ . ಕೆಲವರಂತೂ ಶಾಸಕರೂ ಹೋದರೆ ಅವರ ಮೇಲೆ ಮಾತನಾಡತಕ್ಕಂಥಾದ್ದು, ಕೆಲವು ಮಂತ್ರಿಗಳಿಗೆ ಅವರು ಬಗ್ಗಿಲ್ಲ. ಕೆಲವು ಮಂತ್ರಿಗಳನ್ನು ಅವರು ಗಣನೆಗೆ ತೆಗೆದುಕೊಂಡಿಲ್ಲ. ಕೆಲವು ಮಂತ್ರಿಗಳ ಆದೇಶವನ್ನು ಕಸದ ಬುಟ್ಟಿಗೆ ಹಾಕುತ್ತಾರೆ. ಕೆಲವು ಐಎಎಸ್ ಅಧಿಕಾರಿಗಳು ಈ ಸರ್ಕಾರ ಇನ್ನು ಎಷ್ಟು ದಿವಸ ಇರುತ್ತದೆ. ಇವರು ಇನ್ನು ಎಷ್ಟು ದಿವಸ ಮುಖ್ಯಮಂತ್ರಿಗಳಾಗಿರುತ್ತಾರೆ ಅವರ ಪರಿಸ್ಥಿತಿ ಎನು ಈ ತರಹ ಮಾತನಾಡತಕ್ಕಂಥ ವರ್ಗದಅಧಿಕಾರಿಗಳು ಇವತ್ತಿನದಿವಸ ಇದ್ದಾರೆ. ಇವೆಲ್ಲವನ್ನು ನಾವು ನೋಡಿದಾಗ ಈ ಸದನದಲ್ಲಿಯೇ ಕುಳಿತು ನಾನು ನೋಡುತ್ತೇನೆ, ಕೆಲವು ಜನ ಮಂತ್ರಿಗಳು ಅಧಿಕಾರಿಗಳ ಬಳಿ ಹೋಗುತ್ತಾರೆ, ನಾನು ಬಹಳ ಸಲ ನಮ್ಮ ಸ್ನೇಹಿತರಿಗೆ ಹೇಳುತ್ತಿರುತ್ತೇನೆ. ಮಂತ್ರಿಗಳು ಸ್ವಲ್ಪ ದರ್ಪ ಜೋರಾಗಿ ಇದ್ದರೆ ನಿಂತು ಮಾತನಾಡುತ್ತಾರೆ. ಸ್ವಲ್ಪ ಅಬ್ಬಬ್ಯಾರಿ ಆದರೆ ಕುಳುತುಕೊಂಡೇ ಮಾತನಾಡುತ್ತಾರೆ. ಅವರು ಎದ್ದು ನಿಂತು ಕಿವಿಯಲ್ಲಿ ಹೇಳುವಷ್ಟು ಸೌಜನ್ಯ ಆ ಸೌಜನ್ಯರಹಿತವಾದಂತಾದ್ದು ಈ ಸದನದಲ್ಲಿಯೇ ನಡೆಯುತ್ತದೆ. ನಾನು ಕಣ್ಣಾರೆ ಕಂಡು ನನ್ನ ಸ್ನೇಹಿತರಿಗೆ ಹೇಳಿದ್ದೇನೆ. ಮಂತ್ರಿಗಳ ಹಣೆಬರಹವೇ ಈ ರೀತಿಯಾದರೆ ಶಾಸಕರುಗಳ ಗತಿ ಎನು ಈ ರಾಜ್ಯದಲ್ಲಿ ? ಎಷ್ಟು ಜನ ಶಾಸಕರಿಗೆ ಅಧಿಕಾರಿಗಳು ಗೌರವ ಕೊಡುತ್ತಾರೆ. ಅದ್ದರಿಂದ ನಾವು ಈ ಬಗ್ಗೆ ಶಾಸಕರಿಗೆ ಒಬ್ಬ ಯಾವುದೇ ಉನ್ನತ ಅಧಿಕಾರಿ ಇರಬಹುದು ಚುನಾಯಿತ ಪ್ರತಿನಿಧಿಗಳಿಗೆ ಪ್ರಾಮಾಣಿಕವಾಗಿ ಅವರು ಯಾವುದೇ ಪಕ್ಷದವರಾಗಿರಲಿ, ಅವರು ಒಂದು ಕಾರ್ಯಾಲಯಕ್ಕೆ ಹೋದಾಗ ಅವರಿಗೆ ಕೊಡತಕ್ಕಂಥ ಕನಿಷ್ಟ ಸೌಜನ್ಯ ಅವರು ಮೊದಲು ಕಲಿಯ ಬೇಕೆನ್ನತಕ್ಕಂಥಾದ್ದನ್ನು ತಮ್ಮ ಮೂಲಕ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಇದರ ಜೊತೆಗೆ ಇನ್ನು 8 ತಿಂಗಳಲ್ಲಿ ಶಾಸಕರುಗಳಿಗೆ ಚುನಾವಣೆ ಬರುತ್ತಿದೆ. ನಾನು ಒಂದೇ ಸಮನೆ ಎಲ್ಲಾ ಪಕ್ಷದ ಶಾಸಕರ ಪರವಾಗಿ ಒತ್ತಾಯ ಮಾಡುತ್ತಿದ್ದೇನೆ, ನಾಳೆ ಆಯುವ್ಯಯ ಮಂಡನೆ ಆಗುತ್ತದೆ. ಯಾವುದಾದರೂ ಒಂದು ರೂಪದಲ್ಲಿ ನಮ್ಮ ಶಾಸಕರುಗಳಿಗೆ ಅವರ ವಿವೇಚನೆಯ ದೃಷ್ಟಿಯಿಂದ ಅವರವರ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಈಗ ಲೋಕಸಭೆಯಲ್ಲಿ ಒಂದು ಕೋಟ

ರೂಪಾಯಿ ಕೊಡುತ್ತಿದ್ದಾರೆ. ಒಂದು ಕೋಟಿಯಿಂದ ಈಗ ಎರಡು ಕೋಟಿ ಆಯಿತು. ನಾನು ತಮಗೆ ಕೈ ಮುಗಿದು ಎಲ್ಲಾ ಪಕ್ಷದ ಸದಸ್ಯರ ಪರವಾಗಿ ನಾನು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳಿಗೆ ಮೂರು ಸಲ ಹೇಳಿದ್ದೇನೆ. ತಾವು ಈ ಕೆಲಸವನ್ನು ಮಾಡಿ ತಮಗೆ ಒಂದು ಕೀರ್ತಿ ಬರುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ನಾನು ತಮ್ಮ ಮೂಲಕ ಈ ಮಾತನ್ನು ನಿವೇದನೆ ಮಾಡುತ್ತೇನೆ.

ಶ್ರೀ ಜಗದೀಶ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಮಹಾರಾಷ್ಟ್ರ ಸರ್ಕಾರದಲ್ಲಿ 60 ಲಕ್ಷ ರೂಪಾಯಿಗಳ ಹಣ ಕ್ಷೇತ್ರದ ಶಾಸಕರಿಗೆ ಕೊಡುತ್ತಿದ್ದಾರೆ .

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇವತ್ತು ಏನಾಗಿದೆ ? ನಾನು ತಾಲ್ಲೂಕು ಪಂಚಾಯಿತಿ ವ್ಯವಸ್ಥೆಯನ್ನು ಬೈಯುವುದಕ್ಕೆ ಹೋಗುವುದಿಲ್ಲ. ಜಿಲ್ಲಾ ಪಂಚಾಯಿತಿ ವ್ಯವಸ್ಥೆಯನ್ನು ಬೈಯುವುದಕ್ಕೆ ಹೋಗುವುದಿಲ್ಲ. ವಿಕೇಂದ್ರೀಕರಣ ಆಗಬೇಕು. ಇವೆಲ್ಲವನ್ನೂ ನೋಡಿದಾಗ ನಾವು ಪುರಂದರದಾಸರು ಆಗಿದ್ದೇವೆ. ಕೈಯಲ್ಲಿ ಏನೂ ಇಲ್ಲ. ಖಾಲಿ ಜೋಲಿಗೆ. ಯಾರಿಗೂ ನಾವು ಹಣ ಕೊಡುವಂತಿಲ್ಲ. ಯಾರು ಕೇಳಿದರೂ ಆಹಾರ ಕೊಡುವಂತಿಲ್ಲ. ಶಾಸಕ ಅಂದರೆ ತಂಬೂರಿ ಹಿಡಿದಿಕೊಂಡಿರುವುದು. ಎಲ್ಲಾ ಕೆಲಸ ಗ್ರಾಮ ಪಂಚಾಯಿತಿ.ಎಲ್ಲಾ ಕೆಲಸ ತಾಲ್ಲೂಕು ಪಂಟಾಯಿತಿ. ಎಲ್ಲಾ ಕೆಲಸ ಜಿಲ್ಲಾ ಪಂಚಾಯಿತಿ. ನಾವು ಯಾವುದಾದರೂ ಸಮಾರಂಭಕ್ಕೆ ಹೋದರೆ ನಮಗೆ ವಿಧಿ ಇಲ್ಲದೆ ಶಿಷ್ಟಾಚಾರದ ಪ್ರಕಾರ ಆ ಕ್ಷೇತ್ರದ ಶಾಸಕ ಅದೊಂದು ನಮಗೆ ಮಾನ್ಯ ವೀರೇಂದ್ರಪಾಟೀಲರ ಕಾಲದಲ್ಲಿ ಭದ್ರವಾಗಿ ಆಗಿದ್ದು. ಕನಿಷ್ಟ ಆ ಕ್ಷೇತ್ರದ ಶಾಸಕ ಅಲ್ಲಿಗೆ ಪ್ರಧಾನಿ ಬಂದರೂ ಸಹ ಆ ಕ್ಷೇತ್ರದ ಶಾಸಕ ಅಧ್ಯಕ್ಷತೆ ವಹಿಸಬೇಕೆನ್ನುವುದನ್ನು ಅವರು ಮಾಡಿದರು. ಅವರನ್ನು ನಾವು ನೆನೆದುಕೊಳ್ಳಬೇಕು. ಅದನ್ನು ತಪ್ಪಿಸಿ ಇವತ್ತು ಕೆಲವು ಕ್ಷೇತ್ರಗಳಲ್ಲಿ ಕೆಲವರದಬ್ಬಾಳಿಕೆ. ಮಂತ್ರಿಗಳು ಬಂದರೆ ಅವರದ್ದೇ. ಇಲ್ಲಾ ನಿಮಗೆ ಕೊಡುವುದಕ್ಕೆ ಆಗುವುದಿಲ್ಲ ಎಂದರೆ ಇದು ಎಲ್ಲಿಯಾದರೂ ಉಂಟೆ? ಸಾಧ್ಯವೇ ಇಲ್ಲ. ಅವರು ಯಾವುದೇ ಪಕ್ಷದ ಸದಸ್ಯರಾಗಿರಲಿ ಪಕ್ಷದ ಸದಸ್ಯರೇ ಪ್ರಧಾನ ಮಂತ್ರಿ ಬಂದರೂ ಅಧ್ಯಕ್ಷತೆಯನ್ನು ವಹಿಸ ಬೇಕಾದುದು ಆ ಕ್ಷೇತ್ರದ ಶಾಸಕರ ಹಕ್ಕು ಹೊರತು ಅವರು ಮುಖ್ಯ ಅತಿಥಿಯಲ್ಲ. ನನ್ನ ಕ್ಷೇತ್ರಕ್ಕೆ ಯಾರಾದರೂ ಬಂದರೆ ನಾನು ಮುಖ್ಯ ಅತಿಥಿಯಾಗುವುದಕ್ಕೆ ಸಾಧ್ಯವಿಲ್ಲ. ಬರುವವರು ಅತಿಥಿಗಳೇ ಹೊರತು ನಾನಲ್ಲ. ನಾನು ನನ್ನ ಕ್ಷೇತ್ರದಲ್ಲಿ ಯಜಮಾನ. ಆ ದೃಷ್ಟಿಯಿಂದ ಆ ಕ್ಷೇತ್ರದ ಅಧ್ಯಕ್ಷತೆಯನ್ನು ಆ ಕ್ಷೇತ್ರದ ಶಾಸಕರು ವಹಿಸತಕ್ಕಂಥಾದ್ದನ್ನು ಮಾಡಿದರು ಸಂತೋಷ. ಇದನ್ನು ನಾನು ಬಹಳ ಕಳ ಕಳಿಯಿಂದ......

ಶ್ರೀ ಬಿ.ಬಿ. ಶಿವಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಪ್ರಸ್ತಾಪ ಮಾಡುತ್ತಾ, ಸಭೆಗಳಲ್ಲಿ ಶಾಸಕರು ಅಧ್ಯಕ್ಷರಾಗಿರಬೇಕು. ಚುನಾಯಿತ ಪ್ರತಿನಿಧಿಗಳಿಗೆ ಅಲ್ಲಿ ಪ್ರಾಶಸ್ತ್ಯೆ ಸಿಗಬೇಕು ಎನ್ನುವ ಮಾತನ್ನು ಹೇಳುತ್ತಿದ್ದಾರೆ. ಅದಕ್ಕೂ ಹಿಂದೆ ಪ್ರಸ್ತಾಪ ಮಾಡುತ್ತಾ ನಮ್ಮ ಪರಿಸ್ಥಿತಿಯನ್ನು ಸಹ ವಿವರಿಸಿದ್ದಾರೆ. ಜಿಲ್ಲಾ ಪಂಚಾಯಿತಿ ಸದಸ್ಯ ಒಬ್ಬ ಶಾಸಕ ಇರುವ ಸಭೆಗಳಲ್ಲಿ ಸಾರ್ವಜನಿಕರು ತಮಗೆ ಅರ್ಜಿಗಳನ್ನು ಕೊಟ್ಟಾಗ ಜಿಲ್ಲಾ ಪಂಚಾಯಿತಿ ಸದಸ್ಯನೀವು ಕೊಟ್ಟಿರತಕ್ಕಂಥ ಅರ್ಜಿಯನ್ನು ನೋಡಿದ್ದೇನೆ, ಸದ್ಯಕ್ಕೆ ನಾನು 50 ಸಾವಿರ ರೂಪಾಯಿಗಳ ಹಣವನ್ನು ಮಂಜೂರು ಮಾಡಿಬಿಡುತ್ತೇನೆಂದು ಅವನು ಹೇಳುತ್ತಾರೆ. ಆದರೆ ಆ ಮಾತನ್ನು ಶಾಸಕರು ಹೇಳುವುದಕ್ಕೆ ಆಗುವುದಿಲ್ಲ. ಶಾಸಕ ಅಧ್ಯಕ್ಷನಾಗಿರತಕ್ಕಂಥ ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಸದಸ್ಯ ಹೇಳುತ್ತಾರೆ ನಾನು ಹಣ ಕೊಡುತ್ತೇನೆಂದು, ಆದರೆ ಶಾಸಕರು ಬಾಯಿ ಬಿಡುವುದಕ್ಕೆ ಆಗುವುದಿಲ್ಲ ಇಂತಹ ಪರಿಸ್ಥಿತಿಯಲ್ಲಿ ನಮ್ಮನ್ನು ತಂದು ಇಟ್ಟಿದ್ದಿರಲ್ಲಾ ಏತಕೋಸ್ಕರ?

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ನಾವೆಲ್ಲಾ ಒಗ್ಗಟ್ಟಾಗಿ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡೋಣ ಹಿರಿಯ ಸಚಿವರೆಲ್ಲಾ ಇಲ್ಲಿ ಕುಳಿತಿದ್ದಾರೆ. ಮಾನ್ಯ ಶ್ರೀರಾಮ ರೆಡ್ಡಿಯವರು ತಂಬೂರಿ ಯಾರು ಕೊಟ್ಟರು ಎಂದು ಕೇಳಿದರೆ ಮಾನ್ಯ ಪ್ರಕಾಶ್ ಅವರು ಕೊಟ್ಟರು ಎಂದು ಹೇಳಿದರೆ ತಪ್ಪಾಗಬಹುದು. ಆದರೆ ಪ್ರಕಾಶ್ ಅವರಿಗೆ ನಮಗೆ ತಂಬೂರಿ ಕೊಟ್ಟಿರುವುದು ಅದರಲ್ಲಿ ಏನೂ ಅನುಮಾನ ಇಲ್ಲ. ಮಾನ್ಯ ನಜೀರ್‌ಸಾಬ್‌ರವರು ಮಾನ್ಯ ಎಂ ವೈ ಘೋರ್ಪಡೆಯವರು ಹೊಸ ಹೊಸ ತಂಬೂರಿಗಳನ್ನು ಕೊಟ್ಟಿದ್ದೀರಿ ಅದರಲ್ಲಿ ಏನೂ ಅನುಮಾನ ಇಲ್ಲ.ನಾವು ಬರೀ ತಂಬೂರಿ ಭಾರಿಸುತ್ತೇವೆಯೇ ಹೊರತು ಅದರಿಂದ ನಮಗೆ ಏನೂ ಆಗುತ್ತಿಲ್ಲ. ಆದ್ದರಿಂದ ನಾನು ತಮಗೆ ಹೇಳುತ್ತೇನೆ ಕನಿಷ್ಟ ಒಬ್ಬ ಶಾಸಕರಿಗೆ ಒಂದು ಕೋಟಿ ರೂಪಾಯಿಗಳಂತೆ ಇವತ್ತು 224 ಜನ ಶಾಸಕರಿಗೆ ಪ್ರತಿ ವರ್ಷ ಒಂದು 300 ಕೋಟಿ ರೂಪಾಯಿಗಳನ್ನು ನಮ್ಮ ಎಲ್ಲಾ ಶಾಸಕರುಗಳಿಗೆ ಅವರ ಕ್ಷೇತ್ರಗಳಿಗೆ ವಿವೇಚನಾ ಅನುದಾನವಾಗಿ ನೀಡತಕ್ಕಂಥ ವ್ಯವಸ್ಥೆಯನ್ನು ಮಾಡಿಸಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.ನಾನು ಈ ಸದನದ ಎಲ್ಲಾ ಪಕ್ಷದ ಸದಸ್ಯರ ಪರವಾಗಿ ಕಳಿಕಳಿಯಿಂದ ನಾನು ತಮಗೆ ಮನವಿ ಮಾಡುತ್ತಿದ್ದೇನೆ. ನಾನು ಈ ಹಿಂದೆ ನೂತನ ಸರ್ಕಾರಿ ವಿದ್ಯುತ್ ಕಾರ್ಖಾನೆ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೆ. ಸರ್ಕಾರ ಈ ವಿದ್ಯುತ್ ಕಾರ್ಖಾನೆಯನ್ನು ಮಾರಾಟ ಮಾಡುವುದಕ್ಕೆ ಹೊರಟಿದೆ ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಇದನ್ನು ಖಂಡಿತ ಮಾರಾಟ ಮಾಡುವುದಕ್ಕೆ ಹೋಗಬೇಡಿ. ಅಲ್ಲಿ ಸುಮಾರು 250 ಎಕರೆ ಪ್ರದೇಶ ಅಲ್ಲಿದೆ. ಇವತ್ತು ಅಲ್ಲಿ ಒಂದು ಎಕರೆ ಪ್ರದೇಶವನ್ನು 5 ಕೋಟಿ ರೂಪಾಯಿಗಳಿಗೆ ತೆಗೆದುಕೊಳ್ಳುತ್ತಾರೆ. ಈಗ ಇರತಕ್ಕ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಮಾನ್ಯ ಗೋರೆಯವರು ಯಾವುದೋ ಒಂದು ಎಜನ್ಸಿಗೆ ಒಂದು ಎಕರೆಗೆ ಒಂದು ಕೋಟಿ ರೂಪಾಯಿಗಳಂತೆ ಮಾರಾಟ ಮಾಡತಕ್ಕಂಥ ಪಿತೂರಿ ಇವತ್ತು ನಡೆದಿದೆ. ನೂತನ ವಿದ್ಯುತ್ ಕಾರ್ಖಾನೆಯ ಸಮಗ್ರ ಆಸ್ತಿ ಸುಮಾರು 250 ಎಕರೆ. ಈ ಕಾರ್ಖಾನೆಯ ಆಸ್ತಿಯನ್ನು ಯಾವುದೋ ಒಂದು ಏಜನ್ಸಿಗೆ ಕೊಡುವುದಕೋಸ್ಕರ ಇದರಿಂದ ತಾವು ಭ್ರಷ್ಟಾಚಾರ ನಡೆಸುವುದಕ್ಕೆ ಒಂದು ಎಕರೆಗೆ 5 ಕೋಟಿ ರೂಪಾಯಿಗಳಿಗೆ ಮಾರಾಟ ಮಾಡತಕ್ಕಂಥ ಜಾಗವನ್ನು ಒಂದು ಎಕರೆ ಜಾಗವನ್ನು ಒಂದು ಕೋಟಿ ರೂಪಾಯಿಗಳಿಗೆ ಮಾರಾಟ ಮಾಡಲು ಹೊರಟಿದ್ದಾರೆ. ಇದರ ಬಗ್ಗೆ ಸರ್ಕಾರ ಇವತ್ತು ಗಂಭೀರವಾಗಿ ಚಿಂತನೆ ಮಾಡಬೇಕು.

2.00 ಪಿ.ಎಂ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರೇನು ಹೇಳುತ್ತಿದ್ದಾರೆ . ಇದರಲ್ಲಿ ಸತ್ಯ ಇಲ್ಲ. ಈ ರೀತಿಯ ಪಿತೂರಿಗಳೂ ಇಲ್ಲ, ಆ ತರಹ ಪ್ರಸ್ತಾವನೆಯೂ ಇಲ್ಲ. ಸಚಿವ ಸಂಪುಟದ ಮುಂದೆ ಕೈಗಾರಿಕಾ ಇಲಾಖೆಯವರೇ ಈ ಒಂದು ಹಣಕಾಸು ಮುಗ್ಗಟ್ಟನ್ನು ನಮ್ಮ ಈ ವಿದ್ಯುತ್ ಕಾರ್ಖಾನೆ ಎದುರಿಸುತ್ತಿದೆ , ಆ ಮುಗ್ಗಟ್ಟಿನಿಂದ ಮೇಲುಗಡೆ ಬರಲಿಕ್ಕೆ ಎಂದು ಹೇಳಿ ಅಲ್ಲಿರತಕ್ಕ ಜಮೀನನ್ನು ಮಾರಾಟ ಮಾಡಿ ಅದರಿಂದೇನಾದರೂ ಹಣಕಸನ್ನು ಕೊಟ್ಟು,ಅಲ್ಲಿರತಕ್ಕ ಯಂತ್ರೋಪಕರಣಗಳನ್ನು ಆಧುನೀಕರಣ ಮಾಡಿ, ಹಣಕಾಸಿನ ಪರಿಸ್ಥಿತಿಯನ್ನು ಉತ್ತಮ ಪಡಿಸಲಿಕ್ಕೆ ಮತ್ತು ಅಲ್ಲಿರತಕ್ಕ ನಾಲ್ಕು ಸಾವಿರ ಕಾರ್ಮಿಕರ ಹಿತದೃಷ್ಟಿಯಿಂದಾಗಿ ಅವರಿಗೆ ಅನುಕೂಲ ಮಾಡುವದಕ್ಕೆ ಈ ವಿಚಾರ ಮಾಡಿದ್ದೇವೆಯೇ ಹೊರತು ಯಾವುದೇ ರೀತಿಯ ಪಿತೂರಿ ಇಲ್ಲ ಎನ್ನುವುದನ್ನು ನಾನು ತಮ್ಮ ಮೂಲಕ ಸ್ಪಷ್ಟ ಮಾಡಲು ಇಚ್ಛೆಪಡುತ್ತೇನೆ. ಅದನ್ನು ತೆಗೆದುಕೊಳ್ಳುವವರ ಯಾರೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದು ನಾಲ್ಕು ಕೋಟಿ ರೂಪಾಯಿಗೆ ಹೋಗತಕ್ಕದ್ದನ್ನು ಒಂದು ಕೋಟಿ ರೂಪಾಯಿಗೆ ಮಾರಿದರೆ ಇದು ಪಿತೂರಿ ಅಲ್ಲವಾ? ನಾಲ್ಕು ಕೋಟಿ ರೂಪಾಯಿಗೆ ಹೋಗತಕ್ಕ ಆಸ್ತಿಯನ್ನು ಒಂದು ಕೋಟಿ ರೂಪಾಯಿಗೆ ಮಾರಿದರೆ ಇದು ಪಿತೂರಿನೇ. ಇದು ಬಿಟ್ಟು ಬೇರೆ ಪ್ರಶ್ನೆ ಇಲ್ಲ. ಇದೊಂದು ದೊಡ್ಡ ಭಾರೀ ಪಿತೂರಿ. ಈ ಶತಮಾನದ ಅತ್ಯಂತ ಪ್ರಾಮಾಣಿಕವಾಗಿ ಹೇಳುವುದಾದರೆ, ಈ ಶತಮಾನದಲ್ಲಿ ಆಗತಕ್ಕ ಇದೊಂದು ಘೋರ ಅನ್ಯಾಯ. ಇದಕ್ಕೋಸ್ಕರ ದುಡಿದಂತಹ ಅನೇಕ ಜನ ಇದ್ದಾರೆ. ಈ ಕಾರ್ಖಾನೆಗೋಸ್ಕರ ಅನೇಕ ಜನ ದುಡಿದಿದ್ದಾರೆ. ತಮಗೆ ಹೇಳುತ್ತೇನೆ. ಅಲ್ಲಿರತಕ್ಕ ಪ್ರಾಮಾಣಿಕ ಕನ್ನಡ ಬಲ್ಲ ನೌಕರರನ್ನೆಲ್ಲಾ, ಕಾರ್ಮಿಕರನ್ನೆಲ್ಲಾ ಬೇರೆ ಬೇರೆ ರಾಜ್ಯಕ್ಕೆ ವರ್ಗ ಮಾಡುತ್ತಾರೆ. ಬೇರೆ ರಾಜ್ಯದಲ್ಲಿ ಅವರಿಗೆ ಬೇರೆ ಭಾಷೆ ಬರುವುದಿಲ್ಲ. ಕಡೆಗೆ ಏನಾಗುತ್ತದೆ ? ಅವರು ಸ್ವಯಂ ನಿವೃತ್ತಿ ತೆಗೆದುಕೊಂಡು ಕೊಟ್ಟಷ್ಟು ಸಂಬಳ ತೆಗೆದುಕೊಂಡುಮನೆಗೆ ಹೋಗುವ ಪರಿಸ್ಥಿತಿ ಬಂದಿದೆ. ಆ ಸ್ಥಳಕ್ಕೆ ಈಗ ಇರತಕ್ಕ ಶ್ರೀ ಗೋರೆಯವರು ಗುತ್ತಿಗೆ ಮೇಲೆ ಕೆಲವು ಅಧಿಕಾರಿಗಳನು ನೇಮಕ ಮಾಡಿಕೊಂಡಿದ್ದಾರೆ. ಕನ್ನಡ ನೌಕರರನ್ನೆಲ್ಲಾ ಹೊರಗೆ ಹಾಕತಕ್ಕದ್ದು. ಮತ್ತು ಕನ್ನಡಬಲ್ಲವರನ್ನೆಲ್ಲಾ ವರ್ಗ ಮಾಡತಕ್ಕದ್ದು ಮಾಡುತ್ತಿದ್ದಾರೆ. ಇದರ ಜೊತೆಗೆ ಈ ಕಾರ್ಖಾನೆಗೆ ತಮಗೆ ಬೇಕಾದಂತಹ ಅಧಿಕಾರಿಗಳನ್ನು ತರಿಸಿಕೊಳ್ಳತಕ್ಕದ್ದು. ತಮಗೆ ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಿಂಧ್ಯರವರೇ, ತಾವೆಲ್ಲಾ ಸಾಕಷ್ಟು ಅನುಭವ ಇರತಕ್ಕವರು. ಮಾನ್ಯ ಎಂ. ಪಿ. ಪ್ರಕಾಶ್ ಇದ್ದಾರೆ ಅನುಭವಸ್ಥರು ಮಾನ್ಯ ನಾಗೇಗೌಡರು ಎನ್.ಜಿ.ಇ.ಎಫ್ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಮಾತನಾಡಿರತಕ್ಕದ್ದು ನನಗೆ ಜ್ಞಾಪಕ ಇದೆ. ಇವತ್ತು ಅಲ್ಲಿ ತಯಾರು ಆಗುವಂತಹ ಪ್ರತಿ ಒಂದು ವಸ್ತು ಇಡೀ ಪ್ರಪಂಚದ ಯಾವುದೇ ದೇಶದಲ್ಲಿ ಮಾರುಕಟ್ಟೆ ಇರುವಂತಹದು. ಅಷ್ಟೊಂದು ಮಾರುಕಟ್ಟೆ ಇರಬೇಕಾದರೆ, ಅಷ್ಟೊಂದು ಒಳ್ಳೆಯ ವಸ್ತುಗಳು ಉತ್ಪನ್ನ ಆಗುತ್ತಿದೆ. ಮೋಟಾರುಗಳು ಇರಬಹುದು, ಜನರೇಟರ್ಸ್ ಇರಬಹುದು. ಟ್ರಾನ್ಸ್ ಫಾರ್ಮರ್ಸ್ ಇರ ಬಹುದು. ಇಷ್ಟೊಂದು ಒಳ್ಳೆಯ ಕಂಪನಿಯನ್ನು ಲಾಭದಾಯಕ ಆಗುವಂತೆ ಒಂದು ಐದು ವರ್ಷ ಪ್ರಾಮಾಣಿಕವಾಗಿರುವಂತಹ ಅಧಿಕಾರಿಯನ್ನು ಇಟ್ಟು ಅದನ್ನು ಲಾಭದಾಯಕವಾಗಿ ಮಾಡದೆ, ಅದು ಲಾಸ್ ಆಗುತ್ತಿದೆ ಎಂದು ಹೇಳಿ ತಾವು ನೌಕರರನ್ನು ಉಳಿಸುವುದಕ್ಕೋಸ್ಕರ ಈ ಜಮೀನನ್ನು ಮಾರುವುದಕ್ಕೆ ಪ್ರಾರಂಭ ಮಾಡಿದ್ದೀರಿ. ಹೀಗೆ ಜಮೀನು ಮಾರುವುದು ಪ್ರಾರಂಭ ಆದರೆ ನಾಳೆ ಮಿಷನರಿ ಮಾರಿ ಅವರಿಗೆ ಸಂಬಳ ಕೊಟ್ಟು ಮನೆಗೆ ಕಳಿಸುವಂತಹದು ಆಗುತ್ತಿದೆ. ಒಂದು ಸಾರಿ ಈ ಕಾರ್ಖಾನೆಯಿಂದ ಪ್ರಾರಂಭ ಆದರೆ ಕರ್ನಾಟಕ ರಾಜ್ಯದಲ್ಲಿರುವಂತಹ ಎಲ್ಲಾ ಪಬ್ಲಿಕ್ ಅಂಡರ್ ಟೇ ಕಿಂಗ್ ಸಂಸ್ಥೆಯ ಸ್ಥಿತಿಯೂ ಸಹ ಇಲ್ಲಿಗೇ ಬರಬಹುದು. ಆದಕ್ಕೋಸ್ಕರ ಇದನ್ನು ಮತ್ತೆ ಪುನರ್ ಪರಿಶೀಲನೆ ಮಾಡಿ. ದಯಮಾಡಿ ಯಾವ ಕಾರಣಕ್ಕೂ ಆ ರೀತಿಯ ಕೆಲಸ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಪಿ.ಜಿ. ಆರ್.ಸಿಂಧ್ಯ : ನಾನು ಸ್ಪಷ್ಟೀಕರಣ ಕೊಟ್ಟಿದ್ದೇನೆ. ಸರ್ಕಾರದ ಮುಂದೆ ಆ ರೀತಿಯ ಯಾವುದೇ ಪ್ರಸ್ತಾವನೆಯೂ ಇಲ್ಲ. ಆ ರೀತಿಯ ಪಿತೂರಿ ಯಾವುದೂ ಇಲ್ಲ. ಸಾರ್ವಜನಿಕ ಉದ್ದಿಮೆಗಳ ಸಮಿತಿಯಲ್ಲಿ ನೀವು ಎಲ್ಲಾ ವಿವರಗಳನ್ನು ಸರಿಸಿಕೊಂಡು ಸಲಹೆಗಳನ್ನು ಕೊಡಿ. ಹೀಗೆ ಹೀಗೆ ಮಾಡಿ ಎಂದು ಹೇಳಿ. ನಾವೆಲ್ಲದಕ್ಕೂ ಮುಕ್ತರಾಗಿದ್ದೇವೆ. ಅದನ್ನು ಮಾಡಿ ಬಿಟ್ಟು ನಾವು ಮಾಡತಕ್ಕದ್ದು ಬೇರೆ ಏನು ಇದೆ? ನಾವೇನು ಶಾಶ್ವತವಾಗಿ ಇಲ್ಲಿ ಕುಳಿತುಕೊಳ್ಳುತ್ತೇವಾ? ನಮಗೆ

ಗೊತ್ತಿಲ್ಲವಾ? ಆ ವಿಚಾರಗಳು. ತಾವು ಸಲಹೆ ಕೊಡಿ, ನಾವು ಕನ್ಸಿಡರ್ ಮಾಡೋಣ. ಪಾಯಿಂಟ್ ಏನು ಅಂದರೆ ಯಾವುದೂ ಆಗುವುದಿಲ್ಲವೆಂದು ಹೇಳಿ ಅವರ ಸರ್ಕಾರ ಇದ್ದಾಗಲೂ ಈ ರೀತಿ ಆಗಿತ್ತು, ನಿಮ್ಮ ಸರ್ಕಾರ ಇದ್ದಾಗಲೂ ಅದೇ ಆಗಿದೆ. ಇದನ್ನು ರನ್ ಮಾಡತಕ್ಕದ್ದು ಬಹಳಷ್ಟು ಇದೆ. ಅಲ್ಲಿರತಕ್ಕ ಮೆಷಿನರಿಗಳು obsdete ಆಗಿದೆ. ಟೆಕ್ನಾಲಜಿ ಅಬ್ಸಲೀಟ್ ಆಗಿದೆ. ಹೊಸ ಹೊಸದಾಗಿ ವಿಚಾರಗಳು ಬಂದಿವೆ.ಅದನ್ನೆಲ್ಲಾ ಮಾಡಿಸುವಂತಹ ಶಕ್ತಿ ಅವರಲ್ಲಿಲ್ಲ. ಈ ತರಹ ಸಮಸ್ಯೆಗಳು ಇವೆ. ಖಂಡಿತವಾಗಿ ಇವತ್ತಿಗೂ ಸಹ ನಮ್ಮ ಸರ್ಕಾರ ಓಪನ್ ಮೈಂಡ್ ಇಟ್ಟುಕೊಂಡಿದೆ. ನಮ್ಮ ಸರ್ಕಾರ ಮುಕ್ತವಾಗಿದೆ. ತಾವು ಯಾವುದೇ ಸಲಹೆಗಳನ್ನು ಕೊಟ್ಟರೂ ಸಹಿತ ನಾವು ಅದನ್ನು ಅಳವಡಿಸಿಕೊಂಡು ಸರಿ ಯಾವುದಕ್ಕೆ ತಯಾರು ಇದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಹೊಸ ಹೊಸ ಟೆಕ್ನಾಲಜಿ ಬಂದಾಗ ಅದನ್ನು ಉಪಯೋಗ ಮಾಡಿಕೊಳ್ಳದೇ ಇದ್ದರೆ ಯಾವುದಾದರೂ ಕಾರ್ಖಾನೆ ಉಳಿಯುವುದಕ್ಕೆ ಸಾಧ್ಯವಾ? ಅದಕ್ಕೆ ತಾನೇ 40 ಸಾವಿರ, 50 ಸಾವಿರ ರೂಪಾಯಿ ಖರ್ಚು ಮಾಡಿ ಒಬ್ಬ ಐಪಿಎಸ್, ಐಎಎಸ್ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿಕೊಡುವಂತಹದು ; ಅದಕ್ಕೆ ತಾನೇ ಎಷ್ಟು ಬಾರಿ ಎನ್‌ಜಿಎಫ್ ಅದನ್ನು ಉಳಿಸುವುದಕ್ಕೋಸ್ಕರ ವಿದೇಶಕ್ಕೆ ಟ್ರೆನಿಂಗ್‌ಗೆ ಅಧಿಕಾರಿಗಳು ಹೋಗಿ ಬಂದಿದ್ದಾರೆ? ಬಂದವರು ಅದನ್ನು ಲಾಭ ದಾಯಕವಾಗಿ ಮಾಡುವುದಕ್ಕೆ ಮಾಡಿದಂತಹ ಪ್ರಯತ್ನವೇನು? ದಯಮಾಡಿ ಆ ದಿಕ್ಕಿನಲ್ಲಿ ಏನಾದರೂ ಯೋಚನೆ ನಡೆದಿದ್ದರೆ, ಜಮೀನು ಮಾರಾಟ ಮಾಡುವಂತಹದು ಏನಾದರೂ ಇದ್ದರೆ ದಯಾಮಾಡಿ ಕೈ ಬಿಡಿ. ಹೊಸ ಟೆಕ್ನಾಲಜಿಯನ್ನು ಉಪಯೋಗಿಸಿ ಅದಕ್ಕೆ ಎಂದು ಹಣ ಕೊಟ್ಟು ಅದನ್ನು ಲಾಭದಾಯಕವಾಗಿ ನಡೆಸುವಂತಹ ಬಗ್ಗೆ ಚಿಂತನೆ ಮಾಡೋಣವೆಂದು ನಾನು ಸಲಹೆ ಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಸಿಂಧ್ಯರವರೇ, ನಾನು ತಮಗೆ ಹೇಳುತ್ತೇನೆ. ನನಗೇನು ನಿಮಗೇನು ನಿಮಗೆ ಕಳಕಳಿ ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತುವರ್ಗಾವರ್ಗಿ ಎಷ್ಟು ಆಗಿದೆ? ನೌಕರರ ವರ್ಗಾವರ್ಗಿಎಷ್ಟು ಆಗಿದೆ? ಕನ್ನಡ ಬಲ್ಲ ನೌಕರರ ವರ್ಗ ಎಷ್ಟು ಆಗಿದೆ-ತಂದಿರತಕ್ಕವರುಯಾರು? ಕೆ.ಎಸ್. ಜಗನ್ನಾಥನ್ ಅವರು ಎಲ್ಲಿಯವರು? ಯಾವ ಊರಿನವರು? ಅದಕ್ಕೆ ಸರಿಸಮಾನವಾದಂತಹ ವ್ಯಕ್ತಿ ನಮ್ಮಲ್ಲಿ ಇರಲಿಲ್ಲವಾ? ಅವರನ್ನು ಹೊರಗೆ ಹಾಕಿ ಅವರಿಗೆ ಸ್ವಯಂ ನಿವೃತ್ತಿ ಮಾಡಲು ಶೇಕಡಾ 80 ರಷ್ಟು ಹಣವನ್ನು ಕೊಟ್ಟು ಬಿಟ್ಟಿದ್ದೀರಿ. ಈಗ ಹೊಸದಾಗಿ ಅದೇ ಸ್ಥಳಕ್ಕೆ ಇನ್ನೊಬ್ಬನನ್ನು ತೆಗೆದುಕೊಂಡು ಬರುತ್ತೇವೆ. ಅವರಿಗೆ ಶೇಕಡಾ 100 ಭಾಗ ಕೊಡುತ್ತಿದ್ದೇವೆ. ಅಲ್ಲಿಗೆ ಶೇಕಡಾ 180 ಭಾಗ ಒಬ್ಬ ಅಧಿಕಾರಿಗೆ ಕೊಡುತ್ತೇವೆ. ಮತ್ತು ಜನಾರ್ಧನ ಶಾಸ್ತ್ರಿ. ಟಿ.ಎಚ್. ವಿಶ್ವೇಶ್ವರಯ್ಯ , ಎಸ್.ಬಿ.ಶೇಖರ್, ಚಂದ್ರಶೇಖರ್. ಇವರೆಲ್ಲಾ ಇವನ ಏಜೆಂಟರು. ಈ ವ್ಯವಸ್ಥಾಪಕ ನಿರ್ದೇಶಕರಾದಂತಹ ಶ್ರೀ ಘೋರೆಯವರ ಏಜೆಂಟರುಗಳು. ಇವರನ್ನೆಲ್ಲಾ ಇಲ್ಲಿಗೆ ಒಳಗೆ ತಂದು ಯಾರು ಪ್ರಾಮಾಣಿಕವಾಗಿ ಆ ನೂತನ ವಿದ್ಯುರ್ತ್ ಕಾರ್ಖಾನೆಗಾಗಿ ದುಡಿದಿದ್ದಾರೆ , ಅವರೆನ್ನೆಲ್ಲಾ ಹೊರಗೆ ಹಾಕತಕ್ಕಂಥ ತಂತ್ರಗಾರಿಕೆ ಏನು ಇದೆ? ಅದರ ಹಿಂದೆ ದೊಡ್ಡ ಪಿತೂರಿ ಇದೆ. ಮಾನ್ಯ ಸಿಂಧ್ಯರವರೇ, ನಮ್ಮ ರಾಜ್ಯದಲ್ಲಿ ಇದಕ್ಕಾಗಿ ಬಹಳಷ್ಟು ಜನ ಬೆವರು ಸುರಿಸಿದ್ದಾರೆ. ಈ ಕಾರ್ಖಾನೆಗಳನ್ನು ತರುವುದಕ್ಕೆ ಬೆವರು ಸುರಿಸಿದ್ದಾರೆ. ಶ್ರೀವಿಶ್ವೇಶ್ವರಯ್ಯನವರಿಂದ ಹಿಡಿದು ಕೆಂಗಲ್ ಹನುಮಂತಯ್ಯನವರಿಂದ ಹಿಡಿದು ಕೆ.ಸಿ. ರೆಡ್ಡಿ ಅವರಿಂದ ಹಿಡಿದು ನಾವು ಲೆಕ್ಕ ಹಾಕಿ ನೋಡಿದಾಗ ಅವರು ಕಟ್ಟಿದಂತಹ ಕಾರ್ಖಾನೆಗಳು ಇವತ್ತು ಗಾಳೀಪಟ, ಧೂಳೀ ಪಟ ಆಗುವುದಕ್ಕೆ ನಾವ್ಯಾರೂ

ಬಿಡಬಾರದು. ಇಂತಹ ಕಾರ್ಖಾನೆಗಳನ್ನು ಮತ್ತೆ ಕಟ್ಟುವುದಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ. ಇಂತಹ ಕಾರ್ಖಾನೆಗಳನ್ನು ಸ್ಥಾಪನೆ ಮಾಡಬೇಕು ಎಂದರೆ ಅನೇಕ ತಪಸ್ಸುಗಳನ್ನು ಮಾಡಬೇಕಾಗುತ್ತದೆ. ಅನೇಕ ಪುರಾಣಗಳನ್ನು ಮಾಡಬೇಕಾಗುತ್ತದೆ. ಆದ್ದರಿಂದ ಈ ಕಾರ್ಖಾನೆಯನ್ನು ಉಳಿಸುವುದರಲ್ಲಿ ಪ್ರಯತ್ನ ಆಗಬೇಕು. ತಮಗೆ ನೇರವಾಗಿ ಹೇಳುತ್ತೇನೆ. ಈ ಅಧಿಕಾರ ತಿಂಗಳಿಗೆ ಬರೇ ಟೆಲಿಫೋನ್, ದಿನಪತ್ರಿಕೆ ಮತ್ತಿತರ ವಿಷಯಗಳಿಗಾಗಿ ಒಂದು ತಿಂಗಳಿಗೆ 50 ಸಾವಿರ ರೂಪಾಯಿ ಖರ್ಚು.ಇವರ ಅತ್ಯಂತ ವ್ಯವಸ್ಥೆಗೆ ಐದು ಕಾರುಗಳು. ಯಾರಿಗೋಸ್ಕರ? ಬೆವರು ಸುರಿಸಿ ಅಲ್ಲಿ ಬೆನ್ನು ಮೂಳೆ ಮುರಿದು ನೌಕರರು ಬಿದ್ದಿದ್ದಾರೆ. ಅವರನ್ನು ಕೇಳುವವರು ಇಲ್ಲ. ಅವರನ್ನು ಧೂಳೀ ಪಟ ಮಾಡುತ್ತಿದ್ದೇವೆ. ಇವತ್ತು ನಾವು ಇವರನ್ನು ಮೆರೆಸಿ ಎಲ್ಲಿಗೆ ನಾವು ಹೋಗಬೇಕೆಂದು ಮಾಡಿದ್ದೇವೆ. ನೂತನ ವಿದ್ಯುಚ್ಛಕ್ತಿ ಕಾರ್ಖಾನೆಯನ್ನು ಉಳಿಸುವುದಕ್ಕೆ ಸರ್ಕಾರ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಬೇಕು. ಶ್ರೀ ಐತಾಳ್ ಅವರನ್ನು ತಂದಿದ್ದಾರೆ. ವೈ.ಎಸ್. ಆನೆಗೊಂದಿಯನ್ನು ತಂದಿದ್ದಾರೆ. ರೋಗಗ್ರಸ್ಥ ಕಾರ್ಖಾನೆಗಳಿಗೆ ಮೇಲ್ಕಂಡ ಏಳು ಮಂದಿ ಗುತ್ತಿಗೆದಾರರನ್ನು ತರತಕ್ಕ ವಶ್ಯಕತೆ ಏನು ಇತ್ತು? ನೀವು ಹೇಳುತ್ತೀರಿ, ಮೊದಲು ರೋಗಗ್ರಸ್ಥ ಕಾರ್ಖಾನೆ ಎಂದು. ಕನ್ನಡಿಗರನ್ನು ನಿವೃತ್ತಿ ಮಾಡಿ ಹೊರಗೆ ಕಳುಹಿಸುತ್ತೀರಿ. ಈ ಏಳು ಜನ ಖದೀಮರು ಇವರು. ಅವರ ಇತಿಹಾಸವನ್ನು ನಾನು ಹೊರಗಡೆ ನೋಡಿದ್ದೇನೆ. ಇವರನ್ನು ತಂದು ತಾವು ಅಲ್ಲಿ ನೇಮಿಸುವುದಾದರೆ ಪರಿಸ್ಥಿತಿ ಏನು? ಈ ಸನ್ಮಾನ್ಯ ಶ್ರೀ ಘೋರೆ ಅವರಿಗೆ ಒಂದಕ್ಷರ ಕನ್ನಡ ಬರುವುದಿಲ್ಲ. ಈ ವರ್ಷದಲ್ಲಿ ನಮ್ಮ ಸರ್ಕಾರದ ಇಲಾಖೆಯ ಒಬ್ಬ ಅಧಿಕಾರಿ. ಬಹಳ ವರ್ಷದಿಂದ ಇಲ್ಲಿದ್ದಾರೆ. ಅವರಿಗೆ ಒಂದು ಕನ್ನಡ ಅಕ್ಷರ ಬರುವುದಿಲ್ಲ. ಕನ್ನಡದ ಬಗ್ಗೆ ಅವರಿಗೆ ಅಭಿಮಾನ ಇಲ್ಲ. ಕನ್ನಡ ಕಾರ್ಮಿಕರನ್ನು ಕಾಲ ಕಸಕ್ಕಿಂತ, ತನ್ನ ಪಾದರಕ್ಷೆಗೆ ಸಮ ಎನ್ನತಕ್ಕ ಮಾತನ್ನು ಆಡತಕ್ಕ ಘೋರೆಯವರು ಈ ಕಾರ್ಖಾನೆಯನ್ನು ಉಳಿಸುವುದಕ್ಕೆ ಸಾಧ್ಯಾವಾ? ಈ ಕಾರ್ಖಾನೆಯ ಪರಿಸ್ಥಿತಿ ಏನು? ಅದಕ್ಕೆ ಕರ್ನಾಟಕ ಸರ್ಕಾರ ಇವತ್ತು ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡಬೇಕಾಗಿದೆ. ಇದಕ್ಕೆ ನಾವಂತೂ ಈ ಕಾರ್ಖಾನೆಯನ್ನು ಮಾರುವುದಕ್ಕೆ ಬಿಡುವುದಿಲ್ಲ. ಈ ಕಾರ್ಖಾನೆಯನ್ನು ಉನ್ನತ ಮಟ್ಟಕ್ಕೆ ಬೆಳೆಸಬೇಕು ಎಂದು ನಾವೆಲ್ಲರೂ ಒಮ್ಮತದಿಂದ ಹೋರಾಟ ಮಾಡತಕ್ಕ ರೀತಿಯಲ್ಲಿ ಹೋಗುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇವರು ಮಾಡಿರತಕ್ಕಆಸ್ತಿ ವಿವರಗಳ ಬಗ್ಗೆ ಸರ್ಕಾರ ನೇರವಾಗಿ ತನಿಖೆ ಮಾಡಲಿ. ಇವರಿಗೆ ಇರತಕ್ಕ ಮನೆಗಳು,ಸೈಟ್‌ಗಳು.ಇವರಿಗೆ ಬರತಕ್ಕ ಬಾಡಿಗೆ. ತನಿಖೆ ಮಾಡಲಿ. ಇಂದಿರಾ ನಗರದಲ್ಲಿ ಈ ವ್ಯಕ್ತಿ ಬಗ್ಗೆ ತನಿಖೆ ನಡೆಯಲಿ ಎಂದು ನಾನು ಹೇಳುತ್ತಿದ್ದೇನೆ. ಇದರ ಬಗ್ಗೆ ಮಾತನಾಡುತ್ತಿಲ್ಲ. ಅಲ್ಲಿರತಕ್ಕ ಕಾರ್ಮಿಕರನ್ನೆಲ್ಲಾ ಬೀದಿಗೆ ತಳ್ಳಿ ವರ್ಗ ಮಾಡಿ ಅವರನ್ನು ಹಿಂಸೆ ಮಾಡಿ, ಅನೇಕ ಜನ ಆತ್ಮಹತ್ಯೆ ಮಾಡಿಕೊಳ್ಳತಕ್ಕ ಪರಿಸ್ಥಿತಿ ನಿರ್ಮಾಣ ಆಗಿದೆ. ಆದ್ದರಿಂದ ನಾನು ಸರ್ಕಾರದ ಕೈಗಾರಿಕೆ ನೀತಿ ಏನು ಎಂದು ಕೇಳುತ್ತೇನೆ. ಸರ್ಕಾರದ ಕೈಗಾರಿಕಾ ನೀತಿ ಸ್ಪಷ್ಟ ಆಗಬೇಕು. ಸರ್ಕಾರದ ಕೈಗಾರಿಕಾ ನೀತಿ ಎಂದರೆ ಇರತಕ್ಕ ಎಲ್ಲಾ ಕೈಗಾರಿಕೆಗಳನ್ನು ಧೂಳೀಪಟಮಾಡಿ, ಆ ಕಾರ್ಮಿಕರನ್ನೆಲ್ಲಾ ಸಮಾಧಿ ಮಾಡಿ, ಆ ಸಮಾಧಿಯ ಮೇಲೆ ಬೇರೆ ಬೇರೆ ಖಾಸಗಿ ಕಾರ್ಖಾನೆಯವರು, ಬೇರೆ ಬಾಂಬೆ, ಲಕ್ನೋ, ಆ ಕಡೆಯಿಂದ ಬಂದಂತಹ ಖದೀಮರಿಗೆ ಈ ಕಾರ್ಖಾನೆಗಳನ್ನು ಮಾರಿ ಅವರಿಗೆ ದಾನ ಕೊಟ್ಟು ಕನ್ನಡಿಗರ, ಕನ್ನಡ ಕಾರ್ಮಿಕರ ಸಮಾಧಿಯ ಮೇಲೆ ನರ್ತನೆ ಮಾಡುವುದಕ್ಕೆ ನಾವು ಹೊರಟ್ಟಿದ್ದೇವಾ? ಇದಲ್ಲ. ಇದಕ್ಕಾಗಿ ಕರ್ನಾಟಕದಲ್ಲಿ ಕೈಗಾರಿಕಾ ನೀತಿಯ ಬಗ್ಗೆ ಒಂದು ಸ್ಪಷ್ಟ ನೀತಿ ಬೇಕು. ಏನು ಕೈಗಾರಿಕಾ ನೀತಿ ? ಏನೂ ಇಲ್ಲ. ದಿವಾಳಿ ನೀತಿ. ಕರ್ನಾಟಕದ

ಕೈಗಾರಿಕಾ ನೀತಿ ಎಂದರೆ ದಿವಾಳಿ ನೀತಿ. ಮೈಸೂರಿನ ಸೋಪ್ ಕಾರ್ಖಾನೆ ನಮ್ಮ ಮಾನ್ಯ ಪ್ರಕಾಶ್‌ಅವರು ಅಧಿಕಾರ ವಹಿಸಿಕೊಂಡ ಮೇಲೆ ಸ್ವಲ್ಪ ಏನೋ ಜೀವ ಬಂದಿದೆ. ಅದಕ್ಕಾಗಿ ಅವರಿಗೆ ಅಭಿನಂದಿಸುತ್ತೇನೆ. ಸ್ವಲ್ಪ ಲಾಭದಲ್ಲಿ ಬಂದಿದೆ. ಮೈಸೂರು ಸ್ಯಾಂಡಲ್ ಸೋಪ್ ಇದೆಯಲ್ಲಾ, ಈಗ ಅವರು ಸ್ವಲ್ಪ ಗಂಧದ ಕಡ್ಡಿ ಮಾರುವುದಕ್ಕೆ ಹೊರಟಿದ್ದಾರೆ. ಬೇರೆ ಗುಲಾಬಿ ಸೋಪ್ ಮಾರುವುದಕ್ಕೆ ಹೊರಟಿದ್ದಾರೆ. ಯಾವುದೋ ಒಂದು ರೀತಿಯಲ್ಲಿ ಅದನ್ನು ಉಳಿಸತಕ್ಕ ಶಕ್ತಿ ಅವರಿಗೆ ಬಂದಿದೆ. ಅದನ್ನು ನೋಡಿ ಸಂತೋಷ ಪಡುತ್ತೇನೆ. ಇವತ್ತು ನಮ್ಮಲ್ಲಿ ಪರಿಣಿತರಾದಂತಹ ದಕ್ಷ ಅಧಿಕಾರಿಗಳನ್ನು ಹಾಕಿದರೆ ಈ ಕಾರ್ಖಾನೆಗಳನ್ನು ಮುಚ್ಚತಕ್ಕ ವ್ಯವಸ್ಥೆ ಬರುವುದಿಲ್ಲ. ಕೋಟ್ಯಾಂತರ ರೂಪಾಯಿಗಳನ್ನು ಹೊಡೆಯತಕ್ಕಂಥ ಒಂದು ಕಾರಸ್ಥಾನವೇ ನಿರ್ಮಾಣವಾಗಿದೆ.

ಶ್ರೀ ಪಿ.ಜಿ.ಆರ್ ಸಿಂಧ್ಯ : ಮಾನ್ಯ ಉಪಾಧ್ಯಕ್ಷರೆ, ಸುರತ್ಕಲ್ ಗಲಭೆ ಬಗ್ಗೆ ಸದನದಲ್ಲಿ ಒಂದು ಹೇಳಿಕೆ ನೀಡಬೇಕೆಂದು ನಾನು ಮೂರು ದಿವಸಗಳಿಂದ ಕಾದಿದ್ದೇನೆ. ಈಗ ಸದನದಲ್ಲಿ ವಿರೋಧ ಪಕ್ಷದ ನಾಯಕರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆ ಮತ್ತು ವೀರಪ್ಪ ಮೊಯಿಲಿಯವರು ಇರುವುದರಿಂದ ಹೇಳಿಕೆ ಕೊಡಲು ಅವಕಾಶ ಕೊಡಬೇಕು.

ಉಪಾಧ್ಯಕ್ಷರು : ನಾನು ಈಗ ಸದನವನ್ನು ಭೋಜನ ವಿರಾಮಕ್ಕೆ ಮುಂದೂಡುತ್ತೇನೆ. ಪುನಃ ಸಮಾವೇಷಗೊಂಡಾಗ ತಾವು ಹೇಳಿಕೆ ಕೊಡಬಹುದಲ್ಲಾ.

ಶ್ರೀ ಪಿ.ಜಿ. ಆರ್. ಸಿಂಧ್ಯ : ಆಗಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ : ಅವರು ಆ ಕುರಿತ ಹೇಳಿಕೆ ಕೊಟ್ಟ ನಂತರ ವಿಷಯ ಅಲ್ಲಿಗೇ ನಿಲ್ಲುವುದಿಲ್ಲ, ನಾವು ಅದರ ಬಗ್ಗೆ ಚರ್ಚಿಸಬೇಕಾಗುತ್ತದೆ ಮತ್ತು ಏನು ವರದಿಕೊಟ್ಟಿದ್ದಾ ರೆಂದು ನೋಡಬೇಕಾಗುತ್ತದೆ.

ಉಪಾಧ್ಯಕ್ಷರು: ಈಗ ಸದನವನ್ನು ಮುಂದೂಡುತ್ತಿದ್ದೇನೆ ಸದನವು ಪುನಃ ಮಧ್ಯಾಹ್ನ 3.30 ಗಂಟೆಗೆ ಸಮಾವೇಶಗೊಳ್ಳಲಿದೆ.

(ಸದನವು ಮಧ್ಯಾಹ್ನ 2 ಗಂಟೆಗ 11 ನಿಮಿಷಕ್ಕೆ
ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3.30 ಗಂಟೆಗೆ
ಸಮಾವೇಶಗೊಳ್ಳಲು ತೀರ್ಮಾನಿಸಿತು)

(ಸದನವು ಮಧ್ಯಾಹ್ನ 3.40ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರು ಶ್ರೀ ಚಂದ್ರಶೇಖರ ರೆಡ್ಡಿ ದೇಶಮುಖ್ ಮದನಾರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)